
# ಅಪರಂಜಿ

ತಿಳಿನಗೆಯ ಕಾರಂಜಿ

ಆಗಸ್ಟ್ 2021




ಬಿಡಿ ಪ್ರತಿ: ರೂ. 10/-

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 38**

**ಸಂಚಿಕೆ - 11**

**ಆಗಸ್ಟ್ - 2021**

## ಈ ಸಂಚಿಕೆಯಲ್ಲಿ.....

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮನಮ್ಮಲ್ಲಿ | ಶಿವಕುಮಾರ್ | 3 |
| ಕೊರೋನಾ ಕಾಲದ ಖರೀದಿ | ಕೆ.ಎನ್. ಮಹಾಬಲ | 6 |
| ಜಾತಕ ಫಲ | ವಸುಮತಿ ಉಡುಪ | 8 |
| ಎಡಬಿಡಂಗಿ | ಕೆ.ಎಸ್. ಶ್ರೀಶೈಲನ್ | 11 |
| ಮೋಳೆಯ ಮಹತ್ವ | ಜಿ.ವಿ.ನಿರ್ಮಲ | 13 |
| ಓನರ್ ಟೆನಂಟ್ ಸಂಬಂಧ | ಇ.ಆರ್. ರಾಮಚಂದ್ರನ್ | 16 |
| ಅಮರ್ ಶೋನಾರ್ ಬಾಂಗ್ಲಾ | ಜಯಶ್ರೀ ದೇಶಪಾಂಡೆ | 20 |
| ಮರೆಗುಳಿ ತಾತ | ಎಚ್. ಡುಂಡಿರಾಜ್ | 23 |
| ಮತ್ತೆ ರಾಯರು ಬಂದರು | ಬೇಲೂರು ರಾಮಮೂರ್ತಿ | 24 |
| ಒಂದರೆಗಳಿಗೆ... | ಪುಷ್ಪಲತಾ ಜಿ.ಟಿ. | 27 |
| ಕೊರೊನಾ ಟೈಮ್ಸ್ | ಕುಮುದಾ ಪುರುಷೋತ್ತಮ್ | 28 |
| ಅನುರೂಪ ದಾಂಪತ್ಯ | ಟಿ.ಎಸ್. ಶ್ರವಣ ಕುಮಾರಿ | 29 |
| ತುಂತುರು | ದಂನಆ | 33 |
| ಬೋಂಡವೂ ಮಳೆಯೂ | ಎ. ಎಸ್. ಚಂದ್ರಪ್ರಭಾ | 35 |
| ಯಕ್ಷಪ್ರಶ್ನೆ | ಗೌತಮ | 37 |
| ಒಂದು ಪ್ಯಾಂಟಿನ ಕಥೆ | ಕೆ.ಎಸ್. ಸೋಮೇಶ್ವರ | 39 |

ಮುಖಪುಟ ವ್ಯಂಗ್ಯಚಿತ್ರ:
**ಇಂಟರ್‌ನೆಟ್ ಕೃಪೆ**

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanjiaparanji@gmail.com ಮೊಬೈಲ್:9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: beluruamamurthy@gmail.com

**For Online payment of subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

**●ಪ್ರಕಾಶ್**

"ಕಾರ್ಯಕರ್ತರೇ ಪಕ್ಷದ ಶಕ್ತಿ"– ದಿನಪತ್ರಿಕೆಯಲ್ಲಿ ಮುಖಪುಟ

**ಶ್! ಗಟ್ಟಿಯಾಗಿ ಹೇಳಬೇಡಿ !!!**

* * *

"ದ್ರೋಹ ಬಗೆದವರು ಪಕ್ಷಕ್ಕೆ ಬೇಡ!" –ಕಾಂಗ್ರೆಸ್ ಮುಖಂಡರು

**ಮಾಡದಿರುವರನ್ನು ಎಲ್ಲಿಂದ ಹುಡುಕೋಣ** ?!?

* * *

ಗಾಂಧಿ ನಗರದಲ್ಲಿ 640 ಕೋಟಿ ಅಕ್ರಮ – ಸುದ್ದಿ

**ಮಹಾತ್ಮರ ಆತ್ಮ ಮರುಗಿತಂತೆ !!**

* * *

"ಪಂಚಾಯ್ತಿ ಚುನಾವಣೆಗೆ ಸಜ್ಜಾಗಿ "– ಮಾಜಿ ಪ್ರಧಾನಿ

**"ಅದಮ್ಯ ಚೇತನ " ಎಂದರೆ ಇದೇ ಇರಬೇಕು !!**

* * *

"ದುರಂತನಾಯಕ " ಎಂದೇ ಪ್ರಖ್ಯಾತರಾಗಿದ್ದ

**ದಿಲೀಪ್ ಕುಮಾರ್ ಅವರ ನೆನಪು ಚಿರಾಯುವಾಗಲಿ !!**

* * *

ಕಾಂಗ್ರೆಸ್ ಚಿಹ್ನೆಯಾದ ಹಸ್ತದಲ್ಲಿ 'ವಿಧಿ ರೇಖೆ' ಇಲ್ಲವಲ್ಲ ಅಂತ

ಅಪರಂಜಿ ಕಳವಳ ಪಟ್ಟಳಂತೆ !!

* * *

ಕಾಳಸಂತೆಗೆ ಸಾಗಿಸುತ್ತಿದ್ದ ರಾಗಿ ವಶಕ್ಕೆ !– ಸುದ್ದಿ

**" ಭ್ರಷ್ಟರಾಗಿ" ಅನ್ನಬಹುದು ಈಗ !!**

* * *

ಭಾರತ ವಿರುದ್ಧ ಸರಣಿಯಿಂದ 89 ಕೋಟಿ ನಿರೀಕ್ಷೆಯಲ್ಲಿ

ಶ್ರೀಲಂಕಾ – ಕ್ರೀಡಾ ಸುದ್ದಿ

**ಗಟ್ಟಿಯಾಗಿ ಹೇಳಬೇಡಿ, ಚೈನಾದವರು ಕೇಳಿಸಿಕೊಂಡಾರು !!**

* * *

# ನಮ್ಮ ನಿಮ್ಮಲ್ಲಿ

♦ ಶಿವಕುಮಾರ್

"ಸೆರೆಂಡಿಪಿಟಿ" ಎಂದರೆ ಅಕಸ್ಮಾತ್ತಾಗಿ ಒದಗಿ ಬರುವ ಒಂದು ಸಂತಸ ತರುವಂತಹ ಘಟನೆ ಎಂದು ಶಬ್ದಕೋಶ ಹೇಳುತ್ತದೆ. ಈಚೆಗೆ ಅಂತಹದ್ದೊಂದು ಅನುಭವ ನನಗಾಯಿತು. ಆ ಸಂತಸವನ್ನು ನಿಮ್ಮೊಂದಿಗೆ ಹಂಚಿಕೊಳ್ಳುವ ಪ್ರಯತ್ನ ಇದು.

ಹಲವು ದಿನಗಳ ಹಿಂದೆ ಶ್ರೀಮತಿ ರೂಪಾ ಪೈ ನನ್ನನ್ನು ಸಂಪರ್ಕಿಸಿ, "ಅಂಕಲ್, ನನ್ನ ಆಪ್ತ ಮಿತ್ರರೊಬ್ಬರು ಒಂದು ಪುಸ್ತಕ ಬರೆದಿದ್ದಾರೆ. ಅದಿನ್ನೂ ಕರಡು ಪ್ರತಿಯ ಹಂತದಲ್ಲಿದೆ. ನೀವು ಅದನ್ನು ಓದಿ, ಅಭಿಪ್ರಾಯ ತಿಳಿಸುವುದಕ್ಕಾಗುತ್ತದೆಯೇ? " ಅಂತ ಕೇಳಿದಳು. ರೂಪಾ ನನ್ನ ಆಪ್ತ ಮಿತ್ರ (ಈಗ ನಮ್ಮನ್ನು ಅಗಲಿರುವ) ರಾಜಣ್ಣನ ಮಗಳು. ಹಿಂದೊಮ್ಮೆ ಅವಳು ಬರೆದಿರುವ "ಗೀತಾ ಫಾರ್ ಚಿಲ್ಡ್ರನ್" ಪುಸ್ತಕವನ್ನು ಇದೇ ಅಂಕಣದಲ್ಲಿ ಹಾಡಿ ಹೊಗಳಿದ್ದೆ. ಅದನ್ನು ಕನ್ನಡಕ್ಕೆ ತರ್ಜುಮೆಯನ್ನೂ ಸಹಾ ಮಾಡಿದ್ದೆ. ಆದರೂ ಹಿಂದು ಮುಂದು ತಿಳಿಯದೇ ಕರಡು ಪ್ರತಿಗಳನ್ನು ಓದುವ ಆಶ್ವಾಸನೆ ಕೊಡುವುದು ಸ್ವಲ್ಪ ಅಪಾಯಕಾರಿ ಕೆಲಸವೇ. ಆದರೆ ರೂಪಾ ಹೇಳಿದ ಮೇಲೆ ಇಲ್ಲ ಅನ್ನುಕ್ಕಾಗುತ್ತದೆಯೇ? "ಸರಿ, ಓದ್ತೀನಿ. ಯಾರು ಅವರು ನಿನ್ನ ಮಿತ್ರರು?" ಅಂತ ಪ್ರಶ್ನಿಸಿದೆ. "ಅವರ ಹೆಸರು ಉಮರ್ ಟೀಕೆ. ತುಂಬಾ ಒಳ್ಳೆಯವರು. ನನ್ನ ಮಗಳು ಚೇತನಾ ಅವರ ಮಗಳ ಕ್ಲಾಸ್‌ಮೇಟ್. ಉಮರ್ ಅವರು ಅಣ್ಣ ರಹೀಮ್ ಬಗ್ಗೆ ಬರೆದಿರುವ ಪುಸ್ತಕ ಇದು. ಓದುಕ್ಕೆ ಒಪ್ಪಿದ್ದಕ್ಕೆ ತುಂಬಾ ಥ್ಯಾಂಕ್ಸ್." ಅಂದಳು.

ಅದಾದನಂತರ ಒಂದು ಧಡೂತಿಯಾದ ಲಕ್ಕೋಟೆ ನನಗೆ ತಲುಪಿತು. ಸ್ಪೈರಲ್ ಬೈಂಡ್ ಮಾಡಿದ್ದ ನಾಲ್ಕು ಪುಸ್ತಕಗಳು ಅದರೊಳಗೆ ಅಡಗಿದ್ದವು. ಓದಲು ಅನುಕೂಲವಾಗುವಂತೆ ಆ ಕರಡು ಪ್ರತಿಯನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದ್ದರು. ಯಾವುದಾದರೂ ಕಷ್ಟಸಾಧ್ಯವಾದ, ಅಷ್ಟೇನೂ ಇಷ್ಟವಿಲ್ಲದ ಆದರೆ ಮಾಡಲೇ ಬೇಕಾದ ಕೆಲಸ ಇದಿರಾದರೆ, ಮೊದಲು ಮಾಡಿ ಮುಗಿಸಿಬಿಡುವುದು ಮೊದಲಿನಿಂದ ನನ್ನದೊಂದು ಅಭ್ಯಾಸ. ಸುದೀರ್ಘವಾದ ಉಸಿರೆಳೆದುಕೊಂಡು ಓದಲು ಪ್ರಾರಂಭಿಸಿಯೇ ಬಿಟ್ಟೆ.

ಪುಸ್ತಕದ ಹೆಸರು, "ಕಾಡುವ ನೆನಪುಗಳು". ಕರಡನ್ನು ಓದಿ ಮುಗಿಸಿದ ಮೇಲೆ, ಸುಮ್ಮನೇ ಗಾಬರಿಪಟ್ಟೆ ಅನ್ನಿಸಿತು. ಪುಸ್ತಕ ಚೆನ್ನಾಗಿ ಓದಿಸಿಕೊಂಡು ಹೋಯಿತು. ಉಮರ್ ಅವರ ಪ್ರತಿಭಾವಂತ ಅಣ್ಣ ರಹೀಮ್ ಟೀಕೆಯವರ ಜೀವನ ಚರಿತ್ರೆ, ಪುಸ್ತಕದ ಮುಖ್ಯ ವಸ್ತು. ರಹೀಮ್ ತಮ್ಮ ಅರುವತ್ತೈದನೆಯ ವಯಸ್ಸಿನಲ್ಲಿ ಕ್ಯಾನ್ಸರ್ ರೋಗಕ್ಕೆ ತುತ್ತಾಗಿ ನಿಧನರಾದಾಗ ಉಮರ್‌ಗೆ ಅದೊಂದು ಭರಿಸಲಾಗದ ಆಘಾತವಾಗಿತ್ತು. ಆ ಅಳಲಿನ ಉಪಶಮನಕ್ಕಾಗಿಯೋ ಅನ್ನುವಂತೆ ಬಹು

ಆಪ್ತತೆಯಿಂದ ಉಮರ್ ತಮ್ಮ ಅಣ್ಣನ ಚಿತ್ರಣವನ್ನು ಇಲ್ಲಿ ನಿರೂಪಿಸಿದ್ದಾರೆ. ಈ ಪುಸ್ತಕವನ್ನು "ಸಹೋದರರಿಬ್ಬರ ಜೀವಯಾತ್ರೆಯ ಅಪೂರ್ವ ಗಾಥೆ" ಎಂದು ಸಂಕ್ಷಿಪ್ತವಾಗಿ ಹೇಳಬಹುದು. ಕರಾವಳಿಯ ಅವಿಭಕ್ತ ಕುಟುಂಬವೊಂದು ಜೀವನದ ಏಳು ಬೀಳುಗಳನ್ನು ಕೆಚ್ಚಿನಿಂದ ಇದುರಿಸಿ, ತಮ್ಮ ಸಂಸ್ಕೃತಿಯ ಶ್ರೀಮಂತಿಕೆಯನ್ನು ಓದುಗರಿಗೆ ಬಿಚ್ಚಿಟ್ಟಿರುವ ಈ ಕಥಾನಕವು ಕನ್ನಡ ಸಾಹಿತ್ಯಕ್ಕೆ ಒಂದು ಅನನ್ಯ ಕೊಡುಗೆಯಾಗಬಹುದು ಅಂತ ಅನ್ನಿಸುತ್ತದೆ.

ಕಥೆಯ ಕಾರ್ಯ ಕ್ಷೇತ್ರ ಬಹುಮಟ್ಟಿಗೆ ದಕ್ಷಿಣಕನ್ನಡ ಜಿಲ್ಲೆ. ಬಜಪೆ, ಜೋಕಟ್ಟೆ, ಮಾಡಲ ಇವುಗಳ ವಿವರಣೆಯನ್ನು ಓದಿದಾಗ ದಕ್ಷಿಣ ಕನ್ನಡದ ಪ್ರಕೃತಿ ಸಿರಿಯೇ ಕಣ್ಣಮುಂದೆ ನಿಂತಂತಾಗುತ್ತದೆ. ಮಾಡಲದ ಜಮೀನಿನ ವರ್ಣನೆಯನ್ನು ಇಲ್ಲಿ ನೋಡಿ.

" ಈ ಮಾಡಲದ ನಮ್ಮ ಜಮೀನು ಬಹಳ ರಮಣೀಯವಾದಂತಹ ಒಂದು ಜಾಗ. ಇದನ್ನೊಂದು ಪುಟ್ಟ ದ್ವೀಪ ಅಂತಲೇ ಕರೆಯಬಹುದು. ಪಶ್ಚಿಮದಲ್ಲಿ ಒಂದು ಕಿರಿದಾದ ಮಣ್ಣಿನ ರಸ್ತೆ ಬಿಟ್ಟರೆ ಮೂರೂ ಸುತ್ತಲೂ ಹೊಳೆಗಳು. ಇವೆಲ್ಲಾ ನೇತ್ರಾವತಿಯ ಉಪನದಿಗಳು. ಸರಿಸುಮಾರು ಎಲ್ಲಕಡೆಗಳಿಂದಲೂ ಅವು ಈ ಜಮೀನನ್ನು ಆವರಿಸಿದ್ದವು. ನಾವು ಬಜಪೆಯ ಮನೆಯಿಂದ ಇಲ್ಲಿಗೆ ಬರಬೇಕಿದ್ದರೆ ಜೋಕಟ್ಟೆಯವರೆಗೆ ಬಂದು ಅಲ್ಲಿಂದ ದೋಣಿಯ ಮೂಲಕವೇ ಬರಬೇಕಿತ್ತು. ನಮ್ಮದೇ ದೋಣಿ ಇತ್ತು. ಜೋಕಟ್ಟೆಯ ತುತ್ತತುದಿಗೆ ಬಂದು ಜೋರಾಗಿ ಕರೆದರೆ, ಆ ಕಡೆಯಿಂದ ನಮ್ಮ ಕೆಲಸದ ಆಳು ಅಣ್ಣಪ್ಪ ದೋಣಿ ತೆಗೆದುಕೊಂಡು ಬಂದು ನಮ್ಮನ್ನು ಕರೆದುಕೊಂಡು ಹೋಗುತ್ತಿದ್ದರು. ಮನೆಯ ಜಗುಲಿಯಿಂದ ಹಿಡಿದು ಜಮೀನಿನ ಯಾವ ಭಾಗದಲ್ಲಿ ನಿಂತರೂ ಕಣ್ಣೆಟಕುವಷ್ಟು ದೂರವೂ ಪ್ರಶಾಂತವಾದ ನೀರು ಅಥವಾ ಹಚ್ಚ ಹಸುರಿನ ಜಮೀನುಗಳು. ಜೊತೆಗೆ ತರಹಾವಾರು ಹಕ್ಕಿಗಳ ಕಲರವ ........."

ಈ ಪುಸ್ತಕದ ಮುಖ್ಯ ಪಾತ್ರವಾದ ರಹೀಮರ ಆದರ್ಶಗಳು, ಮೃದು ಅಂತಃಕರಣ, ಜಾತ್ಯತೀತ ನಿಲುವು ಮತ್ತು ತಳ ಕಾಣದ ಔದಾರ್ಯ ಇವುಗಳು ಈ ಪುಸ್ತಕದ ಜೀವಾಳ. ರಹೀಮರ ಸಾಹಿತ್ಯ ಪ್ರತಿಭೆ ಅಸದೃಶ. ಅವರು ರಚಿಸಿರುವ ಹಲವಾರು ಕವನಗಳು ಮತ್ತು ಕಥೆಗಳು ಈ ಪುಸ್ತಕದಲ್ಲಿ ಅಡಕವಾಗಿವೆ. ರಹೀಮ್ ಬರೆದ "ಕೊಳಲು ಮತ್ತು ಪಾಂಚಜನ್ಯ" ಎಂಬ ಕವನವನ್ನು ಉದಹರಿಸಿ ಈ ಪ್ರಕಟಣೆಗೆ ಮುಂಚಿನ ಪರಿಚಯವನ್ನು ಮುಗಿಸುವೆ.

**ಕೊಳಲು ಮತ್ತು ಪಾಂಚಜನ್ಯ**

ಗೋಕುಲದಿಂದ ಹೊರಟ ಗೋವಿಂದನಂದು
ಕೊಳಲನ್ನು ಕೆಳಗಿಟ್ಟು
ಪಾಂಚಜನ್ಯ ಕೈಗೆತ್ತಿಕೊಂಡ –
ಕೊಳಲು ಪ್ರೇಮದ ಸಂಕೇತವಾದರೆ
ಪಾಂಚಜನ್ಯ ಯುದ್ಧದ ಸಂಕೇತವೆಂದು ತಿಳಿದೂ

ಗೋವಿಂದಾ ಕುರುಕ್ಷೇತ್ರದ ಈ ರಣಭೂಮಿಯಲಿ
ನೀನಂದು ಕೊಳಲನೇ ನುಡಿಸಿದ್ದರೂ ಸಾಕಿತ್ತು
ದಾಯಾದಿ ವೈರತ್ವ, ಪ್ರೇಮದ ಸುಧೆಯಾಗಿ
ಹರಿಯುತ್ತಿತ್ತು.

ಬದಲಿಗೆ ನೀನು ಅದೇಕೆ ಪಾಂಚಜನ್ಯ ಕೈಗೆತ್ತಿಕೊಂಡು
ಕೌರವ ನಾಶಕ್ಕೆ ಮುಂದಾದೆ ?
ಅದೇಕೆ ಪಾರ್ಥನಿಗೆ ಸಾರಥಿಯಾಗಿ
ಗುರು–ಹಿರಿಯರ ಸಂಹಾರಕ್ಕೆ ಕಾರಣನಾದೆ?

ಗೀತಾಚಾರ್ಯ, ನನಗೆ ತಿಳಿಯುತ್ತಿಲ್ಲ
ಅದು ಕಾಲದ ಬೇಡಿಕೆಯಾಗಿತ್ತೇ
ಅಥವಾ ನಿಸರ್ಗ ನಿಯಮ ಮೀರಿ ನಿಲ್ಲಲು
ನಿನ್ನಿಂದಲೂ ಅಸಾಧ್ಯವಾಗಿತ್ತೇ?

– ರಹೀಮ್ ಟೀಕೇ.

## ಹೀಗೊಂದು ಸ್ಪರ್ಧೆ

ದೇವರು ದಿಢೀರನೆ ನಿಮ್ಮ ಮುಂದೆ ಪ್ರತ್ಯಕ್ಷನಾಗಿ, "ವತ್ಸಾ, (ಅಥವಾ ವತ್ಸೀ) ನಿನಗೆ ಮೂರು ವರಗಳನ್ನು ಕೊಡುತ್ತೇನೆ. ಕೇಳುವಂಥವನಾ(ಳಾ)ಗು" ಅಂತ ಹೇಳುತ್ತಾನೆಂದು ಭಾವಿಸಿ. ನೀವು ಕೇಳಲಿರುವ ಆ ಮೂರು ವರಗಳು ಯಾವುವು? ಅದಕ್ಕೆ ಕಾರಣಗಳೇನು? ಇವನ್ನೆಲ್ಲಾ ನಮಗೆ ಬರೆದು ತಿಳಿಸಿ. ನಿಮ್ಮ ಬರಹದಲ್ಲಿ ಸ್ವಾರಸ್ಯವಿರಲಿ, ಚುರುಕಿರಲಿ, ಲಾಲಿತ್ಯವಿರಲಿ, ದೇವರೂ ಮೆಚ್ಚುವಂತಿರಲಿ. ಇದು ಗದ್ಯ, ಪದ್ಯ, ಸಂಭಾಷಣೆ, ಅಣಕು ಕವನ ಯಾವ ರೂಪದಲ್ಲಾದರೂ ಇರಬಹುದು. ಲೇಖನ 250 ಪದಗಳ ಮಿತಿಯನ್ನು ಮೀರದಿರಲಿ. ಆಯ್ದ ಬರಹಗಳನ್ನು ಅಪರಂಜಿಯ ಅಕ್ಟೋಬರ್ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ.

ಲೇಖನ ನಮಗೆ ತಲುಪಲು ಕೊನೆಯ ದಿನಾಂಕ **15ನೇ ಸೆಪ್ಟೆಂಬರ್ 2021**.

ಲೇಖನಗಳನ್ನು koravanjiaparanji@gmail.com ವಿಳಾಸಕ್ಕೆ ಕಳುಹಿಸಿ.

ಇನ್ನೇಕೆ ತಡ, ಕಂಪ್ಯೂಟರ್ ಮುಂದೆ ಕೂತು ಕೀ ಬೋರ್ಡ್ ಮೇಲೆ ಕೈಯಾಡಿಸಲು ಪ್ರಾರಂಭಿಸಿ. ಹ್ಯಾಪಿ ಹಂಟಿಂಗ್.

**ಶಿವಕುಮಾರ್**

# ಕೋರೋನಾ ಕಾಲದ ಖರೀದಿ

**● ಕೆ. ಎನ್. ಮಹಾಬಲ**

ಕಳೆದ ವರ್ಷ ಕೋವಿಡ್ ಇನ್ನೂ ಚಾಲ್ತಿಯಲ್ಲಿದ್ದ ಕಾಲ (ಈಗಲೂ ಇದೆ ಬಿಡಿ, ಹೊಸ ಹೊಸ ವೇಷ ತೊಟ್ಟು). ಲಾಕ್ ಡೌನ್ ಸ್ವಲ್ಪಸ್ವಲ್ಪ ತೆರೆದುಕೊಳ್ಳುತ್ತಿತ್ತು. ಬಿಎಸ್‌ಎನ್‌ಎಲ್ ನಲ್ಲಿ ಕೆಲಸವಿದೆಯೆಂದು ಹೊರಟಿದ್ದೆ ಹಾಗೆಯೇ ರೇಮಂಡ್ ಶೋರೂಮ್ ಮುಂದೆ ಹಾಯುತ್ತಿದ್ದಾಗ.

"ರೀ, ಬಟ್ಟೆ ಹೊಲಿಸಿ ತುಂಬಾ ದಿನಾ ಆಯ್ತು ನೀವು. ನನ್ನ ಸೀರೆ ಸಂಖ್ಯೆಯಷ್ಟು ಅಲ್ಲದಿದ್ದರೂ ಅದರ ಕಾಲುಭಾಗನಾದ್ರೂ ನೀವು ಸಂಗ್ರಹದಲ್ಲಿ ಇಟ್ಟುಕೋಬಾರದೇ?" ಹೆಂಡತಿಯ ಮಾತು ನೆನಪಾಯಿತು.

"ಅದರ ಅಗತ್ಯ ಎಲ್ಲಿದೆ ? ಎಲ್ಲಿಗೆ ಹೋಗಬೇಕಾಗಿದೆ? ಮೊನ್ನೆ ಒಂದು ಜೋಕ್ ಬಂದಿತ್ತು ನೆನಪಿದ್ಯಾ? ಹ್ಯಾಂಗರಿಗೆ ನೇತುಹಾಕಿದ್ದ ಶರಟುಗಳು 'ಏನು ಎರಡು ತಿಂಗಳಿಂದ ನಮ್ಮನ್ನು ಒಂದು ಸಾರಿನೂ ಹಾಕೇ ಇಲ್ಲ ಯಜಮಾನ್ರು ಏನಾದ್ರೂ ಮೇಲಕ್ಕೆ ಹೋಗಿಬಿಟ್ರಾ?' ಅಂತ ಪರಸ್ಪರ ಮಾತನಾಡಿಕೊಂಡವಂತೆ"ಎಂದೆ.

"ಸರಿ ಸರಿ ನಾನು ಏನೋ ಒಳ್ಳೇ ಮಾತಾಡಿದ್ರೇ ಅಶುಭಾನೇ ನಿಮ್ಮ ಬಾಯಲ್ಲಿ. ನಾನು ಹೇಳಿದ ಹಾಗೆ ನಿಮಗೆ ಬಟ್ಟೆ ತೊಗೊಂಡ್ರೆ ಏನು ಕಷ್ಟ. ಇಷ್ಟಕ್ಕೂ ನನಗೇನೂ ಸೀರೆ ಇತ್ಯಾದಿ ಕೇಳ್ತಾ ಇಲ್ಲವಲ್ಲ."

ಹೌದು ನಿಸ್ವಾರ್ಥ ಮಾತುಗಳು ಅಪರೂಪ ಅಲ್ಲವೇ?ಹಾಗೇ ಯೋಚಿಸುತ್ತಾ ಅಲ್ಲಿದ್ದ ಶೋಕೇಸ್ ನೋಡುತ್ತ ನಿಂತೆ. ಒಳಗೆ ಅಡಿಯಿರಿಸಲು ಅನುವಾದೆ."ಸಾರ್,ಛತ್ರಿ ಅಲ್ಲೇ ಬಿಡಿ. ಹಾಗೇ ಚಪ್ಪಲೀನೂ. ಸ್ಯಾನಿಟೈಸರ್ ಹಾಕ್ಕೊಳ್ಳಿ, ಕಾಲು ಒರೆಸಿಕೊಳ್ಳಿ" ಅಶರೀರವಾಣಿ ಒಳಗಿನಿಂದ. ಹೌದು ಯಾವುದೋ ಹಳೆಯ ಬಟ್ಟೆ. ವಾರದಿಂದ ಕೆರೆಯದ ಗಡ್ಡ, ಟಿವಿಯ ಕೋರೋನಾ ವಾರ್ತಾಲಾಪಕ್ಕೆ ಸಿಕ್ಕು ಜರ್ಝರಿತವಾದ ಮನಸ್ಸು, ಅದನ್ನೇ ಪ್ರತಿನಿಧಿಸುವ ಮುಖ. ನಾನು ಶೋರೂಮ್ ಸಿಬ್ಬಂದಿಯವರ ಕಣ್ಣಿಗೆ ರೇಮಂಡ್ ಬಟ್ಟೆ ಕೊಳ್ಳುವ ಆಸಾಮಿಯ ಹಾಗೆ ಕಾಣಲೇ ಇಲ್ಲ. ಇದೇ ಕೊರೋನಾಪೂರ್ವ ಕಾಲದಲ್ಲಿ ಇಲ್ಲಿಗೆ ನಾನು ಬಂದಾಗ ಯಜಮಾನನಿಂದ ಹಿಡಿದು ಸಿಬ್ಬಂದಿವರೆಗೆ ಎಲ್ಲರೂ ಬನ್ನಿ, ಬನ್ನಿ ಎಂದು ಒಕ್ಕೊರಲಿನಿಂದ ಸ್ವಾಗತದ ನಡೆಮುಡಿ ಹಾಸುತ್ತಿದ್ದುದು ನೆನಪಾಯಿತು.

ಸರಿ ಅವರ ಫರ್ಮಾನಿನಂತೆ ಎಲ್ಲ ಶರತ್ತು ಪಾಲಿಸಿ ಒಳಗೆ ಅಡಿ ಇರಿಸಿದೆ.

ಮೂಲೆಯಲ್ಲಿದ್ದ ಒಬ್ಬ ಏನು ಎನ್ನುವಂತೆ ನೋಡಿದ.ಮಾತನಾಡಲು ಮರೆತನೋ ಅಥವಾ ಇಷ್ಟವಿಲ್ಲವೋ ತಿಳಿಯದೆ ಹೋದೆ.

"ಪ್ಯಾಂಟು, ಶರಟು ಬಟ್ಟೆ ಬೇಕಾಗಿತ್ತು"ಎಂದೆ.

ಮತ್ತೊಮ್ಮೆ ನನ್ನನ್ನು ಕೂಲಂಕಷವಾಗಿ ಅಳೆದು ನಾನು ಧರಿಸಿದ ಪ್ಯಾಂಟನ್ನೊಮ್ಮೆ ಅವಲೋಕಿಸಿ ಎರಡು,ಮೂರು ಥಾನು ಮುಂದಿಟ್ಟ.

" ಇದು ಟೆರಿವುಲ್ಲಾ?"ಕೇಳಿದೆ.

"ಇಲ್ಲಾ,ಅದೆಲ್ಲಾ ದುಬಾರಿ ಆಗುತ್ತೆ"ಎಂದು ಮಾರುತ್ತರ ನೀಡಿದ. ಮತ್ತದೇ ಅನುಮಾನ ಅವನ ದನಿಯಲ್ಲಿ.

"ತೋರಿಸಿ, ಪರವಾಗಿಲ್ಲ" ಎಂದೆ ಸವಾಲು ಹಾಕುವ ದನಿಯಲ್ಲಿ. ವಿಧಿಯಿಲ್ಲದೆ ತೋರಿಸಿದ. ಒಂದನ್ನು ಆಯ್ಕೆ ಮಾಡಿದೆ.

ಇದೇ ಬಗೆಯ ಅನುಮಾನದ ಸ್ಥಾಯೀಭಾವದಲ್ಲೇ ಶರಟಿನ ಬಟ್ಟೆಯನ್ನೂ ಆಯ್ಕೆ ಮಾಡಿದೆ.

"ಎರಡೂ ಸೇರಿ ಮೂರು ಸಾವಿರದ ಒಂಬೈನೂರ ಐವತ್ತು ಆಗುತ್ತೆ." ಜೇಬು ನೊಡ್ಕೊಳ್ಳಿ ಎನ್ನುವ ದನಿಯಿತ್ತೇ ಅವನ ಮಾತಿನಲ್ಲಿ?

"ಸರಿ ಪ್ಯಾಕ್ ಮಾಡಿ." ಎಂದೆ.

ಅಳತೆ ಮಾಡಿ ಕತ್ತರಿಸಲು ಮುಂದಾದ. ಕೈಗೆ ಕತ್ತರಿ ತೆಗೆದುಕೊಂಡು ಒಂದು ನಿಮಿಷ ತನ್ನ ಚರ್ಯೆ ನಿಲ್ಲಿಸಿ "ಕ್ಯಾಶೋ, ಕಾರ್ಡೋ?"ಎಂದು ಕೇಳಿದ.

ನನಗೀಗ ರೇಗಿಹೋಯಿತು. ಪರ್ಸಿನಿಂದ ಎರಡು ಸಾವಿರ ರೂಪಾಯಿಯ ಎರಡು ನೋಟು ಹೊರಗೆಳೆದು. "ಕ್ಯಾಶ್" ಎಂದು ಅಂಗಡಿಯಲ್ಲಿದ್ದ ಎಲ್ಲರ ಕಿವಿ ತೂತಾಗುವಂತೆ ಅರಚಿದೆ.

ಅವನು ಪೆಚ್ಚಾಗಿ ಬಟ್ಟೆ ಪ್ಯಾಕ್ ಮಾಡಿ ಕ್ಯಾಶ್ ಕೌಂಟರಿಗೆ ಕೊಟ್ಟ. ನಾನು ನೋಟುಗಳನ್ನು ಕೌಂಟರ್ ಮೇಲೆ ಕುಕ್ಕಿ ಬಟ್ಟೆಯ ಪ್ಯಾಕ್ ಪಡೆದು ಅಲ್ಲಿಂದ ಹೊರಟೆ.


ಬಾಗಿಲಲ್ಲಿ ಛತ್ರಿ ತೆಗೆದುಕೊಂಡು ಚಪ್ಪಲಿ ಮೆಟ್ಟಿಕೊಳ್ಳುತ್ತಿದ್ದಾಗ ಒಳಗಿನಿಂದ "ಅಲ್ಲಯ್ಯಾ ಅವರು ನಮ್ಮ ಅಂಗಡಿಗೆ ಸದಾ ಬರುವವರು. ಅವರಿಗೆ ಬೇಸರಮಾಡಿಬಿಟ್ಟೆ" ಎಂದು ಒಬ್ಬನ ದನಿ" ಅಯ್ಯೋ ಈ ಕೊರೋನಾ ಕಾಲದಲ್ಲಿ ನಿನ್ನೆಯ ಅಮೀನ ಇವತ್ತಿನ ಗರೀಬ. ನಮ್ಮ ಹುಷಾರಿನಲ್ಲಿ ನಾವು ಇರಬೇಕು" ಎಂಬ ತನ್ನ ನಡವಳಿಕೆಗೆ ಸಮರ್ಥನೆ ನೀಡುವ ಮರುದನಿ ಎರಡೂ ಕೇಳಿಸಿತು.

ರೇಮಂಡ್‌ಶಾಪಿನಲ್ಲಿ ನನ್ನ ಮರ್ಯಾದೆ ಕಳೆದ ಈ ಕೊರೋನಾ ಎಂಬ "ಯಾರ ಲೀಲೆಗೋ ಯಾರೋ ಏನೋ ಗುರಿಯಿರದೆ ಬಿಟ್ಟ ಬಾಣ " ಯಾವತ್ತು ತೊಲಗುವುದೋ ಎಂದು ಶಪಿಸುತ್ತ ಅಲ್ಲಿಂದ ಹೊರಟೆ. ■

**ಲಕ್ಷ್ಮಣ್ ಕೊರವಂಜಿ**

**ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷ್ಮಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.**

**ಅವುಗಳಲ್ಲಿ ಇದೂ ಒಂದು – ನಿಮಗಾಗಿ.**



**"ಅದರ ಹತ್ತ ಹೋಗ್ಬೇಡ ಕಣೋ. ನೆನ್ನೆ ನಮ್ಮುಂದೇನ ಕಚ್ಚಿಬಿಡ್ತಂತೆ! ಅವರು ಹೇಳ್ತಾ ಇದ್ರು"**

# ಜಾತಕ ಫಲ

● **ವಸುಮತಿ ಉಡುಪ**

ಟೀವಿ ಧಾರಾವಾಹಿಗಳನ್ನು ನೋಡುವ ಅಭ್ಯಾಸ ನಿಮಗಿದ್ದರೆ ಇಂತಾ ಪ್ರಸಂಗಗಳನ್ನು ನೋಡಿಯೇ ಇರುತ್ತೀರಿ. ಮನೆಯ ಜನ ಎಷ್ಟೇ ವಿದ್ಯಾವಂತರಾಗಿರಲಿ, ಯಜಮಾನ ಕರೋಡ್‌ಪತಿಯಾಗಿರಲಿ, ಜ್ಯೋತಿಷಿಗಳು, ಕೊರವಂಜಿಗಳು ಹೇಳುವ ಮಾತು ಅಂದರೆ ಅವರಿಗೆ ಬ್ರಹ್ಮಲಿಖಿತ ಅನ್ನುವಷ್ಟು ನಂಬಿಕೆ. ಅದು ನಡೆದೇ ತೀರುತ್ತದೆ ಅನ್ನುವುದರಲ್ಲಿ ಕಿಂಚಿತ್ ಅನುಮಾನವಿಲ್ಲ. ವಿಘ್ನೇಶ ಸ್ವಲ್ಪ ಹಾಗೇನೇ. ತೀರಾ ಅಲ್ಲದಿದ್ದರೂ ಜ್ಯೋತಿಷಿಗಳ ಬಾಯಿಂದ ಉದುರಿ ಬೀಳುವ ಮಾತು ಅಂದರೆ ಎರಡೂ ಅಂಗೈಯೊಡ್ಡಿ ಸ್ವೀಕರಿಸುವಂತಾ ಮನೋಭಾವದವನು. 'ಅತೀ..' ಅನ್ನುತ್ತಾಳೆ ಶರಾವತಿ. ಬದುಕು ಪೂರ್ವನಿರ್ಧಾರಿತವಾದದ್ದೇ ಹೌದು ಅಂತಾದರೆ ಜನ ಯಾಕೆ ಕಷ್ಟಪಡಬೇಕು? ಬೇಡದ ಚಿಂತೆ ಹಚ್ಚಿಕೊಂಡು ತಲೆ ಕೆಡಿಸಿಕೊಳ್ಳಬೇಕು? ಏನಾಗಬೇಕೆಂದಿದೆಯೋ ಅದು ಆಗಿಯೇ ತೀರುತ್ತದೆ ಎಂದು ಅವಳ ವಾದ.

"ಹಾಗಲ್ಲ ಕಣೇ. ಜ್ಯೋತಿಷ್ಯ ಅನ್ನೋದು ಒಂದು ಮುನ್ಸೂಚನೆ ಕೊಡುತ್ತೆ. ಹೀಗಾಗುತ್ತೆ ಅನ್ನೋದಕ್ಕೆ ತಯಾರಾಗಿರಿ ಅಂತ ಎಚ್ಚರಿಸುತ್ತೆ. ಬರುವ ಕಷ್ಟಗಳಿಗೆ ಪರಿಹಾರಾನೂ ಹೇಳುತ್ತೆ" ಅನ್ನುತ್ತಾನೆ ವಿಘ್ನೇಶ.

ಅವನ ಹಿರೀ ಮಗಳಿಗೆ ಇಪ್ಪತ್ಮೂರು ತುಂಬಿ ಇಪ್ಪತ್ನಾಲ್ಕಕ್ಕೆ ಬಿದ್ದಾಗ ಎಲ್ಲಾ ಕ.ಪಿ.ಗಳಂತೆ ವಿಘ್ನೇಶ ಕೂಡಾ ವರಾನ್ವೇಷಣೆಗೆ ಅನುವಾಗಿದ್ದ. ಈಗೆಲ್ಲಾ ಗಂಡಿಗೊಂದು ಹೆಣ್ಣೋ, ಹೆಣ್ಣಿಗೊಂದು ಗಂಡೋ ತಲಾಷು ಮಾಡುವುದು ಹಿಂದಿನಷ್ಟು ಕಷ್ಟ ಅಲ್ಲವೇ ಅಲ್ಲ ಬಿಡಿ. ಈ ಕೆಲಸ ಸುಲಭ ಮಾಡುವ ವಧೂವರಾನ್ವೇಷಣಾ ಕೇಂದ್ರಗಳು ಬೇಕಾದಷ್ಟು ಹುಟ್ಟಿಕೊಂಡಿವೆ. ಅಳತೆ ಕೊಟ್ಟು ಬಟ್ಟೆ ಹೊಲಿಸಿಕೊಳ್ಳುವಂತೆ, ಈ ಹೋಲಿಕೆಯೂ ಸರಿಯೇನಲ್ಲ ಬಿಡಿ, ಅಳತೆಗೆ ತಕ್ಕ ರೆಡಿಮೇಡ್ ಬಟ್ಟೆ ಕೊಂಡುಕೊಂಡಂತೆ ನಮ್ಮ ಅಭಿಲಾಷೆಗೆ ಸರಿ ಹೊಂದುವಂತವರನ್ನು ಆಯ್ದುಕೊಳ್ಳುವ ಕೆಲಸ ಸಲೀಸಾಗಿಬಿಟ್ಟಿದೆ. ಇಪ್ಪತ್ತೇಳು ವರ್ಷಗಳ ಹಿಂದೆ ಮದುವೆ ವಯಸ್ಸಿಗೆ ಬಂದಿದ್ದ ಶರಾವತಿ ಹೇಳುತ್ತಾಳಲ್ಲ, ಆ ಕಾಲದಲ್ಲಿ 'ಹೀಗೊಬ್ಬ ಹುಡುಗ ಮದುವೆಗೆ ಅಣಿಯಾಗಿದ್ದಾನೆ' ಎಂದು ಗೊತ್ತು ಮಾಡಿಕೊಳ್ಳುವುದೇ ಹರಸಾಹಸ. ಆಮೇಲೂ ಜಾತಕದ ಹೊಂದಾಣಿಕೆಯಾಗಬೇಕು, ಹುಡುಗ ಒಪ್ಪಬೇಕು, ಅದಕ್ಕಿಂತಾ ಹೆಚ್ಚಾಗಿ ಹುಡುಗನ ಮನೆಯವರು ಪಾಸು ಮಾಡಬೇಕು, ಅವರು ಕೇಳಿದಷ್ಟು ನಗ ಹಾಕಬೇಕು, ಹೇಳಿದಷ್ಟು ವರದಕ್ಷಿಣೆ ಕೊಡಬೇಕು, ಹೀಗೇ ಧಾಂಧೂಂ ಆಗಿ ಮದುವೆ ಮಾಡಬೇಕು, ಒಂದೊಂದಲ್ಲಾ ರಗಳೆ. ಹುಡುಗಿಯರಿಗೆ ಬರ ಬಂದಿರದಿದ್ದ ಕಾಲ. ಹುಡುಗ, ಅವನ ಪೈಕಿಯವರು ಅದೆಷ್ಟೋ ಮನೆಗಳ ಮೆಟ್ಟಿಲು ಹತ್ತಿಳಿದು, ಉಪ್ಪಿಟ್ಟು, ಕೇಸರೀಬಾತಿನ ರುಚಿ ನೋಡಿ, 'ಋಣಾನುಬಂಧವಿಲ್ಲ' ಎನ್ನುವ ಒಂದೇ ಒಂದು ಪದವನ್ನು ಒಂದು ಕಾರ್ಡಿನಲ್ಲಿ ಗೀಚಿ ಹಾಕಿದರೆ ಸೈ, ಅಲ್ಲಿಗೆ ಮುಗಿಯಿತು. ಬೆಟ್ಟದಷ್ಟು ಆಸೆ ಮಂಜುಗೆಡ್ಡೆಯಂತೆ ಕರಗಿ ಹೋಗಿ ಮತ್ತೆ ಹೊಸಬರ ಹುಡುಕಾಟ. 'ನಿಮ್ಮ ಪೈಕಿ ಯಾರಾರೂ ಇದ್ರೆ ಹೇಳಿ ಮಾರೆರಾ..' ಎಂದು ಹುಡುಗಿಯ ಅಪ್ಪ ಅಂಗಲಾಚುತ್ತಿದ್ದುದನ್ನು ನೆನೆದರೆ ಇವತ್ತಿಗೂ ಶರಾವತಿಗೆ ಕಣ್ಣು ತುಂಬಿಕೊಳ್ಳುತ್ತದೆ.

ಆಯ್ತಾ, ಮಗಳ ಜಾತಕ ಹೊರಡಿಸಲು ವಿಘ್ನೇಶ ಯೋಚನೆ ಮಾಡಿದನಾ,

ಮಗಳ ಜಾತಕವನ್ನು ಒಂದು ಸಲ ಜ್ಯೋತಿಷಿಯೊಬ್ಬರಿಗೆ ತೋರಿಸಿ ಮುಂದೆ ಹೆಜ್ಜೆ ಇಡಬೇಕು ಎಂದು ಅವನ ಮನೋಧರ್ಮಕ್ಕನುಗುಣವಾಗಿ ಲೆಕ್ಕ ಹಾಕಿದ. 'ಬೇಡ' ಅನ್ನಲಿಲ್ಲ ಶರಾವತಿ. 'ಅಸ್ತು' ಅನ್ನಲೂ ಇಲ್ಲ. ತಾನು ಏನೇ ಹೇಳಿದರೂ ಗಂಡಯ್ಯ ಅವನಿಗೆ ಅನಿಸಿದ್ದನ್ನು ಮಾಡಿಯೇ ತೀರುವವನು ಎಂದು ಅವಳಿಗೆ ಗೊತ್ತುಂಟು. ಅಲ್ಲದೆ ಮದುವೆಯಂತಾ ಶುಭಕಾರ್ಯಕ್ಕೆ ಕೈ ಹಾಕುವಾಗ ಎಷ್ಟು ಮುನ್ನೆಚ್ಚರಿಕೆ ವಹಿಸಿದರೂ ಕಮ್ಮಿ ಎಂದು ತಾಯಿ ಹೃದಯ ಯೋಚಿಸಿದ್ದರೆ ಅದು ತಪ್ಪೂ ಅಲ್ಲ. ತಣ್ಣೀರನ್ನೂ ಆರಿಸಿ ಕುಡಿಯಬೇಕಾದ ಕಾಲ. ನೆರೆಮನೆಯಲ್ಲಿರುವವರೇ ಎಂತಾ ಜನ ಎಂದು ಗೊತ್ತಿರದಿದ್ದ ಪರಿಸ್ಥಿತಿ. ಮಗಳ ಜಾತಕ ಹಿಡಿದು ಹೆಸರಿಗೆ ಹೋದ ಶಾಸ್ತ್ರ ಹೇಳುವವರೊಬ್ಬರನ್ನು ವಿಘ್ನೇಶ ಹುಡುಕಿಕೊಂಡು ಹೋದ ಎನ್ನುವಲ್ಲಿಗೆ ಪ್ರಥಮಾಧ್ಯಾಯಂ ಸಂಪೂರ್ಣಂ.

******

'ಕೈ ತೋರಿಸಿ ಅವಲಕ್ಷಣ' ಅನ್ನಿಸಿಕೊಂಡಂತಾಯ್ತು ವಿಘ್ನೇಶನ ಪಾಡು. ಖಡಕ್ಕಾಗಿ ಜ್ಯೋತಿಷ್ಯ ಹೇಳುವುದು ಅಂದರೆ ಹೀಗಾ? 'ಒಂದು ಪೆಟ್ಟು, ಎರಡು ತುಂಡು' ಅನ್ನುವ ಹಾಗೆ? ಜ್ಯೋತಿಷಿಗಳು ಅಂದರೆ ಯಾರಪ್ಪಾ? ಮನೋವೈದ್ಯರಿಲ್ಲದ ಕಾಲದಲ್ಲಿ ಒಂಥರಾ ಮನೋವೈದ್ಯರ ಕೆಲಸ ಮಾಡುತ್ತಿದ್ದವರು. ಶಾಂತಿ, ಪರಿಹಾರ, ಹೋಮಹವನದ ಹೆಸರಲ್ಲಿ ನೊಂದವರ ಮನಸ್ಸಿನ ಭಾರ ಇಳಿಸಿ ಕೊಂಚಮಟ್ಟಿಗಾದರೂ ಹಗುರಾಗುವಂತೆ ಮಾಡುತ್ತಿದ್ದವರು. ಹಾಗೆಂದು ಶರಾವತಿಯ ಅಂಬೋಣ. ವಿಘ್ನೇಶ ಮಗಳ ಜಾತಕ ತೋರಿಸಿಕೊಂಡು ಬರಲು ಹೋಗಿದ್ದಕ್ಕೆ ಸಕಾರಣಗಳಿದ್ದುವು, ಅವನ ಪ್ರಕಾರ. ಮಗಳಿಗೆ ಗುರುಬಲ ಇದೆಯೋ, ಇಲ್ಲವೋ ಗೊತ್ತು ಮಾಡಿಕೊಳ್ಳಬೇಕೆಂಬುದು ಒಂದು ಕಾರಣ. 'ಗುರುಬಲ ಇಲ್ಲದಿದ್ದರೆ ಏನೇ ಪ್ರಯತ್ನ ಮಾಡಿದರೂ ವ್ಯರ್ಥ' ಎಂದು ಅವನ ತಿಳಿವಳಿಕೆ. 'ಹುಡುಗಿಯ ಜಾತಕದ ಯೋಗ ಹೇಗಿದೆ? ಎಂತಾ ಗಂಡು ಸಿಗಬಹುದು?' ಎನ್ನುವ ಉತ್ಸುಕತೆ ಮತ್ತೊಂದು. ಮಕ್ಕಳನ್ನು ಹೆತ್ತ ಎಲ್ಲರಿಗೂ ಇರುವಂತಾದ್ದು. "ನೀನೂ ಬಾರೇ.." ಎಂದು ಕರೆದಿದ್ದ ವಿಘ್ನೇಶ.

"ನಂಕೈಲಾಗಲ್ಲಪ್ಪಾ. ಶಾಸ್ತ್ರ ಹೇಳೋರ ಮನೆ ಮುಂದೆ ಡಾಕ್ಟ್ರ ಶಾಪಲ್ಲಿರೋದಕ್ಕಿಂತಾ ದೊಡ್ಡ ಕ್ಯೂ ಇರುತ್ತೆ" ಕೈ ಆಡಿಸಿದ್ದಳು ಪತ್ನಿ.

ಬೆಳಿಗ್ಗೆ ತಿಂಡಿ ಮುಗಿಸಿ ಹೋದ ಗಂಡ ನಿರೀಕ್ಷೆಯಂತೆ ಊಟದ ಹೊತ್ತು ಕಳೆದ ಎಷ್ಟೋ ಹೊತ್ತಿನ ಮೇಲೆ ಮನೆಗೆ ಬಂದಿದ್ದ. ಮುಖ ಬೆಂಕಿಯ ಶಾಖಕ್ಕೆ ಹಿಡಿದ ಬಾಳೆಲೆಯಂತೆ ಬಾಡಿ ಹೋಗಿತ್ತು. ಮನೆಗೆ ಬಂದವನು ಕೈಕಾಲು ತೊಳೆದು ಊಟಕ್ಕೆ ಕೂತರೂ ಪಿಟ್ಟೆಂದು ಉಸಿರೊಡೆಯಲಿಲ್ಲ. ಶರಾವತಿಯ ಕುತೂಹಲದ ಕಟ್ಟೆ ಬಿರಿದು ಹೋಗುವಂತಾಗಿತ್ತು.

"ಬಾಯೊಳಗೆ ಕಡುಬು ತುಂಬ್ಕಂಡೋರ್ಥಂಗೆ ಯಾಕ್ರೀ ತೆಪ್ಪಗಿದೀರಾ? ಬೇಕಾಗಿರ್ಲಿಲ್ಲ, ಆದ್ರೂ ಕುಣ್ಕೊಂಡು ಹೋದ್ರಿ. ಏನೋ ಅವಲಕ್ಷಣದ ಮಾತು ಕೇಳ್ಕೊಂಬಂದಿರ್ತೀರಿ. ಮುಖ ನೋಡಿದ್ರೆ ಗೊತ್ತಾಗುತ್ತೆ.." ಶರಾವತಿ ಅಸಹನೆಯಿಂದ ಇಷ್ಟುದ್ದ ಮಾತಾಡಿದಳು. ಇಲ್ಲ, ಮುತ್ತು ಉದುರಲಿಲ್ಲ.

"ಹೇಳ್ತೀರಾದ್ರೆ ಹೇಳಿ. ಇಲ್ದಿದ್ರೆ ಬಿಡಿ. ಏನಾಗುತ್ತೋ ಅದು ಆಗೇ ಆಗುತ್ತಪ್ಪಾ. ಮೊದಲೇ ಎಲ್ಲಾ ಕೇಳ್ಕೊಂಬಂದು ಮುಂಚೇನೇ ಯಾಕೆ ಹೆದರಿ ಸಾಯ್ತಿರಬೇಕು? ಇಷ್ಟಕ್ಕೂ ಹೇಳಿದ್ದೆಲ್ಲಾ ನಿಜ ಆಗುತ್ತೆ ಅಂತ ನಂಬೋಕೆ ನಾನೇನು ಪೆದ್ದಿ ಅಲ್ಲ.."

'ನಿಮ್ಮ ಹಾಗೆ' ಅನ್ನುವುದನ್ನು ಒಳಗೊಳಗೇ ನುಂಗಿಕೊಂಡಳು ಶರಾವತಿ, ಪರಿಸ್ಥಿತಿಯ ಗಾಂಭೀರ್ಯವನ್ನು ಅರ್ಥ ಮಾಡಿಕೊಂಡು.

ನೆಪಕ್ಕೆ ಉಂಡ ಶಾಸ್ತ್ರ ಮಾಡಿದ ಯಜಮಾನ. ಅವನು ಕೈ ತೊಳೆದು ವರೆಸಿಕೊಳ್ಳುತ್ತಿದ್ದಂತೆ ಅವನ ಹಿಂದೆಹಿಂದೆಯೇ ರೂಮಿಗೆ ಹೋಗಿ ಬಾಗಿಲು ಮುಂದು ಮಾಡಿದಳು ಶರಾವತಿ.

"ಮಾರಾಯ್ರೇ, ಯಾಕೆ ಸುಮ್ನೆ ಪ್ರಾಣ ತಿಂತೀರಿ? ಜಾತಕ ನೋಡಿದೋರು ಏನಂದ್ರು ಅಂತ ಈಗ್ಲಾದ್ರೂ ಬಾಯಿ ಬಿಟ್ಟು ಹೇಳಿ.." ಶರಾವತಿ ಇಷ್ಟೆಲ್ಲಾ ಕುತೂಹಲ ತೋರಿಸುವ ಜಾಯಮಾನದವಳಲ್ಲ. ಆದರೆ 'ಭವಿಷ್ಯ' ಅನ್ನುವ ಮೂರಕ್ಷರದ ಚಡಪಡಿಕೆ ಅಂತಾದ್ದು. ನಂಬದವರನ್ನೂ ತುದಿಗಾಲಿನಲ್ಲಿ ನಿಲ್ಲಿಸುವಂತಾದ್ದು. 'ನಂಬುವುದಿಲ್ಲ' ಅನ್ನುತ್ತಲೇ ಕಿವಿ ನಿಮಿರಿಸುವಂತಾದ್ದು. ಅದರಲ್ಲೂ ಹೆತ್ತ ಮಕ್ಕಳ ಭವಿಷ್ಯ ಅಂದರೆ ಅದರ ತೂಕ ಪ್ರತ್ಯೇಕ. ನಿಧಾನಕ್ಕೆ ಬಾಯ್ಬಿಟ್ಟ ವಿಘ್ನೇಶ, "ನಮ್ಮ ಹುಡುಗಿಯ ಜಾತಕದಲ್ಲಿ ಎರಡು ಮದುವೆಯ ಯೋಗ ಅಂದುಬಿಟ್ರು ಮಾರಾಯ್ತೀ, ಎತ್ತಿದ ಬಾಯಿಗೆ. ನಂಗೆ ಎದೆ ಒಡೆದು ಹೋದ ಹಾಗಾಯ್ತು.."

ಶರಾವತಿಗೂ ಎದೆ ಒಡೆದಂತಾಗಿದ್ದು ಹೌದು. ಕಲ್ಪನೆಯ ಕುದುರೆ ಓಡಿಸುವುದಾದರೆ ಈ ಮಾತನ್ನೇ ಇಟ್ಟುಕೊಂಡು ಎಷ್ಟೂ ಓಡಿಸಬಹುದು, ಏನೂ ಯೋಚಿಸಬಹುದು.

"ಸುಮ್ನಿರ್ರೀ, ಏನಾಗಲ್ಲ.." ಎಂದಷ್ಟೇ ಅಂದಳು ಶರಾವತಿ, ತನ್ನ ಅಳುಕು ನುಂಗಿಕೊಂಡು.

******

ಜಾತಕ ಏನೇ ಹೇಳಲಿ, ಭವಿಷ್ಯ ಏನೇ ಇರಲಿ, ಕರ್ತವ್ಯ ಮರೆತು ಕೂರಲಾದೀತೇ? ದೇವರ ಮೇಲೆ ಭಾರ ಹಾಕಿ ವಿಘ್ನೇಶ ನಾಲ್ಕಾರು ವೈವಾಹಿಕ ಕೇಂದ್ರಗಳಲ್ಲಿ ಮಗಳ ಹೆಸರನ್ನು ನೋಂದಾಯಿಸಿ ಬಂದ. ಲೆಕ್ಕ ಮಾಡಿದ ಹಾಗೆ ಎರಡು ತಿಂಗಳು. ಹುಡುಗಿಗೆ ಗುರುಬಲ ಒದ್ದುಕೊಂಡು ಬಂದಿತ್ತು. ಇವರ ನಿರೀಕ್ಷೆಗೆ ತಕ್ಕ ಹುಡುಗ ಸಿಕ್ಕಿ ಮದುವೆ ನಿಶ್ಚಯವಾಯ್ತು. ಆಯ್ಕೆಗೆ ಹತ್ತಾರು ಅವಕಾಶಗಳಿರುವಲ್ಲಿ ಆಯ್ಕೆ ಕಷ್ಟದ್ದೇನಾಗಲಿಲ್ಲ. 'ನಮಗೆ ಜಾತಕ ಗೀತಕದ ಮೇಲೆ ನಂಬಿಕೆಯಿಲ್ಲ' ಎಂದು ವರನ ಅಪ್ಪ ಹೇಳಿದ್ದು ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಗಿತ್ತು. ಎಲ್ಲಾ ಸುಸೂತ್ರವಾಗಿ ನಡೆಯುತ್ತಿದ್ದರೂ ತನಗೆ ಆಗಬೇಕಾದಷ್ಟು ಸಂತೋಷ, ತೃಪ್ತಿ ಆಗುತ್ತಿಲ್ಲ ಎಂದು ವಿಘ್ನೇಶನಿಗೆ ಅನಿಸುತ್ತಿದ್ದರೆ ಅದು ಸ್ವಯಂಕೃತಾಪರಾಧ. ಭವಿಷ್ಯದ ಹಿಂದೆ ಬಿದ್ದಿದ್ದರ ಫಲ.

******

ಭರ್ಜರಿಯಾಗಿ ನಡೆದುಹೋಯ್ತು ಮದುವೆ. ಅದಾದ ಕೆಲದಿನಗಳಲ್ಲಿ ರಿಜಿಸ್ಟರ್ ಮದುವೆ. ಸಾಫ್ಟ್‌ವೇರ್ ಅಳೀಮಯ್ಯ ವಿದೇಶಕ್ಕೆ ಹಾರಲು ತುದಿಗಾಲಿನಲ್ಲಿ ನಿಂತಿದ್ದ. ಹೆತ್ತವರ ಅಪೇಕ್ಷೆಯಂತೆ ಮದುವೆಯಾಗಿ ಹೆಂಡತಿಯನ್ನು ಜೊತೆಗೆ ಕರೆದೊಯ್ಯಲು ಅಣಿಯಾಗುತ್ತಿದ್ದ. 'ಭವಿಷ್ಯ ಸತ್ಯವಾಯ್ತು' ಎಂದು ವಿಘ್ನೇಶ ಕೌತುಕಪಟ್ಟರೆ ಶರಾವತಿ ನಿಶ್ಚಿಂತೆಯ ನಿಟ್ಟುಸಿರೆಳೆದಳು. ಗಂಡನ ತಲೆಯೊಳಗೆ ಮಿಜಿಗುಟ್ಟುತ್ತಿದ್ದ ಹುಳು ಉದುರಿ ಬಿತ್ತೆಂದು ಅವಳಿಗೆ ಸಮಾಧಾನ. ಸತ್ಯ ಹೇಳಬೇಕೆಂದರೆ ಅವಳಿಗೂ ನಿಶ್ಚಿಂತೆಯಾಗಿದ್ದು ಹೌದು. ■

# ಎಡಬಿಡಂಗಿ

● **ಕೆ.ಎಸ್. ಶ್ರೀಶೈಲನ್**

....ಅಂತಾರಲ್ಲ ಹಾಗೆ ಇತ್ಲಾಗಿ ಈ ಕಡೇನೂ ಇಲ್ಲ ಅತ್ಲಾಗಿ ಆ ಕಡೇನೂ ಇಲ್ಲ ಹಾಗಾಯ್ತು ನೋಡಿ ನನ್ನ ಪರಿಸ್ಥಿತಿ. ಏನದು ಅಂತೀರ ಇದನ್ನ ಓದಿ.

ಬೇಡವ್ವೋಂತ ಬೊಕ್ಕಲ್ ಬೋರಲ್ ಬಿದ್ದು ಬಡಕೊಂಡೆ, ಬೇಡಿಕೊಂಡೆ, ಬೆದರಿಸಿದೆ, ದುಂಬಾಲು ಬಿದ್ದೆ, ಹೆತ್ತವರನ್ನು ಹೆದರಿಸಲು ಹಿಂದೆ ಬಿದ್ದೆ. ಕಂಡ ಕಾಣದ, ತಿಳಿದ, ತಿಳಿಯದ ಜನರ ಕಾಲಿಗೆ ಬಿದ್ದೆ. ಊಹೂಂ ಜಪ್ಪಯ್ಯ ಅಂದರೂ ನನ್ನ ಬೇಡಿಕೆ ಮುಂದಕ್ಕೆ ಜರುಗಲೇ ಇಲ್ಲ. ನನ್ನ ಕಲ್ಯಾಣ ಕಾರ್ಯಗಳ ಸಿದ್ಧತೆ, ಸಂಬಂಧವಿರಲಿ, ಇಲ್ಲದಿರಲಿ, ಎಲ್ಲರೂ ಸಂಪೂರ್ಣವಾಗಿ ಸಿದ್ಧತೆ ನಡೆಸಿಯೇ ಬಿಟ್ಟರು.

ಅಪ್ಪ, ಒಂದೇ ಮಾತಂದರು. "ನೀನಿರೋ ಲಕ್ಷಣಕ್ಕೆ, ನಿನಗೆ ಬರೋ ಸಂಬಳಕ್ಕೆ, ಆ ಹುಡುಗಿ ಒಪ್ಪಿಕೊಂಡಿರೋದೆ ಹೆಚ್ಚು! ಕರಕಟ್ಟು ತಾಳಿಕಟ್ಟು". ನನಗೆ ಬೇರೆ ದಾರೀನೆ ಇರಲಿಲ್ಲ. ಅಂತು ಗೃಹಸ್ಥನಾಗಿಬಿಟ್ಟೆ.

ಅಂದರೆ ಈ ಹಿಂದೆ ನಾನೇನಾಗಿದ್ದೆ. ಕಟ್ಟ ಬ್ರಹ್ಮಾಚಾರಿಯಾಗಿದ್ದೆ. ಏನೇನು ಸೌಲಭ್ಯ ಇತ್ತು. ಷಷ್ಠಿಯ ಪ್ರಯುಕ್ತ ಎಲ್ಲರಿಂದಲೂ ಆಹ್ವಾನ ಪಡೆಯುತ್ತಿದ್ದೆ. ನನಗೆ ವಿರಾಮವಿಲ್ಲದಿದ್ದರೂ ನನ್ನಂತಹ ನಿಷ್ಠಾವಂತ ಬ್ರಹ್ಮಚಾರಿಗಾಗಿ, ಷಷ್ಠಿಯನ್ನೆ ಮುಂದಕ್ಕೆ ಹಾಕ್ತಿದ್ದರು ಹಿರಿಯರೆಲ್ಲರೂ ಸಹ ಕಾಲತೊಳೆದು, ನಮಸ್ಕಾರ ಮಾಡಿ, ಯಾವ ಹೋಟಲಿನಲ್ಲೂ ಸಿಗದ ಊಟ ಹಾಕಿ, ಧೋತ್ರದ ಸಮೇತ ದಕ್ಷಿಣೆ ಕೊಟ್ಟುಕಳಸ್ತಾ ಇದ್ದರು. ಯಾವ ಸೂತಕ, ಪುರಡು, ಮೈಲಿಗೆಗಳಿಗೂ ನಾನು ಹೊರತು, ಮುಂಜಿ ಎಲ್ಲೆ ಆದರೂ, ಕುಮಾರ ಭೋಜನಕ್ಕೆ ನನಗೆ ಅಗ್ರಸ್ಥಾನ ಮೀಸಲು. ಆದರೆ ದೌರ್ಭಾಗ್ಯಕ್ಕೆ ನನಗೆ ಧರ್ಮಪತ್ನಿ ಬಂದು ಬಿಟ್ಟರೆ, ನನಗೆ ಈ ಸ್ಥಾನದಿಂದ ಖಂಡಿತ ಡಿ–ಪ್ರಮೋಶನ್ ಆಗಿ ಬಿಡುತ್ತೆ ಅಂತ ಸಹ ಗೊತ್ತಿದ್ದು.. ಗೊತ್ತಿದ್ದು..

ಸೊ, ನನ್ನ ಮೊದಲಿದ್ದ ಅಡ್ವಾಂಟೇಜ್‌ಗಳ ಅವಸಾನವಾಯ್ತು. ಮೊದಲಿದ್ದ ನನ್ನ ಸ್ಥಾನ ಮಾನ ಗೌರವ ಎಲ್ಲದಕ್ಕೂ ತಿಲಾಂಜಲಿ. ಸರಿ ನೆಕ್ಸ್ಟ್ ಪ್ರಮೋಶನ್ ಟು ಗೃಹಸ್ಥಾಶ್ರಮ. ವಿವಾಹವೋ ವಿವಾದವೋ ಅಂತಾರಲ್ಲ ಹಾಗೆ ಎಲ್ಲ ಅಂದಿನಿಂದಲೇ ಪ್ರಾರಂಭ. ಮಹರಾಯಿತಿ ಮಂಗವ್ವ (ತಪ್ಪು ತಿಳಿಬಾರದು ಅಲಮೇಲು ಮಂಗೈನ ಎಲ್ಲರೂ ಮಂಗವ್ವ ಅಂತಾನೇ ಕರೀತಿದ್ದರು) ಮುಹೂರ್ತ ಮುಗಿಸಿ ಮನೆಗೆ ಮುಂಗಾಲು ಇಡತಾನೆ ಸೇರಕ್ಕಿ ಮೇಲೆ ಮುಗ್ಗರಿಸಿದಳು ನನಗೆ ಜೀವ 'ಢಂ' ಅಂತು. ಮನೇಗೆ ಕನ್ನ ಹಾಕಿದರೂ, ಚಿನ್ನ ಬಿಟ್ಟು, ಅಕ್ಕಿ ತಗೊಂಡು ಹೋಗೋ ಈ ಕಾಲದಲ್ಲಿ ಕಾಳುಗಳೆಲ್ಲ ಚೆಲ್ಲಾಪಿಲ್ಲಿ ಆಗಿದ್ದವು. ಸೇರು ಒಂದು ರೌಂಡು ಹಾಕಿತ್ತು. ಬೆಲ್ಲದಚ್ಚು ಚೂರುಚೂರು ಆಗಿತ್ತು.

ಇಲ್ಲಿಂದ ಶುರು ಆಯ್ತು ನೋಡೀಪ್ಪ, ನನ್ನ ಇದೂ ಅಲ್ಲದ ಅದೂ ಅಲ್ಲದ ಅರ್ಧಾಂಗ ಜೀವನ. ಮೊದಲ ತರಹ ಬ್ರಹ್ಮಚಾರಿಗಳ ಗುಂಪಿಗೆ ಹೋಗೋ ಹಾಗೇ ಇಲ್ಲ. ಮದುವೆ ಮುಂಜಿಗಳಿಗೆ ಹೋದರೆ, ಇನ್ನೂ ಅಪ್ರೆಂಟಿಸ್ ಅನ್ನೋ ಭಾವದಿಂದ ದೂರ ಇಡತಾ ಇದ್ದರು ದೊಡ್ಡವರು.

ಇನ್ನೂ ಖರ್ಚು! ಬ್ರಹ್ಮಚಾರಿಯ ಷಷ್ಟಿ ವರಮಾನ ಸೊನ್ನೆ. ಖರ್ಚು ಡಬಲ್. ಹೆಂಡತಿ ಜೊತೇಲಿ ಹೋಗಾಟ ಬರಾಟ ಇದಕ್ಕಾಗಿ ಹಾಗೂ ಒಬ್ಬನೇ ಹೋದರೆ ಎದುರುಗಿರೋ ನನ್ನ ಬಿಟ್ಟು ಎಲ್ಲಿ ನಿಮ್ಮವರು ಬರಲಿಲ್ವಾ, ಅನ್ನೋ ಪ್ರಶ್ನೆಗೆ ಉತ್ತರಿಸಬೇಕು. ಈ ಎರಡೂ ಆಶ್ರಮಕ್ಕೆ ಬದಲಾಗಿ ಯಾವುದಾದರೂ ಆಶ್ರಮ ಸೇರ್ಕ್ಕೊಂಡಿದ್ರೆ ಎಷ್ಟೋ ಚೆನ್ನಾಗಿರುತ್ತಿತ್ತು. ಏನು ಮಹಾ, ಡ್ರೆಸ್ ಒಂದು ಚೇಂಜು ಕಾಷಾಯ ಅಷ್ಟೆ. ಆದರೆ ಮಠದ ಆಸ್ತಿ ? ಈಗಲೂ ಮಿಂಚಿ ಹೋದದ್ದು ಏನು ಮಹಾ! ಯಾವುದಾದರೂ ಮಠದ ಪೀಠ ಖಾಲಿ ಇದ್ರೆ ಹೇಳಿ ಸಾರ್. ನಾನು ರೆಡಿ ಫೋನ್ ನಂಬರ್ ಕೊಡಿ ಸಾಕು. ಮಿಕ್ಕಿದ್ದು ನಾನು ನೋಡ್ಕೋತೀನಿ. ಆದರೆ ಪಾದ ಪೂಜೆಗೆ ಖಂಡಿತ ಬರಬೇಕು ಓ.ಕೆ. ನಾ. ■

---

## ದೇವರ ಆಟ...ಬಲ್ಲವರಾರು....?

**ವಿ.ವಿಜಯೇಂದ್ರ ರಾವ್**

ಬಹಳ ದಿನದಿಂದ ಉಳಿದಿದ್ದ ಹರಕೆಯನ್ನು ತೀರಿಸಲು ತಿರುಪತಿಗೆ ಪರಮೇಶಿ ಹೋಗಿ ದೇವರ ದರ್ಶನವನ್ನು ಮಾಡಿ ಮುಗಿಸಿ ಹೊರಬಂದು, ಕಾಣಿಕೆ ಹುಂಡಿಯ ಸರತಿಯಲ್ಲಿ ಬಂದು ನಿಂತನು. ಅಲ್ಲಿ ಕೂಡ ತುಂಬಾ ಜನಸಂದಣಿಯಿತ್ತು. ಇನ್ನೇನು ಹುಂಡಿಯ ಹತ್ತಿರ ಬಂದಾಗ ಪರಮೇಶಿ ತನ್ನ ಪರ್ಸ್ ತೆಗೆದು ಅದರಲ್ಲಿ ಒಂದು ಹತ್ತು ರೂಪಾಯಿ ನೋಟ್ ತೆಗೆದು ಹುಂಡಿಯಲ್ಲಿ ಹಾಕಿದನು. ಆದರೆ, ಅದು ಸ್ವಲ್ಪ ಹರಿದಿತ್ತು. ಅದನ್ನು ಯಾರಿಗೆ ಕೊಟ್ಟರೂ ತೆಗೆದುಕೊಳ್ಳುತ್ತಿರಲಿಲ್ಲ. ಅದಕ್ಕೆ ಅದನ್ನು ಹುಂಡಿಗೆ ಹಾಕಿದ ನಂತರ, ಭಗವಂತನ ಹತ್ತಿರ ಎಲ್ಲಾ ಚಲಾವಣೆಯಾಗುತ್ತದೆ ಎಂದು ತನಗೆ ತಾನೇ ಸಮಾಧಾನ ಪಟ್ಟುಕೊಂಡನು.

ಅದೇ ಸಮಯದಲ್ಲಿ, ಇವನ ಹಿಂದೆ ಸರತಿಯಲ್ಲಿ ನಿಂತಿದ್ದ ಒಬ್ಬರು, ಪರಮೇಶಿಗೆ ಎರಡು ಸಾವಿರ ರೂಪಾಯಿಯ ಹೊಸ ನೋಟನ್ನು ಕೊಟ್ಟರು. ಹುಂಡಿಯ ಹತ್ತಿರ ತಾನಿರುವುದಕ್ಕೆ ಅದನ್ನು ಕೊಟ್ಟರೆಂದುಕೊಂಡು ಅದನ್ನು ಹುಂಡಿಗೆ ಭಯಭಕ್ತಿಯಿಂದ ಹಾಕಿ, ಏನು ಭಕ್ತಿ ಅವರಿಗೆ, ಅಥವಾ ಏನು ಹರಕೆಯೋ ಏನೋ, ಒಟ್ಟಿನಲ್ಲಿ ಪುಣ್ಯಾತ್ಮ ಅಂದ್ಕೊಂಡು ಆಚೆ ಪ್ರಸಾದ ಕೊಡುವ ಜಾಗಕ್ಕೆ ಬಂದನು.

ಅಲ್ಲಿ ಪ್ರಸಾದ ಪಡೆದುಕೊಂಡು, ಅದನ್ನು ಕಣ್ಣಿಗೊತ್ತಿಗೊಂಡು ತಿನ್ನುತ್ತಿದ್ದಾಗ, ಎರಡು ಸಾವಿರ ರೂಪಾಯಿ ಕಾಣಿಕೆ ಹಾಕಲು ಕೊಟ್ಟ ಆ ಪುಣ್ಯಾತ್ಮ ಸಹ ಅಲ್ಲಿಗೆ ಬಂದನು. ಇಬ್ಬರೂ ಪರಸ್ಪರ ಮುಗುಳ್ನಕ್ಕು ಎಲ್ಲಿಂದ ಬಂದಿದ್ದು, ಯಾವೂರು ? ಅದು– ಇದು ಮಾತನಾಡಿ, ಕೊನೆಗೆ ಪರಮೇಶಿ – ನೀವು ತಿರುಪತಿ ತಿಮ್ಮಪ್ಪನ ಪರಮಭಕ್ತರೇ ಇರಬೇಕು, ಅದಕ್ಕೆ ತಾವು ಎರಡು ಸಾವಿರ ರೂಪಾಯಿಯನ್ನು ಸರ್ವೇ ಸಾದಾರಣವಾಗಿ ಹಾಕಲು ಕೊಟ್ರಿ, ನೀವೇ ಪುಣ್ಯವಂತರು ಎಂದಾಗ, ಅವರು ಆಶ್ಚರ್ಯಕರದಿಂದ ನೋಡಿ – ಯಾಕ್ ಸಾರ್ ನಾನು ಪುಣ್ಯವಂತ? ಆ ದುಡ್ಡು ನಂದು ಅಲ್ಲವೇ ಅಲ್ಲ.... ನೀವು ಪರ್ಸ್ ತೆಗೆದಾಗ, ನಿಮ್ಮ ಪರ್ಸಿಂದಾನೇ ಆ ಹೊಸ ಎರಡು ಸಾವಿರ ಬಿದ್ದದ್ದನ್ನು ನಾನು ನೋಡಿದೆ. ಪಾಪ, ನೀವು ನೋಡಲಿಲ್ಲ, ಅದಕ್ಕೆ ಅದನ್ನು ತೆಗೆದು ನಿಮಗೆ ಕೊಟ್ಟೆ ಅಷ್ಟೇ...! ಆದರೆ, ನೀವೇ ಏನೂ ಯೋಚಿಸದೆ ತಕ್ಷಣ ಹುಂಡಿಗೆ ಹಾಕಿ ಕೈ ಮುಗಿದಿರಿ. ನಾನು ನಿಮ್ಮ ಹಾಗೆ ಅಂದ್ಕೊಂಡೆ ಎಷ್ಟು ದಾನಶೂರ ಭಕ್ತರು ಇವರಪ್ಪ ಎಂದು ನಿಮ್ಮನ್ನು ನೋಡಿ ಅಭಿಮಾನಪಟ್ಟೆ ಎಂದಾಗ...ಡಬ್ ಎಂದು ಜೋರಾದ ಶಬ್ದ ಕೇಳಿಸಿತು, ಪ್ರಾಯಶಃ ಪರಮೇಶಿಯ ದುರ್ಬಲ ಜಿಪುಣ ಹೃದಯವೇ ಇರಬೇಕು ಅಲ್ವೇ.....!

# ಮೊಳೆಯ ಮಹತ್ವ

●ಜಿ.ವಿ. ನಿರ್ಮಲ

'ಒಂದು ಮೊಳೆ ಇಲ್ಲದ ಕಾರಣ ರಾಜ್ಯವೇ ಕೈಬಿಟ್ಟು ಹೋಯಿತು' ಎನ್ನುವುದು ಚಿರಪರಿಚಿತವಾದ ವಿವೇಕಭರಿತ ಉಕ್ತಿ. ಇದರ ಜನಕ ಹದಿನೆಂಟನೆಯ ಶತಮಾನದ ಪ್ರಸಿದ್ಧ ತತ್ತ್ವಜ್ಞ, ಹಾಗೂ ವಿಜ್ಞಾನಿ ಬೆಂಜಾಮಿನ್ ಫ್ರಾಂಕ್ಲಿನ್. ವಿದ್ಯುಚ್ಛಕ್ತಿ ಕ್ಷೇತ್ರದಲ್ಲಿ ಚಮತ್ಕಾರವನ್ನೇ ಮಾಡಿದ ಫ್ರಾಂಕ್ಲಿನ್ ಹಲವು ಸಂಸ್ಥೆಗಳ ಸಂಸ್ಥಾಪಕ, ಸಂಶೋಧಕ, ಮತ್ತು ರಾಜಕಾರಣಿಯೂ ಆಗಿದ್ದ. ಸಾಮಾನ್ಯರಿಗೆ ಸಣ್ಣ ವಸ್ತುವಿನ ಮಹತ್ವ ಅರ್ಥವಾಗುವುದು ಅಪರೂಪವಾದರೂ ಇಂತಹ ತಿಳಿವಳಿಕೆ ಇರುವವರಿಗೆ ಚಿಕ್ಕಚಿಕ್ಕ ವಸ್ತುವಿನ ಮಹತ್ವ ಚೆನ್ನಾಗಿ ಗೊತ್ತಿರುತ್ತದೆ. ಅದಕ್ಕೆ ನಿದರ್ಶನ ಬೆಂಜಾಮಿನ್ ಫ್ರಾಂಕ್ಲಿನ್‌ನ ಪದ್ಯ.

**ಒಂದು ಚಿಕ್ಕ ಮೊಳೆಗಾಗಿ**

ಚಿಕ್ಕ ಮೊಳೆ ಇಲ್ಲದೆ ಕಳೆದಿತ್ತು ಲಾಳ
ಲಾಳದ ದೆಸೆಯಿಂದ ಕಳೆದಿತ್ತು ಕುದುರೆ
ಕುದುರೆ ಇಲ್ಲದೆ ಕಳೆದುಹೋದ ಸವಾರ
ಸವಾರನಿಲ್ಲದೆ ಕಳೆದೇ ಹೋಯ್ತು ಸಂದೇಶ
ಸಂದೇಶವಿಲ್ಲದೆ ಸೋಲಿನ ಪಾಲಾಯ್ತು ಕದನ
ಸೋತ ಕದನದಿಂದ ಕಳೆದ್ಹೋಯ್ತು ರಾಜ್ಯ
ಎಲ್ಲವೂ ಕಳೆದಿತ್ತು ಲಾಳದ ಚಿಕ್ಕ ಮೊಳೆಗಾಗಿ
ಎಲ್ಲವೂ ಕಳೆದದ್ದು ಲಾಳದ ಚಿಕ್ಕ ಮೊಳೆಗಾಗಿ

ಇತ್ತೀಚಿಗೆ ನನಗೆ ಈ ಪದ್ಯ ನೆನಪಾಗಿದ್ದು ಹೀಗೆ. ಒಂದು ಮಂಗಳವಾರ ಮಟಮಟ ಮಧ್ಯಾಹ್ನ ಅಂತರಜಾಲದಲ್ಲಿ ಏನೋ ಹುಡುಕುತ್ತಾ, ಕಂಪ್ಯೂಟರ್‌ನಲ್ಲಿ ಬರವಣಿಗೆಯಲ್ಲಿ ತೊಡಗಿದ್ದೆ. ಇದ್ದಕ್ಕಿದ್ದಂತೆ ಅಂತರಜಾಲ ಗೊಟಕ್ ಎಂದು ಕಣ್ಮುಚ್ಚಿತು. ಈ ಕರೋನ ದಿನಗಳಲ್ಲಿ ಅಂತರ್ಜಾಲ ಬತ್ತಿದರೂ ಜನ ಸುಮ್ಮನಿದ್ದಾರು. ಆದರೆ ಅಂತರಜಾಲದ ಸಂಪರ್ಕ ಕಿತ್ತರೆ ಭೂಮ್ಯಾಕಾಶಗಳನ್ನು ಒಂದು ಮಾಡಿಬಿಡುತ್ತಾರೆ. ಆನ್‌ಲೈನ್ ವ್ಯಾಪಾರ–ವ್ಯವಹಾರಗಳು, ಗೂಗಲ್ ಸಭೆಗಳು, ಮನೆಯಿಂದಲೇ ಕೆಲಸ–ಪಾಠಗಳನ್ನು ಮಾಡುವವರು ಸುಮ್ಮನಿರಲು ಸಾಧ್ಯವೇ? ಆದರೆ ನನಗೆ ಇಷ್ಟೊಂದು ಅನಿವಾರ್ಯತೆ ಇಲ್ಲದ್ದರಿಂದ, ವಯೋಮಾನಕ್ಕೆ ತಕ್ಕಂತೆ ಆಲೋಚಿಸಿ, 'ಏನೋ ತಾಂತ್ರಿಕ ಅಡಚಣೆಯಾಗಿದೆ. ಸ್ವಲ್ಪ ಹೊತ್ತು ಕಾಯೋಣ' ಎಂದುಕೊಂಡೆ. ಒಂದೆರಡು ಗಂಟೆಗಳೇ ಕಳೆದವು. ಊಹುಂ; ಸುಳಿವೇ ಇಲ್ಲ. ನನಗೆ ತಿಳಿದ ತಂತ್ರಗಾರಿಕೆಯನ್ನೆಲ್ಲಾ ಅಂದರೆ ವಿದ್ಯುಚ್ಛಕ್ತಿ ಸಂಪೂರ್ಣ ಸ್ಥಗಿತಗೊಳಿಸಿ, ಮತ್ತೆ ಪ್ರಾರಂಭಿಸುವುದು, ಪ್ಲಗ್‌ಗಳನ್ನು ಒತ್ತುವುದು ಇತ್ಯಾದಿ ಮಾಡಿದೆ. ಬಹು ಮುಖ್ಯವಾಗಿ ಮಾಡಿದ್ದೇನೆಂದರೆ ಪಕ್ಕದ ಮನೆಯವರ ಅಂತರಜಾಲವೂ ಕೆಟ್ಟಿದೆಯೇ ಎಂದು ವಿಚಾರಿಸಿದ್ದು. ವಿದ್ಯುಚ್ಛಕ್ತಿ ಸ್ಥಗಿತವಾದರೂ ಮೊದಲು ಖಾತ್ರಿಪಡಿಸಿಕೊಳ್ಳುವುದು ಪಕ್ಕದ ಮನೆಯಲ್ಲೂ ಸ್ಥಗಿತವಾಗಿದೆಯೇ ಎಂದಲ್ಲವೆ? ಹಾಗೆಂದು ಖಾತ್ರಿಯಾದರೆ ಎಲ್ಲರಿಗೂ ಅಡಚಣೆಯಾಗಿದೆ; ಎಲ್ಲರಿಗೂ ಬಂದಾಗ ನಮಗೂ ಬರುತ್ತದೆ ಎಂದುಕೊಳ್ಳುತ್ತೇವೆ. ಆದರೆ ಪಕ್ಕದ ಮನೆಯವರ ಇಂಟರ್‌ನೆಟ್ ಸೇವೆ ಬೇರೆ ಕಂಪನಿಯದ್ದು ಎಂದು ತಿಳಿದು ನನಗೆ ನಿರಾಶೆಯಾಯಿತು.

ಅಂತೂ ಇಂತೂ ಒಂದೆರಡು ಗಂಟೆಗಳ ನಂತರ ಕಾದ ನಂತರ ದೂರು ನೀಡಲು ಮುಂದಾದೆ. ಈಗ ದೂರುವುದೂ ಮೊಬೈಲ್‌ನ ಆಪ್ ಮುಖಾಂತರವೇ. ಒಂದಷ್ಟು ಅಂಕಿಗಳನ್ನು 'ಒತ್ತಿ, ಒತ್ತಿ', ದೂರು ದಾಖಲಿಸಿದ್ದಾಯಿತು. ದೂರು ಸ್ವೀಕೃತವಾಗಿ, ಇಪ್ಪತ್ನಾಲ್ಕು ಗಂಟೆಗಳಲ್ಲಿ ದುರಸ್ತಿ ಮಾಡುವ ಆಶ್ವಾಸನೆಯೊಂದಿಗೆ ಹತ್ತು ಅಂಕಿಗಳ ಟಿಕೆಟ್ ನಂಬರ್ ನನ್ನ ಮೊಬೈಲ್‌ಗೆ ಬಂತು. ಸರಿ ಕಾಯುವ ಕಾಯಕ ಪ್ರಾರಂಭವಾಯ್ತು. ಸಂಜೆ ಏಳು ಗಂಟೆಯ ಹೊತ್ತಿಗೆ ಫೋನ್ ಕರೆ ಮಾಡಿ, ಮನೆ ಗುರುತು ಕೇಳಿಕೊಂಡು, ದುರಸ್ತಿ ಮಾಡುವ ಇಬ್ಬರು ಯುವಕರು ಬಂದರು. ಕನೆಕ್ಷನ್ ಡಬ್ಬದ ಹುಡುಕಾಟ ಶುರುವಾಯ್ತು. ನಮ್ಮ ಕನೆಕ್ಷನ್ ಡಬ್ಬ ಪಕ್ಕದ ಮನೆಯಲ್ಲಿರುವುದೆಂದು ಪತ್ತೆ ಮಾಡಿದರು. ಅದನ್ನು ನೋಡಲು ಪಕ್ಕದ ಮನೆಗೆ ಹೋದವರು ಮತ್ತೆ ವಾಪಸ್ಸು ಬರಲೇ ಇಲ್ಲ! ಅಲ್ಲಿಂದಲೇ ಅದೃಶ್ಯವಾಗಿಬಿಟ್ಟರು. ನಾವು ಕಾದು, ಕಾದು ಸಾಕಾದೆವು.

ಮರುದಿನ ಇಪ್ಪತ್ನಾಲ್ಕು ಗಂಟೆಗಳಾಗುತ್ತಿದ್ದಂತೆ ಗೂಗಲ್‌ನಿಂದ ಮತ್ತೊಂದು ನಂಬರ್ ಕೆದಕಿ, ನನ್ನ ದೂರಿನ ಸ್ಥಿತಿ ವಿಚಾರಿಸುವ ಕೆಲಸಕ್ಕೆ ಮುಂದಾದೆ. ಅಲ್ಲಿಯೂ ಮತ್ತೊಮ್ಮೆ ಮುದ್ರಿತ ಧ್ವನಿಯ ಆದೇಶದಂತೆ ನಂಬರ್‌ಗಳನ್ನು 'ಒತ್ತೊತ್ತಿ' ಒಬ್ಬ ಅಧಿಕಾರಿಯನ್ನು ಸಂಪರ್ಕಿಸಿದೆ. ಆ ಮಹಿಳಾಮಣಿ ನನ್ನ ಹೆಸರಿನವಳೇ! ನನ್ನ ದೂರು ಆಲಿಸಿ, ಕೆಲ ನಿಮಿಷಗಳು ತನ್ನ ಕಂಪ್ಯುಟರ್‌ನಲ್ಲಿ ಪರೀಕ್ಷಿಸಿದ ನಂತರ 'ಸ್ವಲ್ಪ ದೊಡ್ಡ ಸಮಸ್ಯೆಯಾಗಿದೆ. ನಮ್ಮ ತಂಡದವರು ಅದೇ ದುರಸ್ತಿ ಕಾರ್ಯದಲ್ಲಿ ನಿರತರಾಗಿದ್ದಾರೆ. ದಯವಿಟ್ಟು ಸ್ವಲ್ಪ ಸಮಯ ಕೊಡಿ' ಎಂದರು. ಹಿಂದೊಮ್ಮೆಯ ಸಂಗತಿ ನೆನಪಾಗಿ 'ದೊಡ್ಡ ಸಮಸ್ಯೆಯೆಂದರೆ ಒಂದೆರಡು ವಾರಗಳಾಗಬಹುದೇ?' ಎಂದು ಕೇಳಿದೆ. 'ಅದನ್ನು ಹೇಳುವುದು ಕಷ್ಟ' ಎಂದಳು. ಮತ್ತೇನು ಮಾಡುವುದು? ನಾನು ಬೆಪ್ಪಾಗಿ, ತೆಪ್ಪಗೆ ಕುಳಿತೆ.

ಸಂಜೆ ಆರು ಗಂಟೆಗೆ ನಮ್ಮ ಮನೆಯ ಸ್ಥಿರದೂರವಾಣಿಗೆ ಒಂದು ಫೋನ್. 'ನಿಮ್ಮ ಮನೆಯ ಅಂತರಜಾಲ ಕೆಟ್ಟಿರುವುದೇ?' ಎಂದು ಆರಂಭಿಸಿದ ಆ ಪುರುಷೋತ್ತಮ, 'ನಿಮ್ಮ ಪಕ್ಕದ ಮನೆಯ ತಾರಸಿಯ ಮೇಲಿರುವ ಅಂತರಜಾಲ ಸಂಪರ್ಕ ಜಂಕ್ಷನ್ ಡಬ್ಬಿಯಲ್ಲಿ ಏನೋ ತೊಂದರೆಯುಂಟಾಗಿದೆ. ಮನೆಯವರು ತಾರಸಿಗೆ ಹೋಗಲು ಅನುಮತಿ ನೀಡುತ್ತಿಲ್ಲ. ನೀವು ಒಂದು ಹೊಸ ಡಬ್ಬಿಯನ್ನು ನಿಮ್ಮ ಮನೆಯಲ್ಲಿಯೇ ಇರಿಸಿಕೊಂಡು, ನಿಮ್ಮ ಮನೆಯಿಂದಲೇ ವಿದ್ಯುಚ್ಛಕ್ತಿ ಒದಗಿಸಿ. ನಾವು ಅದಕ್ಕೆ ನಿಮ್ಮ ಅಂತರಜಾಲ ಬಿಲ್‌ನಲ್ಲಿ ರಿಯಾಯಿತಿ ನೀಡುತ್ತೇವೆ' ಎಂದರು. ನಾನು ನನಗೆ ತೋಚಿದ ಅನುಮಾನಗಳಿಗೆಲ್ಲಾ ಕೇಳಿ, ಮತ್ತಷ್ಟು ವಿವರಗಳನ್ನು ತಿಳಿಸಿದ ನಂತರ ನಿರ್ಧರಿಸುವುದಾಗಿ ಹೇಳಿದೆ.

ಸರಿ ರಾತ್ರಿ ಊಟ ಮಾಡುವಾಗ ಮನೆಯ ಸದಸ್ಯರ ಬಿರುಸಿನ ಚರ್ಚೆ ಶುರುವಾಯಿತು. ಇಷ್ಟು ದಿನ ಯಾರು ನಮ್ಮ ಸಂಪರ್ಕ ಡಬ್ಬಿಗೆ ವಿದ್ಯುಚ್ಛಕ್ತಿ ಒದಗಿಸುತ್ತಿದ್ದರು? ಮಳೆಯ ನೀರು ಸುರಿಯದಂತೆ ಡಬ್ಬಿಯನ್ನು ಎಲ್ಲಿಡುವುದು? ವಿದ್ಯುಚ್ಛಕ್ತಿಯನ್ನು ಯಾವ ಕಡೆಯಿಂದ ತೆಗೆದುಕೊಳ್ಳುವುದು? ಮತ್ತಷ್ಟು ಕೇಬಲ್‌ಗಳು ಮನೆಯ ಸುತ್ತಮುತ್ತ ನೇತಾಡುವುದೇ? ನಮ್ಮ ಮನೆಯಿಂದ ಎಷ್ಟು ಮನೆಗಳಿಗೆ ವಿದ್ಯುಚ್ಛಕ್ತಿ ಪೂರೈಕೆಯಾಗುತ್ತದೆ? ವಿದ್ಯುಚ್ಛಕ್ತಿ ಪೂರೈಕೆಗೆ ಅವರು ಕೊಡುವ ಹಣ ಸರಿಯಾಗುತ್ತದೆಯೇ? ಇತ್ಯಾದಿ ಪ್ರಶ್ನೆಗಳು ಚರ್ಚೆಯ ವಿಷಯವಾದವು. ಊಟದ ನಂತರ ಮನೆಯ ಯಜಮಾನರು ಈ ಕಂಪನಿಯ ಸಹವಾಸವೇ ಬೇಡವೆಂದು ಆಲೋಚಿಸಿ, ಫೋನ್ ಮೂಲಕವೇ ಮತ್ತೊಂದು ಕಂಪನಿಯ ಸೇವೆಗಳ ವಿವರಗಳನ್ನು ಪಡೆದುಕೊಂಡರು. ನಾನು ಒಂದು ವೇಳೆ ಡಬ್ಬಿ ಇಟ್ಟರೆ ಮಳೆ ಬೀಳದಂತೆ, ವಿದ್ಯುಚ್ಛಕ್ತಿ

ಪೂರೈಕೆಯಾಗುವಂತೆ ಎಲ್ಲಿ ಇಡಬಹುದೆಂದು ತಲೆಕೆಡೆಸಿಕೊಂಡೆ.

ಮರು ದಿನ ಬೆಳಗ್ಗೆ ಹನ್ನೊಂದು ಗಂಟೆಗೆ ಮತ್ತೊಂದು ಕರೆ. ಪುನಃ ನಮ್ಮ ಮನೆಯ ಗುರುತು ಕೇಳಿದರು. ನಿನ್ನೆ ಹೇಳಿದ್ದೀವಲ್ಲಾ ಎಂದಾಗ 'ಇದು ಬೇರೆ ವಿಭಾಗ. ಸಮಸ್ಯೆ ದೊಡ್ಡದಿರುವುದರಿಂದ ನಮ್ಮ ವಿಭಾಗಕ್ಕೆ ರವಾನೆಯಾಗಿದೆ' ಎಂದರು. ಸರಿ, ಮತ್ತೆ ಯಾವಾಗ ಬರುವರೋ? ಏನೇನು ಸಮಸ್ಯೆಗಳೋ? ಎಂದು ಎದುರು ನೋಡುತ್ತಿದ್ದೆವು. ಸುಮಾರು ಒಂದು ಗಂಟೆ ಕಾಲವಾದರೂ ಯಾರೂ ಬರಲಿಲ್ಲ. ನಾವು ವರಪೂಜೆಗೆ ಬೀಗರು ಬರುವುದನ್ನು ಕಾಯುವಂತೆ ಕಾಯುತ್ತಿದ್ದೆವು. ಆರತಿ ತಟ್ಟೆ ಸಿದ್ಧಪಡಿಸಿರಲಿಲ್ಲ ಅಷ್ಟೆ. ಕೊನಗೆ ತಾಳ್ಮೆ ಕಳೆದುಕೊಂಡು ನಾನೇ ಕರೆ ಮಾಡಿದೆ. ಆಗ ಆ ಯುವಕ ನಾನು ಟ್ರೈಆ್ಯಂಗಲ್ ಪಾರ್ಕ್ ಹತ್ತಿರ ಇದ್ದೇನೆ. ನಿಮ್ಮ ಮನೆ ರಸ್ತೆ ಗೊತ್ತಾಗುತ್ತಿಲ್ಲ ಎನ್ನುವುದೇ? ನಾನು ಸ್ವಲ್ಪ ಸಿಟ್ಟಿನಿಂದಲೇ ಯಾವ ಟ್ರೈಆ್ಯಂಗಲ್ ಪಾರ್ಕ್ ಎಂದು ನನಗೆ ತಿಳಿಯುತ್ತಿಲ್ಲ. ನಮ್ಮ ಮನೆಯ ಹಿಂದೆಯೇ ಶ್ರೀ ರಾಘವೇಂದ್ರ ಸ್ವಾಮಿಗಳ ಮಠವಿದೆ. ಯಾರನ್ನಾದರೂ ಕೇಳಿ ಇನ್ನು ಎರಡು ನಿಮಿಷಗಳಲ್ಲಿ ನಮ್ಮ ಮನೆಗೆ ಬನ್ನಿ ಎಂದು ಹೇಳಿದೆ. ಮತ್ತೆ ಒಂದರ್ಧ ಗಂಟೆಯ ನಂತರ ಆ ಹುಡುಗ ಬಂದು ತಲುಪಿದ.

ಸರಿ, ಮತ್ತೆ ಡಬ್ಬಿ ಎಲ್ಲಿಡುವುದು, ಈಗಿನ ಕೇಬಲ್ ಹೇಗೆ ಬಂದಿದೆ, ವಿದ್ಯುಚ್ಛಕ್ತಿ ಸಂಪರ್ಕ ಎಲ್ಲಿಂದ ನೀಡುವುದು ಎಂದು ಚರ್ಚೆಯಾಯ್ತು. ಯಾವುದಕ್ಕೂ ಈಗಿರುವ ಡಬ್ಬಿಯನ್ನು ಒಂದು ಸಲ ನೋಡಿ ಎಂದು ಹೇಳಿದ ನಾನು, ಪಕ್ಕದ ಮನೆಗೆ ಫೋನ್ ಮಾಡಿ ನಮಗಾಗಿರುವ ಸಮಸ್ಯೆ ಹೇಳಿದೆ. ಅವರು 'ಕರೋನಾ ಸಮಯದಲ್ಲಿ ತಾರಸಿಗೆ ಅಪರಿಚಿತರನ್ನು ಸುಮ್ಮಸುಮ್ಮನೆ ಬಿಡುವುದು ಅಪಾಯವೆಂದು ನಾವು ಯಾರನ್ನೂ ಬಿಡುವುದಿಲ್ಲ. ನಿಮ್ಮ ಮನೆಯವರು ಜೊತೆಗೆ ಬಂದರೆ ಬೀಗದಕೈ ಕೊಡುತ್ತೇವೆ' ಎಂದರು. ಅವರಿಗೆ ಧನ್ಯವಾದ ಹೇಳಿ, ನನ್ನ ಮಗನಿಗೂ ಕಂಪನಿಯ ಹುಡುಗನ ಜೊತೆಗೆ ಹೋಗುವಂತೆ ಹೇಳಿದೆ.

ಇಬ್ಬರೂ ಹೋದಾಗ, ಕರೋನಾಗಾಗಿ ಮುಖಕ್ಕೆ ಮಾಸ್ಕ್, ಕತ್ತಿನವರೆಗೆ ಕೂದಲು ಬಿಟ್ಟಿದ್ದ ನಮ್ಮ ಮಗನ ಗುರುತು ಖಾತ್ರಿಪಡಿಸಿಕೊಂಡ ನಂತರವೇ ಅವರು ತಾರಸಿಯ ಕೀಲಿ ನೀಡಿದರಂತೆ. ತಾರಸಿಗೆ ಹೋಗಿ ಡಬ್ಬವನ್ನು ನೋಡುತ್ತಿದ್ದಂತೆ ದುರಸ್ತಿ ಮಾಡಲು ಬಂದ ಹುಡುಗನಿಗೆ ಸಮಸ್ಯೆ ತಿಳಿದೇ ಹೋಯ್ತು. ಆ ಡಬ್ಬಿಯಲ್ಲಿದ್ದ ಒಂದು ಸಣ್ಣ ಸ್ಕ್ರೂ 'ಲೂಸ್' ಆಗಿತ್ತಂತೆ. ಅದನ್ನು ಗಟ್ಟಿಯಾಗಿ ಬಿಗಿಸಿ, ಹತ್ತು ನಿಮಿಷಗಳಲ್ಲಿ ವಾಪಸ್ಸು ಬಂದರು. ನನಗೆ ಏನೂ ವಿವರ ನೀಡದೆ ನಮ್ಮ ಮನೆಯ ಅಂತರಜಾಲ ಸಂಪರ್ಕ ವ್ಯವಸ್ಥೆಯನ್ನು ಮರುಸ್ಥಾಪಿಸುವ ಕೆಲಸ ಪ್ರಾರಂಭಿಸಿದರು. ನಾನು ಕೂಡ ಹೆಚ್ಚೇನೂ ಪ್ರಶ್ನಿಸಿದೆ ನಮ್ಮ 'ಪಾಸ್ ವರ್ಡ್' ತಿಳಿಸಿದೆ. ಸಂಪರ್ಕ ಸುಗಮವಾದದ್ದನ್ನು ಖಾತ್ರಿ ಪಡಿಸಿಕೊಂಡ ನಂತರ ನಿರಾಳವಾಯ್ತು. ಆ ಹುಡುಗನಿಗೆ ಒಂದು ಲೋಟ ತಣ್ಣೀರು ಕೊಟ್ಟು ಉಪಚರಿಸಿ ಕಳಿಸಿದೆವು.

ಅನಂತರ ನಿಧಾನವಾಗಿ ಏನಾಗಿತ್ತೆಂದು ನನ್ನ ಮಗನನ್ನು ಕೇಳಿದೆ. 'ಏನಿಲ್ಲಮ್ಮ. ಆ ಹುಡುಗನಿಗೆ ಜಂಕ್ಷನ್ ಡಬ್ಬ ನೋಡುತ್ತಿದ್ದಂತೆ ಒಂದು ಸ್ಕ್ರೂ ಲೂಸ್ ಆಗಿರುವುದು ಕಂಡಿತು. ಬಹುಶಃ ಮಳೆಗಾಳಿಗಿರಬೇಕು. ಬಿಗಿ ಮಾಡಿದ ಅಷ್ಟೆ.' ಎಂದ. ಎರಡು ದಿನಗಳು ಅಂತರಜಾಲ ಸಂಪರ್ಕವಿಲ್ಲದೆ ಪರಿತಪಿಸಿ, ಕಂಪನಿಯವರು ನಾನಾ ಸಬೂಬುಗಳನ್ನು ಹೇಳಿ, ನಾವು ಕಂಪನಿಗೆ ಶಪಿಸಿ, ಮನೆಮಂದಿಯೆಲ್ಲಾ ಬಿಸಿಬಿಸಿಯಾಗಿ ಚರ್ಚಿಸಿ ತಲೆಕೆಡೆಸಿಕೊಂಡಿದ್ದ ಅಧ್ಯಾಯ, ಒಂದು ಸ್ಕ್ರೂ ಬಿಗಿತದೊಂದಿಗೆ ಮುಕ್ತಾಯವಾಯ್ತು. ಆಗ ನನಗೆ For Want of a Nail ಪದ್ಯ ನೆನಪಾಯಿತು. ■

# ಓನರ್ ಟೆನೆಂಟ್ ಸಂಬಂಧ

**●ಇ.ಆರ್. ರಾಮಚಂದ್ರನ್**

ನಾನು ಬೆಂಗಳೂರಿಗೆ ಮೊದಲ ಬಾರಿ ಕೆಲಸಕ್ಕೆ ಬಂದಾಗ ಇನ್ನು ಹಳ್ಳಿ ಹೈದ. ಮೀಸೆ ಬಂದಿದ್ದರೂ ಸ್ವಲ್ಪ ಕುರಿನೇ.

ಡಿಗ್ರಿ ಆದ ಮೆಲೆ ಬ್ಯಾಂಕ್ ಕೆಲಸಕ್ಕೆ ಸೇರಿ ಬಾಡಿಗೆ ಮನೆ ಹುಡುಕಕ್ಕೆ ಶುರು.

ಐವತ್ತು ವರ್ಷದ ಹಿಂದೆ ಬೆಂಗಳೂರು ಸ್ವಲ್ಪ ಹಳ್ಳಿಯಾಗೇ ಇತ್ತು. ಬೆಳಿಗ್ಗೆ ಹಾಲಿನವರು ಮನೆಗೆ ಹಸು ತಂದು ಹಾಲು ಕರೆಯೋವ್ರು. ಒಂದು ರೂಪಾಯಿ ಅಗಲ ಕುಂಕುಮ ಬೊಟ್ಟು ಇಟ್ಕೊಂಡು 'ಮೊಸರಮ್ಮ, ಮೊಸರು' ಅಂತ ಕೂಗ್ಕೊಂಡು ಹೋಗೋ ಕಾಲ ಅದು.

ಚಾಮರಾಜಪೇಟೆಲಿ ಒಂದು ಮನೆ ಸಿಕ್ತು. ಮನೆ ಅನ್ನಕ್ಕಿಂತ ಔಟ್ ಹೌಸ್ ಅದು. ಮನೆ ಓನರ್ ಮುಂದುಗಡೆ ಇದ್ರು. ಗಂಡ ಹೋದ ಮೇಲೆ, ಮಕ್ಕಳೆಲ್ಲಾ ಬೇರೆ ಕಡೆ ಹೋದ ಮೇಲೆ ಒಬ್ಬರೇ ಇದ್ದ ಆಕೆ ಔಟ್ ಹೌಸ್ನ ಬಾಡಿಗೆ ಕೊಟ್ರು.

ನನಗೆ ರಾತ್ರಿ ಮಲಗುವ ಮುಂಚೆ ಪತ್ತೆದಾರಿ ಕಥೆಗಳು ಓದುವ ಹುಚ್ಚು. ನಗಾರಿ ನರಸಿಂಹಯ್ಯನವರ ಪುರುಷೋತ್ತಮ ಮತ್ತು ರಾಮನಾಥ ಅವ್ರಿಬ್ಬರು ಬಂದ್ರೇನೆ ನನಗೆ ನಿದ್ರೆ ಬರ್ತಾ ಇತ್ತು. ಅದು ತಪ್ಪಿದ್ರೆ ಪೆರ್ರಿ ಮೇಸನ್ ಯಾರು ಮರ್ಡರ್ ಮಾಡಿದ್ರೂ ಅಂತಾ ಹುಡುಕುವಾಗ ನಾನೂ ಅವರ್ ಜೊತೇಲೆ ಇರ್ತಿದ್ದೆ.

ಒಂದು ರಾತ್ರಿ ನನಗೂ ಡಬಲ್ ಮರ್ಡರ್ ಓದ್ತಾ ಸ್ವಲ್ಪ ಹೆದರಿಕೆ ಆಗ್ತಿದ್ದಾಗ ಇದ್ದಕ್ಕಿದಂತೆ ದೀಪ ಹೋಯಿತು. ಬೆವರಕ್ಕೆ ಶುರು ಆಯ್ತು. ಪೂರ್ತಿ ಅಮಾವಾಸೆಯ ಕತ್ತಲು. ಪಕ್ಕದಲ್ಲೇ ಇದ್ದ ವಾಲ್ಮೀಕಿ ರಾಮಾಯಣ ಪುಸ್ತಕ ಎದೆ ಮೇಲೆ ಇಟ್ಟುಕೊಂಡು,

'ಕೂಜಂತಂ ರಾಮರಾಮೇತಿ ಮಧುರಂ ಮಧುರಾಕ್ಷರಂ,
ಆರುಹ್ಯ ಕವಿತಾ ಶಾಖ, ವಂದೇ ವಾಲ್ಮೀಕಿ ಕೋಕಿಲಂ'

ಹೇಳ್ತಾ ಮಲಗಿದೆ. ಹಾಗೇ ಜೊಂಪು ಹತ್ತಿತು.

ಬೆಳಿಗ್ಗೆ ಎದ್ದು ಆಫೀಸಿಗೆ ಹೋಗುವಾಗ ರಾತ್ರಿ ದೀಪ ಹೋಗಿದ್ದು ಜ್ಞಾಪಕ ಬಂತು. ಅಲ್ಲೇ ತೋಟದ ಹತ್ತಿರ ಇದ್ದ ಓನರ್‌ಗೆ,

' ಮೇಡಮ್! ನಿನ್ನೆ ಇದ್ದಕ್ಕಿದ್ದ ಹಾಗೆ ಕರೆಂಟು ಹೊರಟು ಹೋಯ್ತು. ಮಳೆ ಇಲ್ಲ, ಗಾಳಿ ಇಲ್ಲ ಕೆಇಬಿ ಯಾಕೆ ಹೀಗೆ ಮಾಡ್ತಾರೋ ಅಂದೆ.'

'ನಾನೇ ಮೈನ್ಸ್ ಆಫ್ ಮಾಡ್ದೆ..!. ಈಗ ಕರೆಂಟಿನ ರೇಟು ಸಿಕ್ಕಾಪಟ್ಟೆ ಏರಿಸಿಬಿಟ್ಟಿದ್ದಾರಪ್ಪಾ..ಒಂದಕ್ಕೆ ನಾಲ್ಕರಷ್ಟು ಬೆಲೆ ಕರೆಂಟಿಗೆ.. ರಾಮ ರಾಮ ಹೀಗೇ ಆದ್ರೆ ದೇವ್ರೇ ಗತಿ'.

'ನನಗೆ ಬೇರೆ ಮೀಟರ್ ಹಾಕಿಸಿ ಕೊಡಿ, ನಾನು ನನ್ನ ಬಿಲ್ ಕಟ್ತೀನಿ'

'ಅದು ಇನ್ನೂ ಕಷ್ಟನಪ್ಪಾ..ಅದಕ್ಕೆಲ್ಲಾ ಲಂಚ ಕೊಡ್ಬೇಕು. ಬೇರೆ ಮೀಟರ್ ಅದೆಲ್ಲಾ ಆಗೋ ಮಾತಲ್ಲ. ಒಂದು ಹತ್ತು ನಿಮಿಶ ಎಕ್ಸ್ಟ್ರಾ ದೀಪ ಹಾಕ್ತಿನಿ. ಸ್ವಲ್ಪ ಅಡ್ಜಸ್ಟ್ ಮಾಡ್ಕೋಳಪ್ಪ'.

ಎರಡು ದಿವಸ ಹತ್ತು ನಿಮಿಶ, ಮೂರನೇ ದಿವಸ 5 ನಿಮಿಶ, ನಾಲ್ಕನೇ ದಿವಸದಿಂದ ಕರೆಕ್ಟ್ 10 ಘಂಟೆಗೆ ಹೋಗೋದು. ಹಠಾತ್ತನೆ ಪುರುಷೋತ್ತಮ ನಮ್ಮ ಮನೆಯ ಕತ್ತಲಲ್ಲಿ ಪೇಜಿನಲ್ಲೇ ಕರಗಿ ಹೋಗುತ್ತಿದ್ದ.

ದಿನಾ ಬೆಳಿಗ್ಗೆ ರೇಡಿಯೊ ಸಿಲೋನ್ನಲ್ಲಿ 7.30 ರಲ್ಲಿ ಬರುವ ಹಳೇ ಹಿಂದಿ ಹಾಡು 'ಹಮೇಶ ಜವಾ' ಕೇಳೋದು ಅಂದ್ರೆ ನನಗೆ ಪ್ರಾಣಕ್ಕಿಂತ ಹೆಚ್ಚು. ಅದನ್ನು ಹಾಕಿಕೊಂಡು ಕಾಪಿ ಕೈಯಲ್ಲಿ ಇದ್ದರೆ ಸ್ವರ್ಗ ಸುಖ. ಆ ಸುಖದ ಮದ್ಯೆ ಒಂದು ದಿವಸ, 'ಏನಪ್ಪ, ಅಷ್ಟು ಜೋರಾಗಿ ರೇಡಿಯೋ ಹಾಕಿದ್ದೀಯ'? 'ಇದು ಟ್ರಾನ್ಸಿಸ್ಟರ್ ಅಜ್ಜಿ! ಇದರಿಂದ ಕರೆಂಟು ಖರ್ಚಾಗಲ್ಲ! ಬ್ಯಾಟರಿಲಿ ಓಡುತ್ತೆ'. 'ಅದು ಗೊತ್ತಪ್ಪಾ.. ಇಷ್ಟು ಜೋರಾಗಿ ಹಾಕಿದ್ರೆ ದೇವರ ಸ್ತೋತ್ರ ಹೇಳೋದು ಹೇಗೆ? ಸ್ವಲ್ಪ ಅಡ್ಜಸ್ಟ್ ಮಾಡ್ಕೊ.'

ಬೆಂಗಳೂರಿನಲ್ಲಿ ಆವಾಗಲೇ ನೀರಿನ ಪ್ರಾಬ್ಲಂ ಇತ್ತು. ಭಾವಿಯ ನೀರಿಗೆ ಮೋಟರ್ ಹಾಕಿಸಿದ್ದರಿಂದ ನೀರು ಚೆನ್ನಾಗಿ ಬರುತ್ತಿತ್ತು. ಒಂದು ದಿವಸ ಬಚ್ಚಲಲ್ಲಿ ಕಣ್ಣಿಗೆ ಸೋಪು ಹಚ್ಚಿದ್ದಾಗ ನೀರು ನಿಂತು ಹೋಯಿತು. ಗಾಭರಿಯಲ್ಲಿ ಚೆಂಬು ಎಲ್ಲಿಟ್ಟೀದೀನಿ ಅಂತ ಕಾಣಿಸಲಿಲ್ಲ. ಬಕ್ಕೆಟ್ಟಿಗೂ ನೀರು ಪೂರ್ತಿ ತುಂಬಿಸಿರಲಿಲ್ಲ. ಕೊನೆಗೆ ಸೋಪಿನಿಂದ ಇದ್ದ ಮುಖವನ್ನು ಬಕ್ಕೆಟ್ಟಿನ ಒಳಗೆ ಬಗ್ಗಿಸಿ ಮುಖನ ಅರ್ಧಂಬರ್ಧ ತೊಳೆದೆ. ಸೋಪು ಕಣ್ಣೊಳಗೆ ಹೋಗಿ ಕೆಂಪಾಗಿ ಉರಿಯಿತು. ಮುಖವರೆಸಿಕೊಂಡು ಬಟ್ಟೆಹಾಕಿಕೊಂಡು ಆಫೀಸಿಗೆ ಓಡುವಾಗ, ಓನರ್ ತೋಟದ ಹತ್ರ ಹೂವು ಕೀಳ್ತಿದ್ರು.

'ಸ್ನಾನ ಮಾಡುವಾಗ ಅರ್ಧದಲ್ಲಿ ನೀರು ನಿಂತು ಹೋಯ್ತು... ಆಗ ಮುಖಕ್ಕೆ ಸೋಪು ಹಚ್ಚಿದ್ದೆ. ಈ ಕೆಇಬಿ....'

'.....ಅಯ್ಯೋ ಪಾಪ! ನಾನೇ ಮೋಟರ್ನ ಆಫ್ ಮಾಡ್ದೆ! ಈ ಸಲ ಬಿಲ್ ನೋಡಿದ್ರೆ ಹುಚ್ಚು ಹಿಡಿಯೋದು ಬಾಕಿ. ನೀವು ನೀರು ಹಿಡಿದಿಟ್ಟುಕೊಂಡು ಬಿಡಿ.'

'ನನಗೆ ಇದ್ದಕ್ಕಿದಂತೆ ನೀರು ನಿಲ್ಲುತ್ತೆ ಅಂತ ಗೊತ್ತಿರಲಿಲ್ಲ.'

'ಸ್ವಲ್ಪ ಅಡ್ಜಸ್ಟ್ ಮಾಡ್ಕೊಳೋಪ್ಪ..ಮದುವೆ ಆದ್ರೆ ಇದೆಲ್ಲಾ ಪ್ರಾಬ್ಲಂ ಬರಲ್ಲ.. ನಿಮ್ಮ ಹೆಂಡ್ತಿ ಇದೆಲ್ಲಾ ನೋಡ್ಕೊಳ್ತಾಳೆ.'

ಬೆಂಗಳೂರಿನಲ್ಲಿ 'ಅಡ್ಜಸ್ಟ್' ಮಾಡ್ಕೊಳ್ಳೋದು ಅಂದ್ರೆ ಏನೂಂತ ನನಗೆ ಆವಾಗಲೇ ಚೆನ್ನಾಗಿ ಅರ್ಥವಾಯ್ತು.

ಓನರ್ನ ವಿಶ್ ನನ್ನ ತಂದೆ ತಾಯಿಗೆ ಕೇಳಸಿರ್ಬೇಕು...ಅದರ ಪ್ರಕಾರ ಮದುವೇನೂ ಆಯ್ತು. ಹೆಂಡ್ತಿ ಮನೇಗೆ ಬಂದ್ಲು. ಎರಡು ದಿನ ನಮ್ಮ ಮನೆಗೆ ಬಂದು ಬೆಂಗಳೂರಿನಲ್ಲಿ ಹೇಗೆ ಬದುಕ ಬೇಕು, ಬೀದಿಯಲ್ಲಿ ಬರೋವ್ರಲ್ಲಿ ಯಾರ್‍ಯಾರು ಕಳ್ಳರು, ಠಕ್ಕರು, ಅವ್ರನ್ನು ಹೇಗೆ ಗುರ್ತಿಸಬೇಕೂಂತ ಎಲ್ಲಾ ಪರಿಚಯ ಮಾಡಿಸಿಕೊಟ್ಟರು ಓನರ್ ಮೇಡಮ್..

10 ಘಂಟೆಗೆ ಬದಲು ಒಂಬತ್ತುವರೆಗೆ ದೀಪ ಹೋಗಕ್ಕೆ ಶುರುವಾಯ್ತು. ಯಾಕೆ ಹೀಗೆ ಎಂದು ಕೇಳಿದ್ದಕ್ಕೆ ಮದುವೆ ಆದ ಮೇಲೆ ಬೇಗ ಮಲಗುವುದು ಒಳ್ಳೆಯದಪ್ಪ ಅಂತ ನಮ್ಮಿಬ್ಬರನ್ನು ನೋಡಿ ನಕ್ಕು ಹೊರಟು ಹೋದರು. ನನ್ನ

ಹೆಂಡತಿಯೂ  ಅವರು ಹೇಳಿದ್ದು ಸರಿ ಅನ್ನುವ ಹಾಗೆ ನಕ್ಕು ಅಡುಗೆ ಮನೆ ಸೇರಿದಳು.

ಇದಾದ ಸ್ವಲ್ಪ ದಿನದಲ್ಲಿ ಮತ್ತೆ ಶುರುವಾಯಿತು. ನಿಮ್ಮ ಕೆಲಸದವಳು ಕಸವನ್ನು ಕಾಂಪೋಂಡಿನ ಪಕ್ಕದಲ್ಲೇ ಸುರಿತಾಳೆ.. ದೂರ ಹೋಗಿ ತೊಟ್ಟಿಯಲ್ಲಿ ಸುರಿಯಬೇಕು..ಅವಳು ಬಹಳ ಶೋಕಿ ಮಾಡ್ತಾಲೇ.. ಅವಳನ್ನು ಕಂಟ್ರೋಲ್ನಲ್ಲಿ ಇಡಿ..ಬಟ್ಟೆ ಒಗೆಯುವಾಗ ನೀರನ್ನು ಮಿತವಾಗಿ ಬಳಸಿ...ಮುಂದೆ ಮಳೆ ಬರದಿದ್ದರೆ ಕಷ್ಟವಾಗುತ್ತೆ.. ಇತ್ಯಾದಿ..

ಈ ತಂಟೇನೆ ಬೇರೆ ಮನೆಗೆ ಹೋಗೋಣ ಅಂತ ಅವಳು ಹಠ ಹಿಡಿದಳು. ವಿಶ್ವೇಶ್ವರಪುರಂನಲ್ಲಿ ಮನೆ ಸಿಕ್ತು. ಓನರ್ ಡ್ಯಾನ್ಸ್ ಸ್ಕೂಲ್ ಇಟ್ಟಿದ್ರು. ಬೆಳಿಗ್ಗೆ ಅಲರಿಪುನಿಂದ ಶುರುವಾದರೆ ರಾತ್ರಿ 10 ಘಂಟೆಗೆ ರಾಗಾಲಾಪನೆ ತಿಲ್ಲಾನ ತನಕ ಭರತನಾಟ್ಯಂ ಕ್ಲಾಸಸ್. ವೀಕೆಂಡಿನಲ್ಲಿ ನಾನ್ – ಸ್ಟಾಪ್ ಡ್ಯಾನ್ಸ್. ಬಹಳ ಸೌಂಡು ಬರ್ತಿದೆ, ನಿದ್ರೆ ಮಾಡಕ್ಕೆ ಆಗಲ್ಲಾ ಅಂದ್ರೆ, ಎಲೆಅಡಿಕೆ ಜಗಿದು ಬಂದ ರಸವನ್ನು ಅಲ್ಲೇ ಪಚಕ್ಕನೆ ಉಗುಳಿ, 'ನಿಮ್ಮ ಹೆಂಡತಿನ ನೋಡಿದ್ರೆ ಅವರು ಬಾರ್ನ್ ಡ್ಯಾನ್ಸರ್ ತರಹ ಕಾಣಿಸ್ತಾರೆ. ಅವರ್ನ ಕ್ಲಾಸಿಗೆ ಕಳಿಸಿ. ವನ್ ಯಿಯರ್ನಲ್ಲಿ ರಂಗಪ್ರವೇಶ ಚೌಡಯ್ಯ ಹಾಲ್ನಲ್ಲಿ ಇಟ್ಕೊಳ್ಳೋಹಾಗೆ ಟ್ರೈನ್ ಮಾಡ್ತಿನಿ.' ಅಂದರು ಡ್ಯಾನ್ಸ್ ಮಾಸ್ಟರ್.

ಹೀಗೆ ಎರಡು ಮೂರು ಬಾಡಿಗೆ ಮನೆಯಾದಮೇಲೆ, ಇದರ ಸಹವಾಸವೇ ಬೇಡ ಅಂತ ಜಯನಗರದಲ್ಲಿ ನಮ್ಮ ಬ್ಯಾಂಕಿನಿಂದ ಸಾಲ ತೊಗೊಂಡು 30 * 40 ಸೈಟು ತೊಗೊಂಡಿದ್ದಾಯಿತು. ನಮ್ಮಿಬ್ಬರು ಮಕ್ಕಳು ಮದುವೆಯಾಗಿ ಹೋದಮೇಲೆ ನಮ್ಮದೇ ಸ್ವಂತ ಮನೆ ಕಟ್ಟಿಸಿದ್ವಿ. ನಾವಿದ್ದ ಮನೆಗಳ ಜ್ಞಾಪಕಕ್ಕಾಗಿ ಒಂದು ಔಟ್ ಔಸ್ ಇರ್ಲೀರಿ ಅಂದ್ಲು. ಸೆಲ್ಫ್ ಕನ್ಟೇನ್ಡ್ ಇಂಡಿಪೆಂಡೆಂಟ್ ಬ್ಯಾಚುಲರ್ ಪ್ಯಾಡ್ ಕಟ್ಸಿದ್ದಾಯಿತು.

ಬಾಡಿಗೆ ಕೊಡೋಣ ಅಂತ ಟು–ಲೆಟ್ ಬೋರ್ಡ್ ಹಾಕೋಣ ಅಂದ್ರೆ ನನ್ನ ಅಸಿಸ್ಟಂಟು ಸಿದ್ರಾಮು ಈಗ ಆ ಕಾಲ ಅಲ್ಲಾ ಸಾರ್. ನೀವು 99 ಏಕರ್ಸ್ನಲ್ಲಿ ಆನ್ ಲೈನ್ ರೆನ್ಟಲ್ ಇದೆ ಅಂತ ಆಡ್ ಹಾಕಿ. ಮನೆ ಬೇಕಾದವ್ರು ರಿಪ್ಲೈ ಮಾಡಿದಮೇಲೆ ಮನೆ ಫೋಟೊ ಹಾಕಿ ಅವರು ನೋಡಿದ ಮೇಲೇನೇ ಮುಂದೆ ಮಾತುಕಥೆ. ನಿಮಗೆ ಇದೆಲ್ಲಾ ಆಗೊಲ್ಲ ನಾನು ನೋಡ್ಕೊಳ್ತಿನೀ ಅಂದ.

ಮುಂದೆ ಎರಡು ದಿನದಲ್ಲಿ ಹೂವೆತ್ತಿದ ಹಾಗೆ ಅಂತ ಮುಂಚೆ ಹೇಳ್ತಿದ್ರಲ್ಲಾ.. ಹಾಗೆ ಎಲ್ಲಾ ಆಯಿತು. ಅಗ್ರಿಮೆಂಟು, ಬಾಡಿಗೆ ಅಡ್ವಾನ್ಸ್ ಮತ್ತು ಕಾನ್ಟ್ರಾಕ್ಟ್. ಮನೆ ನೋಡಲು ಚಡ್ಡಿ    ಕೂಲಿಂಗ್ಲಾಸ್  ಮತ್ತು ಕ್ಯಾಪ್ ತಳಕಪಳಕ ಹಾಕಿಕೊಂಡು ಒಬ್ಬ ಇಪ್ಪತ್ತರ ಹುಡುಗ ಅವನ ಸ್ನೇಹಿತನ ಬುಲೆಟ್ ಏರಿ ಬಂದ. ಅಡ್ವಾನ್ಸ್ ಮತ್ತು ಬಾಡಿಗೆ ಗೂಗಲ್ ಪೆ ನಲ್ಲಿ ಕೊಟ್ಟು ಮಾರನೇ ದಿನ ಬರುವುದಾಗಿ ಹೋದ. ನನಗೆ ಅದು ನನ್ನ ಅಕೌಂಟಿಗೆ ಸೇರಿದೇ ಅಂತ ಸಿದ್ರಾಮು ತೋರಿಸ್ದ.

ಅವನು ಬಂದು ಎರಡು ದಿನಕ್ಕೆ ವೀಕೆಂಡು. ಅವನಿಗೆ ಬಾಡಿಗೆ ಮನೆ ಸಿಕ್ಕಿದ್ದಕ್ಕೆ ಸೆಲಿಬ್ರೇಷನ್ ಅಂತೆ. ಸಾಯಂಕಾಲ ಶುರುವಾದ ಮ್ಯೂಸಿಕ್ ಪಾರ್ಟಿ ಎರಡು ಘಂಟೆಗೆ ಮುಗಿಯಿತು. ಊಟ ಹೊರಗಡೆಯಿಂದ ಕೇಟರಿಂಗ್. ಅವನು ಅವನ ಸ್ನೇಹಿತರು –ಹುಡುಗ ಹುಡುಗಿಯರು ಹಾಡಿ, ಕುಣಿದು ಕುಪ್ಪಳಿಸಿದ ಮೇಲೆ ಬುಲೆಟ್ಗಳಲ್ಲಿ

'ಸೀಯು ನೆಕ್ಸ್ಟ್ ವೀಕೆಂಡ್ ಇನ್ ಯುವರ್ ಪ್ಯಾಡ್, ಲವ್' ಅಂತ ಕಿಸ್ ಮಾಡಿ ಹೋದ್ರು.

ಮುಂದಿನ ವಾರ ಬೆಳಿಗ್ಗೆಯಿಂದಲೇ ಅವನ ಮನೆಯಲ್ಲಿ ಲವಲವಿಕೆ. ಭಾನುವಾರ ಅವನ ಮನೆಯಲ್ಲಿ ಕುಕ್ ಔಟ್. ಚಿಕನ್ನ ಬೇಯಿಸಿ, ಸಲಾಡ್ ಮಾಡಿ ಮಧ್ಯಾಹ್ನದ ತನಕ ಬಿಯರ್ ಪಾರ್ಟಿ. ಜೊತೆಗೆ ಮ್ಯೂಸಿಕ್... ನಾಲ್ಕುಘಂಟೆಗೆ ಸಿ ಯು ಲೇಟರ್ ಅಂತ ಫ್ಲೈಯಿಂಗ್ ಕಿಸ್ ಕೊಡ್ತಾ ಬುಲೆಟ್ನಲ್ಲಿ ಹಾರಿ ಹೋದ್ರು. ನಮಗೆ ನಾನ್ ವೆಝ್ ಮೂಗಿಗೆ ಬಡೀತಿತ್ತು.

ನಮ್ಮ ಟೆನೆಂಟು ಮ್ಯೂಸಿಕ್ ಅರೇಂಜರ್ ಅಂತೆ. ನಾನು ಆ ಪದವನ್ನೇ ಇಲ್ಲಿಯ ತನಕ ಕೇಳಿರಲಿಲ್ಲ. ಅವನು ಮ್ಯೂಸಿಕ್ ಕಂಪೋಸರ್ ಅಲ್ಲ. ಮ್ಯೂಸಿಕ್ ಲಿರಿಸಿಸ್ಟೂ ಅಲ್ಲ. ಅರೇಂಜರ್. ಯಾರದೋ ಬರೆದ ಮ್ಯೂಸಿಕ್ನ ಬೇರೇ ರೀತಿ ಅದನ್ನು ಹಾಡ ಬಹುದು, ವಾದ್ಯಗಳಲ್ಲಿ ಬೇರೆ ರೀತಿ ನುಡಿಸಬಹುದು. ಆ ಕೆಲಸವನ್ನು ಅರೇಂಜರ್ ಮಾಡ್ತಾನಂತೆ. ರಾತ್ರಿಯೆಲ್ಲಾ ಬೇರೆ ಬೇರೆ ಟ್ಯೂನುಗಳ ಹಾಡುಗಳು..ಅಲೆಗಳು ನಮ್ಮ ಮನೆಯನ್ನು ಒಂದೇ ಸಮ ಬಿಡದೆ ಆವರಿಸುತ್ತಿತ್ತು. ದುಂಬಿಗಳೆರೆಡು ನಮ್ಮ ಕಿವೀಲೇ ಮನೆ ಮಾಡಿದಿಯೋ ಹಾಗೆ ಅನ್ನೋದು.

ಮೂರು ತಿಂಗಳು ನಿದ್ದೆಗೆಟ್ಟಮೇಲೆ, ಎಲ್ಲಾ ರೀತಿಯ ಮೆನು/ಡ್ರಿಂಕ್ಸ್ ಮೂಗಿಗೆ ಬಿದ್ದಮೇಲೆ ಅವನಿಗೆ ಹೇಗೋ ಪುಸಲಾಯಿಸಿ ಮನೆ ಬಿಡಲು ಹೇಳಿ ಬಿಡಿಸಿದೆವು.

ನೆಕ್ಸ್ಟ್ ಬಂದವಳು ಸಾಫ್ಟ್ವೇರ್ ಹುಡುಗಿ. ತಂದೆ ತಾಯಿ ಗೌರಿಬಿದನೂರಿನವರು, ಹುಡುಗಿ ಅಲ್ಟ್ರಾ ಬೆಂಗಳೂರಿನವಳು. ಬಂದೆರೆಡು ವಾರ ಚೇನ್ನಾಗೇ ಇತ್ತು. ಆಮೇಲೆ ಹುಡುಗಿ ಹೊತ್ತಿಲ್ಲದ ಹೊತ್ತಿಗೆ ನಮ್ಮ ಮನೆಗೆ ಬಂದು 'ಆಂಟಿ! ಬಹಳ ಹಸಿವಾಗ್ತಿದೆ. ಇವತ್ತು ಏನು ಅಡುಗೆ ಮಾಡಿದ್ರಿ? ವಾಂಗೀ ಭಾತು, ಮಜ್ಜಿಗೆ ಹುಳೀನಾ! ಅದು ನನ್ನ ಫೇವರೇಟ್! ಬಹಳ ಥ್ಯಾಂಕ್ಸ್. ನಾಳೆ ನಿಮಗೆ ಮೊಟ್ಟೆಯಿಲ್ಲದೆ ಕೇಕ್ ಮಾಡೋದನ್ನ ಹೇಳಿಕೊಡ್ತೀನಿ. ಯಾಕೆ ಬೇಡ್ವಾ? ಇನ್ನೊಂದು ದಿವಸ.. ನಾನು ಊರಲ್ಲಿ ಇರಲ್ಲಾ.. ಗ್ಯಾಸು ಬರುತ್ತೆ. ಅದನ್ನು ತೆಗೆದು ಇಟ್ಕೊಂಡಿರ್ತೀರಾ? ಪ್ರೆಸ್ ಮಾಡೋದಕ್ಕೆ ಬಟ್ಟೆ ಕೊಟ್ಟದ್ದೆ. ನಾನು ಇವತ್ತು ಆಫಿಸಿನಿಂದಲೇ ಚೆನ್ನೈಗೆ ಹೋಗ್ತಿದೀನಿ. ಕಲೆಕ್ಟ್ ಮಾಡ್ತೀರ? ಯು ಆರ್ ಸಚ್ ಎ ಡಿಯರ್' ಅಂತ ಅವಳ ಮುದಿ ಗಲ್ಲ ಹಿಂಡಿ ದಿನಾ ಒಂದಲ್ಲ ಒಂದು ಕೆಲ್ಸ ಕೊಡೋವ್ಳು. ನನ್ನಾಕೆ ಗಲ್ಲ ಜೋತು ಬಿದ್ದು ಹೋಗುತ್ತೋ ಅನ್ನೋ ಭಯ ಬಂತು.

ಅವ್ಳನ್ನ ಬಿಡಿಸಿದ್ ಮೇಲೆ ಈಗ ಔಟ್ ಹೌಸ್ನಲ್ಲಿ ಹಳೇ ಸಾಮಾನು ಹಾಕಿದೀವಿ. ಮನೆಯನ್ನು ಯಾರಿಗೂ ಬಾಡಿಗೆಗೆ ಕೊಟ್ಟಿಲ್ಲ.

ಕೊನೆಗೆ ಅನ್ಸುತ್ತೆ. ನಮ್ಮಲ್ಲೇ ಒಬ್ಬ ಟೆನೆಂಟು ಮತ್ತು ಮನೆ ಓನರ್ ಇಬ್ಬರೂ ಇರ್ತಾರಾ? ಅವರ ಗುಣಗಳು ತಾನಾಗಿಯೇ ನಮ್ಮನ್ನು ಆವರಿಸಿ ಬಿಡುತ್ತಾ?

ಟೆನೆಂಟು ಮತ್ತು ಓನರ್. ಇಬ್ಬರೂ ಅನ್ಯೋನ್ಯವಾಗಿ ಸಂತೋಷವಾಗಿ ಇರಬೇಕೆಂದರೆ ಅಕ್ಕ ಪಕ್ಕದಲ್ಲಿ ಇರ್ಬಾರ್ದು. ಬೇರೆ ಬೇರೆ ಬಡಾವಣೆಯಲ್ಲಿ ಇದ್ರೆ ಕ್ಷೇಮ; ಬೇರೆ ಬೇರೆ ಊರಲ್ಲಿ ಇದ್ರೆ ಇನ್ನೂ ಉತ್ತಮ, ಇಬ್ಬರಿಗೂ.

■

# ಆಮಾರ್ ಶೋನಾರ್ ಬಾಂಗ್ಲಾ

**●ಜಯಶ್ರೀ ದೇಶಪಾಂಡೆ**

"ಉಳಿಉಳೀ ಉಳುಳೀ ಉಳೀ..ಈ ಈಈಈಈ.. " ಅಂತ ಅವರೆಲ್ಲ ತಮ್ಮ ತಮ್ಮ ಬಾಯಿಗೆ ಕೈಯಿಟ್ಟು ಬಲಗೈಯ ತೋರುಬೆರಳಿನಿಂದ ಎರಡೂ ತುಟಿಗಳನ್ನು ತಪತಪಾ ಅಂತ ತಾಡಿಸುತ್ತ ಳೂ ಳೂ ಳೀ ಳೀ ರಾಗ ಎತ್ತಿದ್ದಾಗ ಆ ಅಬ್ಬರಕ್ಕೆ ನಾನ್ಯಾಕೆ ಇಡೀ ಮಂಟಪವೇ ದದ್ದರಿಸಿ ಹೋಗಿತ್ತು. ಇವರಿಗೇನು ಬಂತಪ್ಪಾ ಇದ್ದಕ್ಕಿದ್ದಂಗ ಹಿಂಗ ಬೆರಳು ಬಾಯಿಗೆ ಹಚ್ಲಿಕ್ಕೆ ಅಂತ ನಾ ಕೂತ ಕುರ್ಚಿಯೊಳಗೇ ದುಬುಕ್ಕಂತ ಒಮ್ಮೆಲೇ ಏಳುವುದೂ ಪಕ್ಕಕ್ಕೇ ಕೂತಿದ್ದ ಲತಕ್ಕ ನನ್ನ ಸೀರೀ ಸೆರಗು ಜಗ್ಗಿ "ಕೂತಿರು ಹಿಂಗ್ಯಾಕ ಚೇಳು ಕಡದವರಂಗ ಎದ್ದಿ" ಅಂತ ಗುರ್ ಅನ್ನುವುದೂ ಏಕಕಾಲಕ್ಕೆ ನಡೆದು ಮತ್ತೆ ವಿಧಿ ಇಲ್ಲದೆ ಅದೇ ಕುರ್ಚಿಯೊಳಗ ದಸಕ್ಕಂತ ಕೂತೆ...

ಅಷ್ಟೊತ್ತಿಗೆ ಅವರ ಆ ಉಳೀ ಉಳೀನೂ ತಾರಕದಿಂದ ಷಡ್ಜ ಅನಂತರ ಮಂದ್ರಕ್ಕಿಳಿದು ಕ್ರಮ ಕ್ರಮೇಣ ಬರೇ ಸಣ್ಣದಾಗಿ 'ಳೀ ಳೀಳೀ'ಗೆ ಬಂದು ಕಡೆಗೂ ಒಮ್ಮೆ ಸ್ತಬ್ಧವಾಯ್ತು...ಆದರೂ ಒಂದೆರಡು ಚಿಳ್ಳೆಗಳು ಇನ್ನೂ ತುಟಿಗೆ ಬಾಯಿ ಬಡಿಯುತ್ತಲೇ ಇದ್ದವು. ಅಷ್ಟರೊಳಗೆ ಮಂಟಪದ ಪಕ್ಕದಲ್ಲೇ ಢೋಲು, ನಗಾರಿ ತುತೂರಿ ಶಹನಾಯಿ ಇತ್ಯಾದಿಗಳು ಭೋರೆಂದುವು. ಚಪ್ಪಾಳೆ ತಾಳಗುಟ್ಟಿತು, ಟಿಪಿಕಲ್ ಬಂಗಾಲೀ ಅಂಚು ಪದರಿನ ಸೀರೆ ಉಟ್ಟು ಸೆರಗಿನ ತುದಿಗಂಟಿನೊಳಗೆ ಅದೇನೋ ಕಿಣಿಕಿಣಿ ಅನ್ನುವ ಚಂದದ ಗೊಂಚಲು ಇಳಿಬಿಟ್ಟುಕೊಂಡಿದ್ದ ಹಿರಿ ಮಾತೆಯರಿಬ್ಬರು ಕೂತಲ್ಲಿಂದಲೇ ಎರಡೂ ಕೈಯೆತ್ತಿ ನಗುನಗ್ತಾ ಅಶೀರ್ವಾದ ಮಾಡಿದ ಸೂಚನಾ ಕೊಟ್ರು.

ಅಲ್ಲಿ ಮಂಟಪದೊಳಗೆ ಮಣೆ ಮೇಲೆ ಕೂತು ವಧು ಮುಖಕ್ಕೆ ನಾಲ್ಕು ವೀಳೆದೆಲೆ ಇಸ್ಪೀಟಿನೆಲೆ ಬಿಡಿಸಿದಂತೆ ಹಿಡ್ಕೊಂಡು ಮುಖ ಮುಚ್ಚಿಕೊಂಡು ಬಂದಳು. ಅವಳ ಮಣೆ ಹೊತ್ತಿದ್ದ ನಾಲ್ಕು ಮಂದಿ ಹಿಂದಕ ಮುಂದಕ ತೂಗಾಡಿ ಕಡೆಗೂ ಅವಳನ್ನ ಸುರಕ್ಷಿತವಾಗಿ ಕೆಳಗಿಳಿಸಿ ಬೆವರು ಒರೆಸಿಕೊಂಡ್ರೂ ಅದೇನೂ ಕಾಣದಂಗ ಬಾಯ್ತುಂಬ ಭರ್ಜರಿ ನಗಿ ತೂರಿದಾಗ "ಮಿಶನ್ ಅಕಂಪ್ಲಿಷ್ಡ್" ಅನ್ನುವ ಭಾವ ತುಂಬಿಕೊಂಡಿತ್ತು ಅವರ ಮುಖದ ತುಂಬ.

"ಬೆಂಗಾಲಿ ಮದುವೆಗಳ ಚಂದವೇ ಬ್ಯಾರೆ. ಅದೂ ಒಂದು ಭಾಳ ವಿಶಿಷ್ಟ, ನೋಡ್ಬೇಕಂತೀಯೇನು ಹಂಗಿದ್ರ ಬಾ" ಅಂತ ಲತಕ್ಕ ಕರೆದಿದ್ದಳು. ನಾನೂ ಬಹಳ ತಿಂಗಳು ಆಗಿಹೋಗಿತ್ತು ಕಲ್ಕತ್ತಾಕ್ಕೆ ಟ್ರಿಪ್ ಹಾಕಿ, ಆಯ್ತು ಹೋಗಿ ಬರೋಣ ಅಂತ ಎದ್ದಿದ್ದೆ.

ಈಗ ಅಲ್ಲಿ ಸುತ್ತ ಮುತ್ತಲಿನ ಜನಜಂಗುಳಿಯ ಸಂಭ್ರಮ ದಕ್ಷಿಣವೋ, ಪೂರ್ವವೋ ಮರೆಸಿ ನಮ್ಮನ್ನೂ ಅದರೊಳಗೆ ತೇಲಿಸಿಬಿಟ್ಟಿತ್ತು.

ಉಳೀಳೀಳೀ ನಿಂತು ಆ ಹೆಂಗಳೆಯರ ಮುಖ ತುಂಬಿದ್ದ ನಗು ಎಲ್ಲಾರೊಳಗೂ ಪ್ರತಿಫಲಿಸಿದಾಗ ಕೇಳಿದೆ "ಇದೇನು ಪದ್ಧತಿ?"

" ಇದೊಂಥರಾ ಆಶೀರ್ವಚನ," ಲತಕ್ಕ ಉವಾಚಿಸಿದಳು "ಮದುವೆ, ಮುಂಜಿವಿ,

ಅಥವಾ ಯಾವ್ದೇ ಶುಭಕಾರ್ಯ ನಡೆದರೂ ಈ ಥರ ಶುಭ ಕೋರ್ತಾರ ಈ ಮಂದಿ"

ಮಂಟಪದ ಚೆಲುವಿನ ಕಡೆ ನೋಡಬೇಕೋ ಅಥವಾ ಮಣೆಮ್ಯಾಲೆ ಕೂತು ತೇಲಿ ಬಂದ ಆ ಮಾಟ ಗೊಂಬೆಯಂಥಾ ವಧುವಿನ ಕಡೆ ನೋಡಬೇಕೋ ಅನಿಸಿತಾದರೂ ಅವಳ ಮುಖಕ್ಕೆ ನಾಲ್ಕು ವೀಳೆಯದೆಲೆಗಳ ಪರದೆ!

ವಧು ಅಂತೂ ಆ ಎಲೆಗಳ ಹಿಂದಡಗಿದ್ದ ಮುಖದಲ್ಲೇ ನಕ್ಕು ನಕ್ಕು ತನ್ನ ಮಣೆಸವಾರಿಯನ್ನ ಏನೋ ಒಂದ್ರೀತಿ ಎಂಜಾಯ್ ಮಾಡುತ್ತಿದ್ಳು ಅಂತಲೇ ನನಗನಿಸಿ, ಒಂದೇ ಕ್ಷಣದೊಳಗೆ ಮನಸು ಫ್ಲ್ಯಾಶ್ ಬ್ಯಾಕಿಗೆ ಹೋಗ್ಬಿಟ್ಟಿತು..

ಚಿಕ್ಕವರಿದ್ದಾಗ ನಾನೂ ನನ್ನ ತಮ್ಮನೂ ಸೇರಿ ಈ ಮಣೆಸವಾರಿಯ ಮಜಾ ಕಾರ್ಯಕ್ರಮ ಇಟ್ಕೊಂಡಿರ್ತಾ ಇದ್ವಿ. ಇದು ನಮ್ಮ ಅಣ್ಣಂದಿರು ಅಕ್ಕಂದಿರು ಮಾಡಿ ಬಿಟ್ಟದ್ದೂ ಇದ್ದೀತು.

ಒಟ್ನಲ್ಲಿ ಹೇಳಬೇಕಂದರೆ ಆಗೆಲ್ಲ ಮನೆಗೆ ಅಗಲವಾದ ಹೊಸ್ತಿಲುಗಳು, ಅದೂ ಗಟ್ಟಿಮುಟ್ಟಾದ ಮರದಿಂದ ಮಾಡಿದ್ದವಿರ್ತಿದ್ದುವಲ್ಲ, ಅಂಥ ಆ ಹೊಸ್ತಿಲ ಮೇಲೆ ಒಂದು ಅಗಲದ ಮಣೆಯನ್ನುಅಡುಗೆ ಮನೆಯಿಂದ ಕದ್ದು ತಂದಿರ್ತಿದ್ವಿ. ಅವನೋ ಒಂದು ಕಬ್ಬಿಣದ ಸರಳನ್ನು ಅದಾಗಲೇ ಎಲ್ಲಿಂದಲೋ ಸಂಪಾದಿಸಿ ತಂದಿರ್ತಿದ್ದ. ಸರಿ ಆ ಬೆನ್ನು ಕೆಳಗಾಗಿಸಿ ಇಟ್ಟ ಮಣೆಯ ಕೆಳಗೆ ಸರಳನ್ನು ಒಂದು ನಿರ್ದಿಷ್ಟ ಜಾಗದಲ್ಲಿಟ್ಟು ಸುತ್ತಿಸಿದರೆ ಮಣೆ ಒಂದೊಂದೇ ಇಂಚಿಂಚಾಗಿ ಹೊಸ್ತಿಲ ಮೇಲೆ ಮುಂದಕ್ಕೆ ಸರಿಯೋದು.. ಆಹಾ ಎಂಥಾ ವೈಜ್ಞಾನಿಕ ಸಂಶೋಧನೆ ಅಲ್ವಾ? ಮತ್ತೀಗ ಆ ಮಣೆ ಮೇಲೆ ಆಸೀನಳಾದ ನನ್ನನ್ನೂ ಬೆನ್ನ ಮೇಲೆ ಹೊತ್ತುಕೊಂಡೇ ಮಣೆ ಇಂಚಿಂಚೇ ಮುಂದೋಡುತ್ತಿದ್ದಾಗ... ಹಾಗೇ ಇಬ್ಬರೂ ಸರದಿ ಮೇಲೆ ಮಣೆ ಸವಾರಿ ಮಾಡ್ತಾ ಬೇರಾವುದೋ ಲೋಕದಲ್ಲಿ ಮುಳುಗಿರ್ತಿದ್ದೆವು, ಮುಳುಗಿದ್ವಾ?!

ಎಲ್ಲಿದ್ದಳೋ ಅಮ್ಮ ಬಂದು ' "ಅಯ್ಯಯ್ಯೋ ಇದೇನ್ ನಡ್ಸೀರೋ ಮಣಿ ಬಣ್ಣ ಎಲ್ಲಾ ಕೆತ್ತಿ ಹಾಕಿದ್ರೆಲ್ಲ.. ಹೊಸಾ ಮಣಿ, ಥೋ ಥೋ ಥೋ, ನಡ್ರಿ ಆ ಕಡೆ ನಡೀರಿ" ಅಂತಂದು ಇಬ್ಬರ ಬೆನ್ನಿಗೂ ಒಂದೊಂದು ಗುದ್ದಿ ಎಬ್ಬಿಸಿ ದೂರ ಅಟ್ಟಿದಳು!

ದಡಕ್ಕನೆ ಮತ್ತೆ ಕುರ್ಚಿಯಿಂದ ಎದ್ದೆ! ಎಷ್ಟೋ ವರ್ಷಗಳು ಹಿಂದೆ ಹೋಗಿದ್ದು, ಅಷ್ಟು ಸುಲಭನಾ ಬ್ಯಾಕ್ ಟು ದ ಪ್ರೆಸೆಂಟು? ಆದರೂ ಬಂದೆ. ಯಾಕೆಂದರೆ ಲತಕ್ಕ ನನ್ನ ಮತ್ತೆ ಎಳೆದು ಕೆಳಗೆ ಕೂಡಿಸಿದ್ದಳು.. ಮತ್ತೆ ಮೆದುಳಿಗೆ ಈ ಕ್ಷಣ ಥಕ್ಕಂತ ಇಳೀತು. ನಾ ಈಗ ಹೊಸ್ತಿಲಿನ ಮೇಲಿನ ಮಣೀ ಮೇಲಿಲ್ಲ ಮತ್ತು ಇದು ಕಲ್ಕತ್ತಾದ ಕಲ್ಯಾಣ ಮಂಟಪ, ಮತ್ತು ನಾ ಇಲ್ಲೊಂದು ಮದುವೆಗೆ ಬಂದಿದ್ದೀನಿ ಅಂತ!

ಅಷ್ಟರೊಳಗೆ ವಧೂಳ ಮುಖದ ಮೇಲಿನ ವೀಳ್ಯದೆಲೆ ಪರದೆ ಕೆಳಗಿಳೀತು. ಬಲು ಚಂದ ಹುಡಿಗಿ. ಹುಬ್ಬಿನ ಸುತ್ತ ಬಿಳೀ ಶಿಂಗಾರ ಚುಕ್ಕಿ, ಅದರ ನಡುನಡುವೆ ಕೆಂಪು ಟಿಕ್ಕಿ ಹಬ್ಬಿ ಹರಡಿ ತುಟಿ ಕೆನ್ನೆ ರಂಗಿನ ಜೊತಿಗೆ ಪೈಪೋಟಿಕೊಟ್ಟಿತ್ತು. ಅಕೀಗೆ ತಕ್ಕಂಥಾ ಒಪ್ಪುವ ವರ. ಇಬ್ಬರ ತಲೆಮೇಲೂ ಕೂಡಿಸಿದ್ದ ಬೆಂಡು, ಚಮಕಿನ ಹಾಳೆ, ಹರಳು ಕುತ್ತಿದ್ದ ಚೂಪು ತುದಿಯ ಕಿರೀಟದ ಎಡಬಲಕ್ಕೆ ಮುತ್ತಿನ ಕುಚ್ಚು ಅಲ್ಲಾಡಿ ನಕ್ಕಿತ್ತು.

ದಶಕಾನುದಶಕ ಪಶ್ಚಿಮ ಬಂಗಾಲ ಅನ್ನೋ ನಮ್ಮ ದೇಶದ್ದೇ, ನಮ್ಮಂಥಾದ್ದೇ ಒಂದು ರಾಜ್ಯ ಯಾವುದೂ ಮರೀಲಾರ್ದೇ ಇದ್ದೆ ನಲ್ಲ? ಆ ಬಂಗಾಳೀ ಸಂಸ್ಕೃತಿಯ ಛಂದನ್ನ ಪದ್ಧತಿಗಳು, ಅವರ 'ಡೌನ್ ಟು ಅರ್ಥ್' ಸಿನಿಮಾಗಳು, ಆ ಸಿನಿಮಾಗಳ ಸುಂದರಿ ನಾಯಕಿಯರು ಉಡ್ತಾ ಇದ್ದಂಥಾ ಗೆರೆಗೆರೆ ಡಿಸೈನಿನ ಅಸ್ಸಲ್ ಹತ್ತಿಯ, ಮತ್ತು ಸಿಲ್ಕಿನ ಸರಳ ಸುಂದರ ಸೀರೆಯ ಚೆಲುವು..ಆ ಸೀರೆ ಸೆರಗಿನ ತುದಿಗೆ ಹತ್ತಾರು ಕೀಲಿಕೈಗಳ ಬೆಳ್ಳಿ ಕುಸರೀ ಗುಚ್ಛ ಕಟ್ಟಿ ಇಳಿಬಿಟ್ಟದ್ದು...ಆಹಾ ಕತೆ ಕಾದಂಬರಿ ಗಳೊಳಗೆ ಓದಿ, ಸಿನಿಮಾಗಳೊಳಗೆ ನೋಡಿ ನೋಡಿ ಮನಸ್ಸು ಅಲ್ಲೇ ಕೀಲಿ ಹಾಕಿ ಕಟ್ಟಿ ಕೂಡಿಸಿಕೊಂಡು ಬಿಡ್ತಿತ್ತು!

ಇದು ಅಷ್ಟೇ ಅನ್ಲಿಕ್ಕೆ ಹೆಂಗ್ ಸಾಧ್ಯ? ಅವರ ಆ ಸ್ಪೆಷಲ್ ಸೊಂದೇಶ್ ಅಂತನ್ನುವ ಆ ತಿನಿಸಿನ ರುಚಿ ನೋಡುವ ಆಸೆ, ಅವರ ಹೃದಯಾಂತರಾಳದ ಹಾಡು "ಅಮಾರ್ ಶೋನಾರ್ ಬಾಂಗ್ಲಾ ..."

ಇವೆಲ್ಲಾ ನನ್ನ ಮನಸ್ಸಿನೊಳಗೆ ವಿಶೇಷ ಜಾಗ ಪಡ್ಕೊಂಡು ಕೂತಿದ್ದದ್ದು ಈಗ ಕಣ್ಣೆದುರಿಗೆ ಬಂದು ಬಹಳ ದಿನದ ಒಂದು ಅಪೇಕ್ಷಾ ಪೂರ್ಣ ಆಗಿತ್ತು. ಒಂದು ಬಂಗಾಳೀ ಪರಿಣಯವನ್ನ ಮೊದಲಿನಿಂದ ಕಡೆಯವರೆಗೆ ಇಂಚಿಂಚೂ ತಪ್ಪದೆ ನೋಡಬೇಕು.

ಇದ್ದಕ್ಕಿದ್ದಂತೆ ವಧೂವರ ಇಬ್ಬರೂ ಎಲ್ಲಾ ಜನ ಕೂತಲ್ಲಿಗೆ ಬಂದರು. ಮೊದಲೊಮ್ಮೆ ಕೈ ಮುಗಿದರು ಮತ್ತೆ ಹಿರಿಯರೆಲ್ಲರ ಹತ್ರ ಹೋಗಿ ಹೋಗಿ ಪಾದಸ್ಪರ್ಶ ಮಾಡುತ್ತ ಬಾಗತೊಡಗಿದರು. ಹಿರಿಯರಾಶೀಷ! ಅದರೊಳಗಿರುವ ಚೆಲುವು ಇನ್ನಾವುದಕ್ಕಿದೆ?


ಹೌದು ನಕ್ಕು ಇದೆಲ್ಲಾ ಅನಿಸಿಕೆಗಳನ್ನ ಕೂಡಿದ ನನ್ನ ಖುಶಿ ಲತಕ್ಕನಿಗೆ ಹೇಳಲು ಬಾಯಿತೆರೆದೆ ಅಷ್ಟೇ..

ಅಕ್ಕಪಕ್ಕ ಗರ್ಜಿಸಿತು "ಉಳಿ ಉಳೀ ಉಳೀ ಉಳುಳೀ ಉಳೀ ಳೀಳೀಳೀಳೀ ಈ ಈ ಈ."

ನನ್ನದೂ ತೋರುಬೆಟ್ಟು ಅಚಾನಕ್ಕಾಗಿ ತುಟಿಗಳ ಹತ್ರ ಹೋಯಿತು. ಆಶೀರ್ವಾದ ಹೆಂಗಿದ್ದರೂ ಚಂದ! ಏನಂತೀರಿ?

■

---



# ಮರೆಗುಳಿ ತಾತ

●ಎಚ್. ಡುಂಡಿರಾಜ್

ಬರ್ತಾ ಬರ್ತಾ ನಮ್ಮ ತಾತ
ಆಗಿದ್ದಾರೆ ಮರೆಗುಳಿ
ಹುಡುಕಾಡುತ್ತಾ ಇರುವುದು
ಅವರ ಕೆಟ್ಟ ಚಾಳಿ

ಪೆನ್ನು ಪೆನ್ನು ಅನ್ನುತ್ತಾರೆ
ಇರುತ್ತೆ ಅದು ಕಿಸೆಯಲ್ಲೇ
ಹುಡುಕುತ್ತಾರೆ ಟವೆಲ್ಲು
ಉಂಟು ಅವರ ಹೆಗಲ ಮೇಲೇ!

ಇನ್ನೂ ಸಿಗಲಿಲ್ಲವೇ ಕನ್ನಡಕ?
ಮೇಜಿನ ಮೇಲಿದೆ ನೋಡಲ್ಲಿ
ಕನ್ನಡಕ ಸಿಕ್ಕಿದರೆ ಸಾಕಾ?
ಕೇಳುವರು ಇದರ ಗೂಡೆಲ್ಲಿ?

ಕೊಡೆಎಲ್ಲಿದೆ? ಕೊಡೆ ಅಂತಾರೆ
ಬಿಟ್ಟು ಬಂದು ಮಂದಿರದಲ್ಲಿ
ಎಲ್ಲೋ ಇಟ್ಟು ಎಲ್ಲೋ ಬಿಟ್ಟು
ಅರಸುವರು ಅದು ಇರದಲ್ಲಿ!

ಹುಡುಕಿಕೊಟ್ಟು ಸುಸ್ತಾದ ಅಜ್ಜಿ
ಹೇಳಿದಳು–ಇನ್ನು ಆಗಲ್ಲ
ನೀವು ಕೇಳಿದ್ದೆಲ್ಲ ಹುಡುಕಲಿಕ್ಕೆ
ಸ್ವಾಮೀ ನಾನು ಗೂಗಲ್ಲಾ?

# ಮತ್ತೆ ರಾಯರು ಬಂದರು

**ಬೇಲೂರು ರಾಮಮೂರ್ತಿ**

ಸೋಮಿ ತವರು ಮನೆಗೆ ಹೋಗಿ ಎರಡು ತಿಂಗಳಾಗಿತ್ತು. ಇಷ್ಟೊಂದು ದೀರ್ಘ ಅವಧಿಗೆ ಸೋಮಿಯನ್ನು ಬಿಟ್ಟಿರಲೇ ಇಲ್ಲ. ಹೀಗಾಗಿ ಸೋಮು ಮಾವನ ಮನೆಗೆ ಹೊರಟ. ಹೇಳದೇ ಹೋಗಿ ಸೋಮಿ ಮುಂದೆ ನಿಂತರೆ ಅವಳ ಮುಖದಲ್ಲಿ ಮೂಡುವ ಅಚ್ಚರಿಯನ್ನು ನೋಡೋದೇ ಒಂದು ಚೆಂದ ಅಂದುಕೊಂಡು ಹೊರಟ. ಬಹಳ ದಿವಸ ಆಯ್ತಲ್ಲ ಅಂತ ಸ್ವಲ್ಪ ಹೆಚ್ಚಿಗೆ ಮಲ್ಲಿಗೆ ಹೂವನ್ನು ಕೊಂಡ. ಸೋಮಿಗೆ ಇಷ್ಟವಾದ ಮೈಸೂರು ಪಾಕ್ ಪ್ಯಾಕ್ ಮಾಡಿಸಿಕೊಂಡ. ಮಾವನ ಊರಿಗೆ ಮೂರು ಗಂಟೆಗಳ ಪ್ರಯಾಣ. ಕಾರು ತಗೊಂಡೇ ಹೊರಟ. ವಾಪಸ್ ಬರುವಾಗ ಸೋಮಿನೂ ಹಿಂದಕ್ಕೆ ಕರ್‍ಕೊಂಡು ಬರಬೇಕು ಅಂದುಕೊಂಡು ಮುಂದಿನ ಸಮಯದ ಮಜಾ ಬಗೆಗೆ ಯೋಚಿಸಿ ಮನ ಕುಲುಕಿಸಿಕೊಂಡು ಹೊರಟ. ಮಾವನ ಮನೆಯಲ್ಲಿ ನನಗೆ ಯಾವ ರೀತಿಯ ಸತ್ಕಾರ ಸಿಗಬಹುದು ಅನ್ನುವ ಕನಸಿನಲ್ಲಿ ಮೈ ಮರೆತ.

ಮಾವನ ಮನೇಲಿ ಒಂದು ಸಣ್ಣ ದೀಪ ಮಾತ್ರ ಉರಿಯುತ್ತಿತ್ತು. ಅಂಗಳದಲ್ಲಿ ಕೂತಿದ್ದ ಮಾವನವರು ಅಯ್ಯೋ ಅಳಿಯಂದಿರು ಬಂದರು ಅಂದು ಅವರೇ ಬಂದು ಬ್ಯಾಗನ್ನು ತೆಗೆದುಕೊಂಡು ಬನ್ನಿ ಬನ್ನಿ ಅಂತ ಒಳಗೆ ಕರೆದುಕೊಂಡು ಹೋಗಿ ಕೂರಿಸಿದರು. ಒಂದೆರಡು ನಿಮಿಷ ಆದ ಮೇಲೆ ನೀರು ಕುಡಿಸ್ಲೇ ಅಂತ ಕೇಳಿದರು. ಸೋಮು ಈ ಸ್ವಾಗತ ನಿರೀಕ್ಷಿಸಿರಲಿಲ್ಲ. ನನ್ನ ಧ್ವನಿ ಕೇಳಿದರೂ ಸೋಮಿ ಯಾಕೆ ಓಡಿಬರಲಿಲ್ಲ ಅಂತ ಯೋಚಿಸುತ್ತಿದ್ದ. ಒಳಗಿನ ಕೋಣೆಯಿಂದ ನಾದಿನಿ ನಂದಿನಿ ಓಡಿ ಬಂದು ಭಾವಾ ಇವತ್ತೇ ಬಂದ್ಬಿಟ್ರಾ ಅಂತ ಕೇಳಿ ನೂರು ಅರ್ಥದ ನಗು ನಕ್ಕಳು.

ಪ್ರಯಾಣ ಚನ್ನಾಗಿತ್ತೇ, ನೀವೇ ಡ್ರೈವ್ ಮಾಡ್ಕೊಂಡು ಬಂದ್ರಲ್ಲ. ಆಯಾಸ ಆಗಲಿಲ್ವೇ ಅಂತ ಕೇಳಿದರು. ಸೋಮುಗೆ ಸೋಮಿ ಎಲ್ಲಿ ಕರೀರಿ ಅಂತ ಕೇಳಬೇಕು ಅಂತ ಆತುರ. ಆದರೆ ಮಾವ ಏನಂದ್ಕೊಳ್ತಾರೋ ಅಂತ ತಡೆದ. ಅತ್ತೆಯೂ ಬಂದು ವಿಚಾರಿಸಲಿಲ್ವಲ್ಲ ಅಂತ ಇನ್ನೊಂದು ಅನುಮಾನ. ಮಾವನವರು ಅಳಿಯಂದಿರೇ ನನ್ನ ಮಗಳು ಹೇಳ್ತಾ ಇದ್ದಳು. ನೀವು ಅದೇನೊ ಹೊಸ ತರಹ ಕಾಫಿ ಮಾಡ್ತೀರಂತಲ್ಲ. ಕಾಫಿಗೆ ಒಂದು ಚೂರು ಉಪ್ಪು ಹಾಕಿ ಒಂದು ಚೂರು ಏಲಕ್ಕಿ, ಶುಂಠಿ, ಹಾಕಿ ಮಾಡ್ತೀರಂತೆ. ಬೊಂಬಾಟ್ ಹೊಸ ರುಚಿ ಬರುತ್ತೆ ಅಂದಿದ್ಲು. ಅಂದರು. ಸೋಮು ಹೌದು ಮಾವ ನಾನು ಹೊಸ ರುಚಿ ಪ್ರಯತ್ನ ಪಡ್ತನೇ ಇರ್‍ತೀನಿ. ಇದು ನನ್ನ ಲೇಟೆಸ್ಟ್. ಹಾಗಾದರೆ ನಮ್ಮಮನೇಲೂ ಮಾಡಬಹುದಾ ಅಂತ ಅವನ ಅನುಮತಿಯನ್ನೂ ಕೇಳದೇ ಅಡಿಗೆ ಮನೆಗೆ ಕರೆದುಕೊಂಡು ಹೋದರು. ಸೋಮು ಅಚ್ಚರಿಯಿಂದ ಇದೇನು ಮಾವ ನನ್ನನ್ನು ಅಡಿಗೆ ಮನೆಗೆ ತಳ್ತಾ ಇದಾರೆ. ಸೋಮಿ ಎಲ್ಲಿ ಅತ್ತೆಯವರು ಎಲ್ಲಿ ಅಂತ ಚಿಂತಿಸುತ್ತಲೇ ಕಾಫಿ ಮಾಡಿದ. ಒಂದು ಗುಟುಕು ಕಾಫಿ ಹೀರಿದ ಮಾವನವರು ಅದ್ಭುತ ಅದ್ಭುತ ಅಳಿಯಂದಿರೇ ನನ್ನ ಮಗಳು ಕೈ ಹಿಡಿದಿರೋದು ಅಂಥಿಂಥಾ ವ್ಯಕ್ತಿಯಲ್ಲ, ಸಾಕ್ಷಾತ್ ನಳಮಹಾರಾಜ ಅಂದರು. ಇಷ್ಟೆಲ್ಲಾ ಆದರೂ ಸೋಮಿಯ ಸುಳಿವಿಲ್ಲ. ಕೇಳೋಕೆ ಸಂಕೋಚದಲ್ಲೇ ಕಳೆದ. ನಾದಿನಿ ನಂದಿನಿ ಎರಡು ಲೋಟ ಕಾಫಿ ತಗೊಂಡು ಹೊರಟಳು. ಸೋಮು ಎಲ್ಲಿಗೆ ಹೊರಟೆ ಅಂತ ಕೇಳಿದ. ಮಾವನವರು ಮಾತಾಡಲಿಲ್ಲ. ನಂದಿನಿ ನಗುತ್ತಾ ಹೊರಟುಹೋದಳು.

ಅಳಿಯನ ಬೆನ್ನು ತಟ್ಟಿ ಇನ್ನೇನ್ ಅಳಿಯಂದಿರೇ ಹೇಗಿದೆ ನಿಮ್ಮ ಕೆಲಸ ಅಂತ ಮಾತಿಗೆ ಷುರು ಹಚ್ಚಿಕೊಂಡ ಮಾವನವರು ಬನ್ನಿ ನಮ್ಮ ಹಿತ್ತಲಿಗೆ ಹೊಸ ಹೊಸ ಗಿಡಗಳನ್ನು ತೋರಿಸ್ತೀನಿ ಅಂತ ಹಿತ್ತಲಿಗೆ ಕರೆದುಕೊಂಡು ಹೋದರು. ಆಗಲೂ ಸೋಮಿ ಸುಳಿವಿಲ್ಲ. ಇನ್ನು ತಡೆಯಲಾರೆ ಅಂತ ಸೋಮು ಮಾವ ಸೋಮಿ ಎಲ್ಲಿ ಕಾಣಿಸ್ತಿಲ್ಲ ಅಂತ ಕೇಳಿದ. ಮಾವನವರು ನಗುತ್ತಾ ಇನ್ನೇನು ಬಂದುಬಿಡ್ತಾಳೆ. ಅವಳೂ ನಮ್ಮನೆಯವಳೂ ಇಲ್ಲೇ ನಮ್ಮ ಸ್ನೇಹಿತರ ಮನೇಲಿ ಒಂದು ನಿಶ್ಚಿತಾರ್ಥ. ಅಲ್ಲಿಗೆ ಹೋಗಿದಾರೆ. ರಾತ್ರಿ ಅವರದು ಅಲ್ಲೇ ಊಟ. ನಮ್ಮದು ನೋಡೋಣ ಅಂದರು. ಸೋಮು ಪಾತಾಳಕ್ಕಿಳಿದು ಹೋದ.

ಮಾವನವರು ಮಾತನಾಡುತ್ತಾ ಸೋಮಿ ನಿಮ್ಮ ಬಗ್ಗೆ ಎಲ್ಲ ಹೇಳ್ತಿರ್‍ತಾಳೆ. ಅದೇನೋ ಬಾಂಬೆ ಪಲಾವ್ ಅಂತ ಮಾಡ್ತೀರಂತೆ. ಭಲೇ ಚನ್ನಾಗಿರುತ್ತೆ ಅಂದಳು, ನಮಗೊಂದು ಸಾರಿ ಅದರ ರುಚಿ ತೋರಿಸಿ ಅಂದರು. ಸೋಮುಗೆ ಯಾರಾದರೂ ಹೊಗಳಿದರೆ ಅಟ್ಟಕ್ಕೇ ಏರಿಬಿಡ್ತಾನೆ. ಅದಕ್ಕೇನಂತೆ ಆಗಲಿ ಅಂದ. ಹಿತ್ತಲಕಡೆಯಿಂದ ಬೇಗ ಬೇಗ ಮನೆಯೊಳಗೆ ಬಂದು ಬಾಂಬೆ ಪಲಾವ್ ಅಂದ ಮೇಲೆ ನನ್ನ ಬಾಯಲ್ಲಿ ನೀರೂರ್‍ತಿದೆ. ಅದರ ಸವಿರುಚಿ ಇವತ್ತೇ ಯಾಕೆ ಆಗಬಾರದು ಅಂದರು. ಸೋಮು ಮತ್ತೆ ಹಳ್ಳಕ್ಕೆ ಬಿದ್ದ. ಅಡಿಗೆ ಮನೆ ಸೇರಿ ಎಲ್ಲ ಪರಿಕರಗಳನ್ನೂ ಹೊಂದಿಸಿಕೊಂಡು ಬಾಂಬೆ ಪಲಾವ್ ತಯಾರಿಸಲು ಷುರುಮಾಡಿದ. ಆಗಾಗ ನಾದಿನಿ ಬಂದು ಭಾವನನ್ನು ನೋಡಿ ಕಿಸಕ್ಕಂತ ನಕ್ಕು ಹೊರಟುಹೋಗುತ್ತಿದ್ದಳು. ಹಾಗೊಮ್ಮೆ ಅವಳು ಹೋಗುವಾಗ ಅವಳ ಜಡೆ ಹಿಡಿದೆಳೆದು ನಿಮ್ಮಕ್ಕನ್ನ ಬೇಗ ಬರೋಕೆ ಹೇಳು ಅಂದ. ನಾನೂ ಹೇಳಿದೆ ಬಾವ ಆದರೆ ಅಕ್ಕ ಹೇಳಿದರು ಬರೋಕೆ ತುಂಬಾ ತಡವಾಗುತ್ತಂತೆ ಅಂದು ಹೊರಟುಹೋದಳು

ಮಾವನವರು ಆಗಾಗ ಅಳಿಯಂದಿರೇ ಭಲೇ ಭಲೇ ಏನು ವಾಸನೆ ಘಮ ಘಮ ಅಂತಿದೆಯಲ್ಲಾ,ಇಂಥಾ ಪಲಾವು ತಿನ್ನೋಕೆ ಅದೇನು ಪುಣ್ಯ ಮಾಡಿದ್ದೆನೋ ನನಗೆ ಗೊತ್ತಿಲ್ಲ ಅಂದು ಸಂಭ್ರಮಿಸಿದರು. ಇನ್ನೂ ಪೂರ್ತಿ ಆಗೋಕಿಲ್ಲ ಆಗಲೇ ಒಂಚೂರು ಬಾಯಿಗೆ ಹಾಕಿಕೊಂಡು ತಲೆ ಕುಣಿಸಿದರು.

ಪಲಾವ್ ಮುಗಿದರೂ ಸೋಮಿಗೆ ಬುಲಾವ್ ಹೋಗಲಿಲ್ಲ. ಅವಳು ಬರಲಿಲ್ಲ. ಅವಳಿಲ್ಲದ ಈ ಮನೆ ಮನೆಯೇ ಅಲ್ಲ ಅನಿಸಿತು. ಅವಳಿಲ್ಲದ ಊಟ ಊಟವೇ ಅಲ್ಲ ಅನಿಸಿದರೂ ಹೊಟ್ಟೆ ಕೇಳಬೇಕಲ್ಲ. ಮಾವ ಅಳಿಯಂದಿರೇ ಅಳಿಯಂದಿರೇ ಅಂದುಕೊಂಡು ಪಲಾವನ್ನು ಚನ್ನಾಗಿ ಬಾರಿಸಿದರು. ಜೊತೆಗೆ ಮೊಸರನ್ನ. ಬಾವನಿಗೆ ಕಾಣದಂತೆ ನಂದಿನಿ ಎರಡು ತಟ್ಟೆಗಳಲ್ಲಿ ಪಲಾವು ಮೊಸರನ್ನ ಹಾಕಿಕೊಂಡು ಹೊರಟಳು. ಅಂತೂ ಸೋಮು ಮಾಡಿದ ಪಲಾವ್ ಖಾಲಿಯಾಯಿತು.

ಹೊಟ್ಟೆ ತುಂಬಿತು, ಮನಸ್ಸು ತುಂಬಲಿಲ್ಲ. ಮಾವ ನಾನೇ ಹೋಗಿ ಸೋಮಿನ ಕರ್‍ಕೊಂಡು ಬರ್‍ತೀನಿ. ಎಲ್ಲಿಗೆ ಹೋಗಿದಾಳೆ ಹೇಳಿ ಅಂದ ಸೋಮು. ಮಾವನವರು ಅಯ್ಯಯ್ಯೋ ಬೇಡಿ ನೀವು ಅಲ್ಲೆಲ್ಲಾ ಹೋಗಬಾರದು. ಅವಳೇ ಬರ್‍ತಾಳೆ. ನೀವು ಬರೋದು ಅವಳಿಗೆ ಗೊತ್ತಿಲ್ಲವಲ್ಲ. ಇನ್ನೇನು ಬರೋ ಹೊತ್ತು. ಅವಳು ಬಂದು ನಿಮ್ಮನ್ನು ನೋಡಿದ ತಕ್ಷಣ ಅದೆಷ್ಟು ಸಂತೋಷ ಪಡ್ತಾಳೇಂತೀರ. ಬನ್ನಿ ಬನ್ನಿ ಹಾಸಿಗೆ ಹಾಸಿದೀನಿ ಹಾಗೇ ಕಾಲು ಚಾಚಿ ಅಂದರು.

ಕಾಲು ಚಾಚಿದರೂ ಸೋಮುಗೆ ನಿದ್ದೆ ಬರಲಿಲ್ಲ. ಸೋಮು ಜೊತೇಲಿ ಇಲ್ಲ ಅಂದರೆ ಅದೇನು ನಿದ್ದೆಯೇ ಅನಿಸಿತು. ಸೋಮಿ ಮಾತುಗಳ ಸಂಭ್ರಮವಿಲ್ಲ.

ಅವಳು ಮುಡಿಯುವ ಮಲ್ಲಿಗೆಯ ಘಮವಿಲ್ಲ. ಅವಳ ತುಂಟತನದ ಮಾತುಗಳಿಲ್ಲ. ಇವೆಲ್ಲಾ ಇಲ್ಲದ ಮೇಲೆ ಅಂಥಾ ಬದುಕು ಯಾಕೆ ಬೇಕು ಅಂತ ಹಾಸಿಗೆಯಲ್ಲಿ ಹೊರಳಿದ್ದೇ ಹೊರಳಿದ್ದು. ರಾತ್ರಿ ಹನ್ನೆರಡರ ಹೊತ್ತಿಗೆ ಬಾಗಿಲು ಸದ್ದಾಗಿದಾಗ ಓಡಿ ಹೋಗಿ ಸೋಮು ಬಾಗಿಲು ತೆಗೆದ. ಅಳಿಯಂದಿರೇ ಅಳಿಯಂದಿರೇ ಅಂತ ಮಾವನವರು ಕೂಗುತ್ತಿದ್ದರೂ ಸೋಮು ಓಡಿದ. ಮಾವನವರೂ ಹಿಂದೆ ಹೋದರು. ಬಾಗಿಲಲ್ಲಿ ನಿಂತವರನ್ನು ನೋಡಿ ಸೋಮುಗೆ ಆದ ನಿರಾಸೆ ಅಷ್ಟಿಷ್ಟಲ್ಲ. ಯಾರೋ ಹಳ್ಳಿಯವನು ನಿಂತಿದ್ದ. ಅವನು ಸೋಮುನ ನೋಡಿ ಯಾರ್ರೀ ನೀವು. ಈ ಮನೇಲಿ ಏನ್ ಮಾಡ್ತಿದೀರ ಅಂತ ಜೋರಾಗಿ ಅಂದ. ಅಷ್ಟೊತ್ತಿಗೆ ಮಾವನವರು ಬಂದು ಅಯ್ಯಯ್ಯೋ ಅವರನ್ನು ಹಾಗೆಲ್ಲ ಅನ್ನಬೇಡಪ್ಪಾ ಅವರು ನಮ್ಮ ಅಳಿಯಂದಿರು ಅಂದು ಬಂದವನ ಜೊತೆ ಅದೇನೋ ಮಾತಾಡಿ ಕಳಿಸಿದರು. ಸೋಮು ತಲೆ ಮೇಲೆ ಹೊಡ್ಕೊಂಡು ಮತ್ತೆ ಬಂದು ಮಲಗಿದ.

ಎಂಥಾ ದರಿದ್ರ ಬದುಕಾಯಿತು ನನ್ನದು ಅಂತ ಅಂತ ಶಪಿಸಿಕೊಂಡೇ ಮಲಗಿದವನಿಗೆ ಬೆಳಗಿನ ಝಾವ ಎಚ್ಚರವಾಯಿತು. ಸೋಮಿ ಬಂದ್ರೆ ಬರಲಿ ಬಿಟ್ಟರೆ ಬಿಡಲಿ ನಾನು ಇಲ್ಲೇ ಇದ್ದರೆ ಇವತ್ತು ಈ ಮಾವ ನನ್ನ ಕೈಲಿ ಉಪ್ಪಿಟ್ಟು, ಅನ್ನ ಸಾರು, ಹುಳಿ ಎಲ್ಲ ಮಾಡಿಸ್ತಾರೆ, ಅಷ್ಟೇ ಅಲ್ಲ ಪಾತ್ರೆನೂ ತೊಳೆಸಿಬಿಡ್ತಾರೆ. ಇಲ್ಲಿಂದ ಕಂಬಿ ಕೀಳೋದು ವಾಸಿ ಅಂದ್ಕೊಂಡು ಹೊರಡೋಕೆ ರೆಡಿಯಾದ. ಮಾವನವರು ಗಾಬರಿಯಿಂದ ಅಯ್ಯೋ ಅಯ್ಯೋ ಅಳಿಯಂದಿರೇ ಇದೇನು ಹೀಗೆ ಹೊರಟುಬಿಟ್ರಾ ಅಂದರು. ನಾದಿನಿ ನಂದಿನಿ ಒಳಮನೆಯಿಂದ ಭಾವ ಹೋಗಬೇಡಿ ನೀರಾಗಿದೆ ಅಂದಳು. ಸೋಮು ಮುಖ ಅರಳಿತು. ಕೈಲಿ ಹಿಡಿದಿದ್ದ ಬ್ಯಾಗನ್ನು ಅಲ್ಲೇ ಬಿಸಾಕಿ ಸೋಮಿಯನ್ನು ಕಾಣಲು ಕಾತುರನಾದ. ಒಳಕೋಣೆಯಿಂದ ಅತ್ತೆ ತಲೆಗೆ ಹೂವು ಮುಡಿದುಕೊಂಡು ನೆನ್ನೆ ಬಂದ್ರಂತೆ ಅಳಿಯಂದಿರೇ ಬನ್ನಿ ಕೂತ್ಕೊಳಿ ಮೊದಲು ಕಾಫಿ ಮಾಡ್ತೀನಿ ಆಮೇಲೆ ನಿಮಗಿಷ್ಟವಾದ ತಿಂಡಿ ಮಾಡ್ತೀನಿ ಅಂದರು. ಸೋಮು ಮತ್ತೆ ಪೆಚ್ಚಾದ. ಅತ್ತೆಯವರು ಅಡಿಗೆ ಮನೆಗೆ ಹೋಗುತ್ತಾ ನಕ್ಕು ನನಗೆ ಇವತ್ತು ನೀರು, ಸೋಮಿಗೆ ನಾಡಿದ್ದು ನೀರು ಅಂತ ಹೇಳುತ್ತಿರುವಂತೆ ಸೋಮು ಬಿಸಾಕಿದ್ದ ಬ್ಯಾಗು ತೆಗೆದುಕೊಂಡು ಮಾವನವರು ಅಳಿಯಂದಿರೇ ಅಳಿಯಂದಿರೇ ಅಂತ ಕೂಗುತ್ತಿದ್ದರೂ ಕೇಳಿಸಿಕೊಳ್ಳದೇ ಕಾರಿನಲ್ಲಿ ಕೂತು ಹೊರಟೇಬಿಟ್ಟ.

ಕಿಟಕಿಯ ಸರಳುಗಳ ಹಿಂದೆ ನಿಂತು ಸೋಮುನ ಗಮನಿಸುತ್ತಾ ಅಚ್ಚರಿಯಾದರೂ ಮುಸಿಮುಸಿ ನಗುತ್ತಿದ್ದ ಸೋಮಿಯ ಮುಖವನ್ನು ಕಡೆಗೂ ಸೋಮು ನೋಡಲೇ ಇಲ್ಲ. ಇನ್ಯಾವತ್ತೂ ಮಾವನ ಮನೆಗೆ ಹೇಳದೇ ಕೇಳದೇ ಬರಲೇಬಾರದು ಅಂತ ಅಂದುಕೊಂಡು ಹೊರಟವನಿಗೆ ಅಲ್ಲಾ ಅತ್ತೆಗೆ ಇವತ್ತು ನೀರಾದರೆ ನನಗೆ ಬಂದ ಭಾಗ್ಯವೇನು ಅನಿಸಿತು.

ಕಿರ್ರ್ ಅನ್ನುವ ದೊಡ್ಡ ಶಬ್ದದೊಂದಿಗೆ ಕಾರು ಏಕ್‌ದಂ ನಿಂತಿತು. ಸೋಮು ಮೈ ದೊಡ್ಡದಾಗಿ ಅದುರಿತು. ಕಣ್ಣು ಅಗಲವಾಗಿ ಬಿಟ್ಟವನಿಗೆ ಎದುರಿಗೆ ಒಂದು ದೊಡ್ಡ ಹಸು ಕಂಡಿತು. ಸೋಮು ಗಾಬರಿಗೊಂಡ. ಅಬ್ಬಾ ಕಾರಿನಲ್ಲಿ ಕೂತೇ ಎಂಥಾ ಕನಸು ಕಂಡ್ನಪ್ಪಾ. ಸಧ್ಯ ಈ ಹಗಲುಗನಸು ನಿಜವಾಗದೇ ಇರಲಿ ಅಂತ ಕಾರು ಚಲಾಯಿಸಿದವನಿಗೆ ಸೋಮಿ ಊರು ಇನ್ನೂ ಹತ್ತು ಮೈಲಿ ದೂರವಿದೆ ಎನ್ನುವ ಫಲಕ ಕಾಣಿಸಿತು. ■

# ಒಂದರೆಗಳಿಗೆ ಆ ನಂದನವನವ ನೆನೆಸಿಕೊಂಡರೆ

**●ಪುಷ್ಪಲತಾ ಟಿ.ಜಿ.**

ಇನ್ನೇನು ಭೂಮಿತಾಯಿಯ ಇನಿಯ ಧರೆಗಿಳಿದು ಪ್ರೀತಿಯ ಸೋನೆ ಸುರಿಸುತ್ತಾ ಮುತ್ತಿಕ್ಕುವ ಸಮಯ. ಇನಿಯನ ಆಗಮನಕ್ಕೆ ಕಾದುಕುಳಿತ ಭೂಮಿ ಹಸಿರಾಗಿ ನಳನಳಿಸುವ ಸಮಯ.

ಏಪ್ರಿಲ್ ಇಂದ ಶುರುವಾದ ಬೇಸಿಗೆ ರಜೆಯಲ್ಲಿ ತಮ್ಮದೇ ಸಾಮ್ರಾಜ್ಯ ಸ್ಥಾಪಿಸಿ ಚಕ್ರವರ್ತಿಗಳಂತೆ ಮೆರೆಯುತ್ತಿದ್ದವರೆಲ್ಲ ಜೂನ್ 1,2 ಸಮೀಪಿಸುತ್ತಿದ್ದಂತೆ ದಾಳಿಗೆ ಹೋಗುವ ಸೈನಿಕರಂತೆ ಯುದ್ಧಕ್ಕೆ ತೆರಳುವ ತಯಾರಿ ನಡೆಸುವ ಸಮಯ.

ಹೊಸ ಬ್ಯಾಗ್, ಬಣ್ಣಬಣ್ಣದ, ರಂಗುರಂಗು ಹೂವಿನ ವಿವಿಧ ಚಿತ್ತಾರದ ಛತ್ರಿ, ಹೊಸ ನೋಟ್ಬುಕ್‌ನ ಘಮ, ಪುಸ್ತಕಗಳನ್ನು ಅಪ್ಪಿಕೊಳ್ಳಲು ಕಾತರಿಸುವ ಬೈಂಡ್ ಪೇಪರ್, ಅದರ ಮೇಲೆ ಅಂಟಲು ಸಿದ್ಧವಾದ ವಿವಿಧ ಸ್ಟಿಕರ್, ಅವೋ... ಕಾರು, ಬೊಂಬೆ, ಹೂವು, ಹಣ್ಣು ಹೀಗೆ ನಾನ ಸ್ಟಿಕ್ಕರ್‌ಗಳು, ಜಾಮೆಟ್ರಿ, ಸ್ಕೇಲು, ಪೆನ್ನು ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಇಬ್ಬರು ಮಕ್ಕಳಿದ್ದರಂತೂ ನನಗೆ ಅದು, ನನಗೆ ಇದು ಎಂಬ ಗಲಾಟೆ. ಕೊನೆಗೂ ಅಪ್ಪನೇ ಬರಬೇಕು ಹೊಂದಿಸಿಕೊಡಲು.

ಅಂತೂ ಕಡೆಗೆ ತನ್ನದು ಎಂಬ ಒಂದಿಷ್ಟು ವಸ್ತು ಬ್ಯಾಗಿನೊಳಗೆ ವ್ಯವಸ್ಥಿತವಾಗಿ ಜೋಡಿಸಿ ಪೂರ್ತಿಯೋ, ಅರ್ಧವೋ ಬರೆದಿಟ್ಟ ಹೋಂವರ್ಕ್‌ಗಳನ್ನೆಲ್ಲಾ ತುಂಬಿ ಹೊಸ ಬ್ಯಾಗ್ ಎಂಬ ಕರುಣೆಯಿಂದಲೋ... ಪ್ರೀತಿಯಿಂದಲೋ.. ಒಂದೆಡೆ ಎತ್ತಿಟ್ಟು ಮಲಗಿದರೆ ತಯಾರಿ ಮುಗಿದಂತೆ.

ಬೆಳಿಗ್ಗೆ ಅಮ್ಮ ಕರೆಯುತ್ತಿದ್ದಂತೆ ಶಾಲೆ ನೆನಪಾಗಿ ದಡಕ್ಕನೆ ಎದ್ದು ಸ್ನಾನ ಮಾಡಿ ಆಗತಾನೆ ಹೊಲೆದು ಐರನ್ ಮಾಡಿಕೊಟ್ಟ ಹೊಸ ಯೂನಿಫಾಮ್ ಹಾಕಿ ಟೈ ಕಟ್ಟಿ ಬೆಲ್ಟ್ ಹಾಕಿ ತಲೆಬಾಚಿ ಅಮ್ಮ ಪೌಡರ್ ಹಚ್ಚುತ್ತಿದ್ದರೆ ಇತ್ತ ಮಗಳು ತನ್ನದಿನ್ನು ರೆಡಿಆಗಿಲ್ಲವೆಂಬ ರಾದ್ಧಾಂತ.

ಈಗ ಅವಳ ತಯಾರಿಗೆ ಅಮ್ಮ ಮುಂದು. ಹೊಸ ಯೂನಿಫಾರ್ಮ್ ಸ್ಕರ್ಟ್ ವ್ಯವಸ್ಥಿತವಾಗಿ ತೊಡಿಸಿ ಆಗತಾನೆ ಚಿಗುರುತ್ತಿರುವ ಚೋಟುದ್ದ ಕೂದಲನ್ನು ಜುಟ್ಟವೋ ಜಡೆಯೋ ಒಟ್ಟಿನಲ್ಲಿ ಬಣ್ಣದ ಟೇಪಿನಲ್ಲಿ ಬಿಗಿದು ಪೌಡರ್ ಹಚ್ಚಿ ಬಿಂದಿ ಇಟ್ಟು, ಇಬ್ಬರಿಗೂ ತುತ್ತು ಬಾಯಿಗೆ ಇಟ್ಟು ಕೆಲ ಎಚ್ಚರಿಕೆ ಹೇಳುತ್ತಾ ಬ್ಯಾಗ್ ಭುಜಕ್ಕೆ ಹಾಕಿದರೆ ಅಮ್ಮನ ಕೆಲಸ ಮುಗಿದಂತೆ. ಕನ್ನಡಿ ನೋಡುವ ಅವಶ್ಯಕತೆ ಬೀಳುವುದೇ ಇಲ್ಲ. ನಂತರ ರೆಡಿಯಾಗಿ ನಿಂತ ಅಪ್ಪನ ಸೈಕಲ್ ಮುಂದೆ ಮಗಳು ಹಿಂದೆ ಮಗ ಕುಳಿತು ಸವಾರಿ ಮಾಡುತ್ತಿದ್ದರೆ ಸಂಭ್ರಮವೆ ಸಂಭ್ರಮ.

ಇಷ್ಟು ದಿನ ಬೆಚ್ಚಗೆ ಗೂಡಲ್ಲಿದ್ದು ಈಗ ಶಾಲೆಗೆ ಹೊರಟು ಅಮ್ಮನಿಗೆ ಬಾಯ್ ಹೇಳುವಾಗ ಸ್ವಲ್ಪ ಅಳುಕು, ತಳಮಳ ಇದ್ದೇ ಇರುತ್ತದೆ. ಇನ್ನು ಅಪ್ಪ ಶಾಲೆಗೆ ಬಿಟ್ಟು ಮರಳುವಾಗಲು ಅದೇ ಅಳುಕೊಮ್ಮೆ ಕಾಡುತ್ತದೆ. ಆದರೆ ಅದು ಕ್ಷಣಿಕ. ಅಪ್ಪ ಬಿಟ್ಟು ಹೋಗುತ್ತಿದ್ದಂತೆ ಶಾಲೆಯ ಒಳಹೋಗಿ ಬ್ಯಾಗ್ ಇಟ್ಟು ಮೊದಲೇ ಬಂದ ಹುಡುಗರೊಂದಿಗೆ ಆಡಲು ಹೊರಟರೆ ಎಲ್ಲವೂ ಗೌಣ .

ಇನ್ನು ಶಾಲೆಯ ಹತ್ತಿರವೇ ಮನೆಯಿದ್ದು ಅಕ್ಕಪಕ್ಕದ ಮಕ್ಕಳೆಲ್ಲಾ ಒಂದುಗೂಡಿ ಓಡುತ್ತಾ ಕುಣಿಯುತ್ತಾ ಚಿಲಿಪಿಲಿಗುಟ್ಟುತ್ತ ಶಾಲೆಯತ್ತ ಬರುತ್ತಿದ್ದರೆ ಮಿನಿ ಸೈನ್ಯವೇ. ಅಂತೂ ಹತ್ತಕ್ಕೆ ಬೆಲ್ ಆಗುತ್ತಿದ್ದಂತೆ ಹೋ ಎನ್ನುತ್ತಾ ಎಲ್ಲರೂ ಪ್ರಾರ್ಥನೆಗೆ ಮುಂದು. ರಜೆ ಮುಗಿಸಿ ಪುನಹ ಹೊಸ ಹುರುಪಿನಲ್ಲಿ ಸಾಲಾಗಿ ನಿಂತ ಶಿಕ್ಷಕರು ಒಮ್ಮೊಮ್ಮೆ ಮಮತೆಯ ಗಣಿಗಳಾಗಿ ಇನ್ನೊಮ್ಮೆ ಚಾಟಿ ಹಿಡಿದು ನಿಂತರೆ ಗಲಿವರನಂತೆಯೇ ಕಾಣುವುದು.

ಅಬ್ಬಬ್ಬಾ ನಲಿಯುತ್ತಾ ಕಲಿಯುತ್ತಾ ದಿನವಿಡೀ ಕುಣಿವ(ದ) ಸಂಭ್ರಮ ಮತ್ತೆ ಸಿಗುವುದೇ?

# ಕರೋನಾ ಟೈಮ್ಸ್

**ಕುಮುದಾ ಪುರುಷೋತ್ತಮ್**

ಪುಟ್ಟ ತನ್ನ ಕಂಪ್ಯೂಟರ್ ಮುಂದೆ ಕುಳಿತಿದ್ದ. ಶಾಲೆಗಳೆಲ್ಲಾ ಮುಚ್ಚಿ ಆನ್ಲೈನ್ ಕ್ಲಾಸುಗಳು ನಡೆಯುತ್ತಿದ್ದವು. ತಲೆ ಚಿಟ್ಟು  ಹಿಡಿದು ಪಕ್ಕದ ಮನೆಯತ್ತ ದೃಷ್ಟಿ ಹಾಯಿಸಿದ. ಹಾಗೆಯೇ ಗೋಡೆಯಮೇಲಿದ್ದ ಗಡಿಯಾರದತ್ತಲೂ. ಈ ವೇಳೆಗಾಗಲೇ ಪಕ್ಕದ ಮನೆಯಿಂದ ಮಂಗಳಾರತಿಯ ಗಂಟೆ ಧ್ವನಿ ಕೇಳಿಸಬೇಕಿತ್ತು. ಇವನನ್ನು ಕಂಡೊಡನೆ ಆ ಮಾಮ ದೂರಸರಿದು  ದೂರ ದೂರ.., ಎಲ್ಲಾದ್ರೂ ಮುಟ್ಟೀ.. ನಾನಿನ್ನೂ ಮಡೀಲಿದ್ದೀನಿ ಎನ್ನಬೇಕಿತ್ತು. ಮಾಮಿಯೂ ಅಷ್ಟೇ. ಮಡಿಯಿಂದ ಬಂದು ದೂರದಿಂದಲೇ ಚಾಚಿದ ಅವನ ಕೈಗೆ ಪ್ರಸಾದ ಎತ್ತಿ ಹಾಕಬೇಕಿತ್ತು. ಇವನದನ್ನು ಬಾಯಿಗೆ ಹಾಕಿ ಬೆರಳು ನೆಕ್ಕುತ್ತಾ ಆನ್ಲೈನ್ ಕ್ಲಾಸಿಗೆ ಮರಳಬೇಕಿತ್ತು. ಕರೋನಾ ಟೈಮ್ಸ್ನ ಅವನ ದಿನನಿತ್ಯದ ದಿನಚರಿ.

ಮಾಮಿ ತಮ್ಮ ಕೂದಲಿಗೆ ಅದೆಷ್ಟು ಆರೈಕೆ ಮಾಡಿಕೊಂಡರೂ ಅದು ಇಲಿ ಬಾಲದಂತೆಯೇ ಇದ್ದು ಮಾಮನ ಕೂದಲು ಮಾತ್ರ ಕೋವಿಡ್ ಭಯದಿಂದ ಹೇರ್ ಕಟ್ಟಿಂಗಿಗೆ ಒಳಗಾಗದೆ ಹುಲುಸಾಗಿ ಬೆಳೆದಿತ್ತು. ಒಮ್ಮೆ ಪುಟ್ಟ ಬಲು ಭಕ್ತಿಯಿಂದ " ಮಾಮ, ನೀವು ಋಷಿಗಳಂತೆ ಕಾಣ್ತಾ ಇದ್ದೀರ ಎಂದಿದ್ದ. ಈಗ ಅದು ಮಿತಿಮೀರಿ ಬೆಳೆದು ಮಾಮನ ಮುಖ ಥೇಟ್ ಸಿಂಹದ ಮುಖದಂತೆ ಕಾಣಿಸತೊಡಗಿತ್ತು.

ಇಂದು ಯಾಕೋ ಪಕ್ಕದ ಮನೆಯ ಪೂಜೆ ತಡವಾಗಿದೆ ಎಂದುಕೊಳ್ಳುತ್ತಿದ್ದಂತೆ ಮಾಮಿ ತಮ್ಮ ಮನೆಯ ಹಿತ್ತಿಲಿಗೆ ಬಂದು

ಬಾವಿಯಿಂದ ನೀರು ಸೇದಿ ಉಟ್ಟಬಟ್ಟೆಯಲ್ಲೇ ತಲೆಗೆ ಸುರಿದುಕೊಂಡದ್ದು ಕಂಡಿತು. ಅರ್ಧ ಗಂಟೆಯ ಬಳಿಕ ಪೂಜೆಯ ಗಂಟೆ ಮೊಳಗಿತು..ನೆಗೆಯುತ್ತಾ ಅವರ ಮನೆ ಸೇರಿದ. ಮಾವನ ಕುರ್ಚಿಯಲ್ಲಿ ಇನ್ಯಾರೋ ಕುಳಿತಿದ್ದು ಕಂಡು ಹಿಂದಿರುಗುತ್ತಿದ್ದವನನ್ನು ಅವರು ಕರೆದರು." ಬಾರೋ ಒಳ್ಗೆ" ನೋಡಿದ್ರೆ ಮಾಮನೇ!

" ಮಾಮಾ, ಗುರ್ತೇ ಸಿಗ್ತಿಲ್ಲ. ಸೆಲೂನಿಗೆ ಹೋಗಿದ್ರಾ?"

" ಶ್ಯೂ... ಮೆಲ್ಲಗೆ ಮಾತಾಡು. ಈ ಗುಟ್ಟನ್ನು ಯಾರಿಗೂ ಹೇಳ್ಬೇಡ. ನೆನ್ನೆ ನೀನು ನನ್ನನ್ನು ಸಿಂಹ ಅಂದ್ಯಲ್ಲಾ. ಅದಕ್ಕೇ ಮಾಮಿ ಕೂರ್ಸಿ ಹೇರ್ ಕಟ್ ಮಾಡಿದ್ಲು"

" ಮಾಮಿ ಹೇರ್ ಕಟ್ ತುಂಬಾ ಚನ್ನಾಗಿ ಮಾಡಿದ್ದಾರೆ. ಇನ್ಮೇಲೆ ಅವ್ರ ಹತ್ರಾನೇ ಮಾಡಿಸ್ಕೋಳ್ಳಿ. ಸೆಲೂನಿಗೆ ಸುಮ್ನೆ ದುಡ್ಡು ಸುರೀಬೇಡಿ" ಎಂದ ಈ ಅರ್ಥಶಾಸ್ತ್ರ ಪಂಡಿತ, ಮಾಮಿ ದೂರದಿಂದಲೇ ಪ್ರಸಾದ ಹಾಕಿದರು. ಇಂದು ಒಂದರ ಬದಲಿಗೆ ಎರಡು ರವೆ ಉಂಡೆ ಇತ್ತು. " ಮಾಮಿ, ಎರಡು ಉಂಡೆ?"

"ಊಂನೋ. ಒಂದು ಮಾಮೂಲೀ ಉಂಡೆ. ಇನ್ನೊಂದು ಬಾಯಿಮುಚ್ಕೊಂಡಿರೋಕ್ಕೆ." ಎಂದರು ಮಾಮಿ  ಬಾಯಮೇಲೆ ಬೆರಳಿಟ್ಟು!

■

# ಅನುರೂಪ ದಾಂಪತ್ಯ

**●ಟಿ. ಎಸ್. ಶ್ರವಣ ಕುಮಾರಿ**

ನಾನು ಈ ಕತೆಯನ್ನು ಹೇಳುತ್ತಿರುವಾಗ ನಿಮಗೆಲ್ಲರಿಗೂ? ಅರೇ, ಇದು ನಮ್ಮಪ್ಪ ಅಮ್ಮನ ಕತೆಯೆಂದೋ, ಅಥವಾ ಇನ್ಯಾರೋ ನಮ್ಮವರ್ದೇ ಕತೆ'ಯೆಂದೋ ಅನ್ನಿಸಬಹುದು. ಆದರೂ ಏಕೆ ಈ ಕತೆಯನ್ನು ಹೇಳ್ತಿದೀನಿ ಅಂದರೆ ಆ ಕಾಲದ ಗಂಡಹೆಂಡಿರ ಸಾಮರಸ್ಯದೊಳಗೆ ಒಂದು ಇಣುಕುನೋಟ ಬೀರಿ ಒಂದಷ್ಟು ಖುಷಿಪಡಲು ಸಾಧ್ಯವಾದರೆ ಆಗಲಿ ಎಂದಷ್ಟೇ. ಸರಿ, ಈಗೊಂದು ಐವತ್ತು ಅರವತ್ತು ವರ್ಷಗಳ ಹಿಂದೆ ಹೋಗೋಣ ಬನ್ನಿ. ಆಗ ಸಮೃದ್ಧಿಯಿದ್ದ ಕಾಲ. ಸಮೃದ್ಧಿಯೆಂದರೆ ದುಡ್ಡಿನ ಲೆಕ್ಕದಲ್ಲಿ ಹೇಳಲಿಲ್ಲ. ಮನೆತುಂಬಾ ಮಕ್ಕಳು, ಬಂದುಹೋಗುವ ನೆಂಟರಿಷ್ಟರು ಇದ್ದ ಕೂಡುಕುಟುಂಬದ ಕಾಲ. ಒಡವೆ, ಬಟ್ಟೆಗಳಿಗಿಂತ ನಾಲ್ಕುಜನ ಬಂದಾಗ ತಮಗಿದ್ದದ್ದನ್ನೇ ಆತ್ಮೀಯತೆಯಿಂದ ಮಾಡಿ ಬಡಿಸಿ "ಇನ್ನೂ ನಾಕ್ದಿನ ಇರಿ, ಬೆಟ್ಟದ ಮಲ್ಲಿನಾಥನ್ನ ನೋಡ್ಕೊಂಡು ಬರೋಣ" ಎಂದೋ, "ಕೆರೆ ಕೋಡಿ ಬಿದ್ದಿದ್ಯಂತೆ ಅದನ್ನ ನೋಡ್ದೇನೇ ಹೋಗ್ತೀರಾ" ಎಂದೋ, ಪಿಳ್ಳೆ ನೆಪಗಳನ್ನೆಲ್ಲಾ ಹೇಳುತ್ತಾ ಹೊರಡುವವರನ್ನು ಇನ್ನೊಂದಷ್ಟು ದಿನ ಇರಿಸಿಕೊಂಡು ಒಂದು ರವಿಕೆಬಟ್ಟೆಯನ್ನೇ ಪಟ್ಟೆ ಪೀತಾಂಬರವನ್ನು ಕೊಟ್ಟಷ್ಟು ಸಂತೋಷದಿಂದ ಕೊಟ್ಟು, ಮನೆಯಲ್ಲಿ ಬೆಳೆದ ಧಾನ್ಯವನ್ನೋ, ಮತ್ತೊಂದನ್ನೋ ಕೊಟ್ಟು, ಕಳಿಸಲು ಬಸ್ಟ್ಯಾಂಡಿನವರೆಗೂ ಹೋಗಿ ವಿದಾಯದ ಸುಖದುಃಖಗಳನ್ನು ಹಂಚಿಕೊಂಡು ಕಣ್ಣೀರಿಡುತ್ತಲೇ ಕಳಿಸುತ್ತಿದ್ದ ಕಾಲವೆನ್ನಿ.

ನನ್ನ ಇಂದಿನ ಕತೆಯ ಪದ್ದಮ್ಮ, ನಾರಾಯಣ ಮೂರ್ತಿಗಳೂ ಆ ಕಾಲಕ್ಕೆ ಸೇರಿದ್ದವರು. ಮನೆಯಲ್ಲಿ ಹಿರಿಯರಿರುವಾಗ ಅವರೆದುರು ಒಬ್ಬರನ್ನೊಬ್ಬರು ಸೀದಾ ನೋಡುವುದೂ ಚೆಲ್ಲುಚೆಲ್ಲು ನಡವಳಿಕೆ ಎಂದುಕೊಂಡಿದ್ದ ಕಾಲವದು. ಒಬ್ಬರಿಗೊಬ್ಬರು ಸಿಗುತ್ತಿದ್ದುದು ಬರಿಯ ರಾತ್ರಿಯ ಕತ್ತಲಿನಲ್ಲೇ ಆದರೂ, ಓಡಾಡುವ ಹೆಂಡತಿಯ ಬಳೆಯ ಸದ್ದು ಕೇಳುತ್ತಿದ್ದರೆ ಒಂದು ಮುದವನ್ನನುಭವಿಸುತ್ತಿದ್ದ, ಗಂಡನ ದನಿ ಕೇಳಿದರೇ ಪುಳಕಗೊಳ್ಳುತ್ತಿದ್ದವರು ಅವರಿಬ್ಬರು.

ಇಂತಹ ಪದ್ದಮ್ಮನನ್ನು ಚೊಚ್ಚಲ ಹೆರಿಗೆಗೆಂದು ತವರಿನವರು 'ಬಸುರಿ ಹುಡುಗಿ, ದಿನ ತುಂಬಿದ ಮೇಲೆ ಪ್ರಯಾಣ ಮಾಡೋದ್ಬೇಡ' ಎಂದು ಐದನೇ ತಿಂಗಳಿಗೇ ಕರೆದುಕೊಂಡು ಹೋಗಿ ಹೆರಿಗೆಯಾದ ಮೇಲೆ, 'ಶ್ರಾವಣದ ಹಬ್ಬಸಾಲು ಕಳೀಲಿ, ಗೌರಿ ಹಬ್ಬದ್ಮುಂದೆ ಕಳ್ಸಕ್ಕಾಗುತ್ಯೇ, ದಸರೆಯಲ್ಲಿ ದೇವಿ ಪಾರಾಯಣ ನಡ್ಯೋವಾಗ ಮನೆಮಗಳು ಇರ್ದಿದ್ರೆ ಹೇಗೆ, ಅಳಿಯನೂ ದೀಪಾವಳಿಗೆ ಬರಲಿ, ಆಮೇಲೆ ಒಂದು ಒಳ್ಳೆಯ ದಿನ ಕರ್ಕೊಂಡು ಬರ್ತೀವಿ' ಎಂದು ಸಾವಕಾಶವಾಗಿ ಮಗುವಿಗೆ ಹತ್ತಿರತ್ತಿರ ವರ್ಷವಾಗುತ್ತಾ ಬರುವಾಗ ಕಳಿಸಿದರೆ, ಮೂರ್ತಿಗಳ ಪಾಡೇನು! ಹೋಗಲಿ ಎಂದರೆ ಅಪ್ಪ, ಅಮ್ಮನಾದರೂ ಸೊಸೆಯನ್ನು ಬೇಗನೆ ಕಳಿಸಿ ಎನ್ನಬಾರದೆ; 'ಇನ್ನೂ ಚಿಕ್ಕ ಹುಡುಗಿ, ಮಗೂನ ಸ್ವಲ್ಪ ದೊಡ್ಡು ಮಾಡ್ಕೊಂಡೇ ಬರ್ಲಿ ಬಿಡು' ಎಂದು ಅವರ ಪರವೇ ವಹಿಸುತ್ತಿದ್ದುದು ಮೂರ್ತಿಗಳಿಗೆ ಕಷ್ಟಕ್ಕೆ ಬಂದಿತ್ತು. ಎರಡನೆಯದಕ್ಕೂ ಇದೇ ಕತೆಯಾದಮೇಲೆ, ಮೂರನೆಯ ಬಾಣಂತನದಲ್ಲಿ 'ಮಕ್ಳನ್ನ ನೋಡೋ ಹಾಗಾಗಿದೆ' ಅನ್ನೋ ನೆಪವೊಡ್ಡಿ ಎರಡು ತಿಂಗಳ ನಂತರ ಖುದ್ದಾಗಿ ತಾವೇ ಮಾವನ ಮನೆಗೆ ಹೋಗಿ ಝೂಂಡಾ ಊರಿದರು. ಅಪರೂಪಕ್ಕೆ ಬಂದ ಅಳಿಯನೆಂದು ಮಾವನವರು

ಆಳು ತಿಪ್ಪನ ಕೈಲಿ ಚೆನ್ನಾಗಿ ಗಾಣದ ಹರಳೆಣ್ಣೆಯಲ್ಲಿ ನೀವಿಸಿ, ಮಳಮಳಗುಡುತ್ತಿದ್ದ ಹಂಡೆನೀರಿನಿಂದ ಮಜ್ಜನ ಮಾಡಿಸಿದಾಗ 'ಅಜ್ಜಯ್ಯನ ಅಭ್ಯಂಜನ'ದಂತೆ ಮಿಂದ ಮೂರ್ತಿಗಳು ಮೂರನೇ ದಿನ "ಎಲ್ಲಿ ತಿಪ್ಪ ಬರಲಿಲ್ವೇ. ಮೊನ್ನೆ ಚೆನ್ನಾಗಿ ನೀವಿದ್ದ. ಬಲುಚೆನ್ನಾಗಿ ನಿದ್ದೆ ಬಂದಿತ್ತು" ಎಂದಾಗ ಕರೆಸದಿರಲು ಸಾಧ್ಯವೇ? ಅಂತೂ ವಾರಕ್ಕೆರಡು ಬಾರಿ ಅಳಿಯನಿಗೆ ಅಭ್ಯಂಜನ ಮಹೋತ್ಸವವಾಯಿತು. ಬಾಣಂತಿಗೆಂದು 'ಧಾರಾಳವಾಗಿ ಉತ್ತುತ್ತೆ, ಗಸಗಸೆ, ಕೊಬ್ಬರಿ ಹಾಕಿದ್ದ ಅಂಟಿನುಂಡೆ, ಬಾದಾಮಿ, ದ್ರಾಕ್ಷಿ, ತುಪ್ಪ ಸುರಿದಿದ್ದ ಶುಂಟಿ'ಯಲ್ಲಿ ದಿನದಿನವೂ ತಮ್ಮ ಪಾಲನ್ನೂ ಪಡೆದುಕೊಂಡು, ಅವಳ ಊಟಕ್ಕಿಟ್ಟ ತುಪ್ಪದ ಬಟ್ಟಲನ್ನು ನೋಡಿ, "ಮಗಳಿಗೆ ಮಾತ್ರಾ ತುಪ್ಪವೇ? ಅಳಿಯನಿಗೇನೂ ಇಲ್ಲವೇ?" ಎಂದು ತಮಾಶೆಗೆಂಬಂತೆ ಕೇಳಿ, ವಿಧಿಯಿಲ್ಲದೆ ಅತ್ತೆ ಅಳಿಯನಿಗೂ ಬಾಣಂತನ ಮಾಡುವ ಹಾಗಾಯಿತು. ಅಲ್ಲಿಯೂ ಮನೆತುಂಬಾ ಮಕ್ಕಳು, ಮೊಮ್ಮಕ್ಕಳೇ. ತುಪ್ಪ ತಂದಾಗ 'ನಂಗೂ, ನಂಗೂ' ಎಂದು ಎಂಟು ಹತ್ತು ಬಾಯಿಗಳು ಒಟ್ಟಿಗೇ ಕೂಗತೊಡಗಿದರೆ ಮರ್ಯಾದೆ ಉಳಿಸಿಕೊಳ್ಳುವುದಕ್ಕಾದರೂ, ಒಂದೊಂದು ಮಿಳ್ಳೆ ಹಾಕಲೇಬೇಕಲ್ಲವೇ? ಹೇಗೋ ಸಂಭಾಳಿಸುತ್ತಿದ್ದರೆ, ಹದಿನೈದಿಪ್ಪತ್ತು ದಿನವಾದರೂ ಅಳಿಯ 'ಮಕ್ಕಳನ್ನು ನೋಡಿದ್ದು' ಮುಗಿಯಲೇ ಇಲ್ಲ! ಅಳಿಯನ ಸಂಕಟ ಅರ್ಥವಾಗಿ "ಐದು ತಿಂಗ್ಳಿಗೆ ಬಿದ್ದ ತಕ್ಷಣ ಕಳಿಸ್ಬಿಡ್ತೀವಿ ಅಳಿಯಂದಿರೇ. ಹೆಚ್ದಿನ ಇಟ್ಕೊಳಲ್ಲ" ಎಂದು 'ನೀವಿನ್ನು ಹೊರಡಬಹುದು' ಎಂದು ಸೂಚನೆ ಕೊಟ್ಟಾಗ ಕಷ್ಟಪಟ್ಟು ಹೊರಡುವ ಮನಸ್ಸು ಮಾಡಿದ್ದರು ಮೂರ್ತಿಗಳು. ನಾಲ್ಕನೆಯ ತಿಂಗಳು ಮುಗಿಯುತ್ತಾ ಬರುವಾಗಲೇ 'ನಾನೇ ಬರಲೇ ಕರೆದುಕೊಂಡು ಹೋಗುವುದಕ್ಕೆ?' ಎಂದು ಜ್ಞಾಪನಾ ಪತ್ರವನ್ನು ಹೆಂಡತಿಗೆ ಬರೆದಿದ್ದರು. ಹೆಂಡತಿಗೆಲ್ಲಿ ಓದುವುದಕ್ಕೆ ಬರುತ್ತಿತ್ತು?! ಮಾವನವರೇ ಓದಿ ಹೇಳಬೇಕು ತಾನೇ?! ತಕ್ಷಣವೇ 'ಇಂತಹ ದಿನ ಮಗುವನ್ನೂ ಬಾಣಂತಿಯನ್ನೂ ಕರೆದುಕೊಂಡು ಬರುತ್ತಿದ್ದೇವೆ' ಎಂದು ಬೀಗರಿಗೆ ಬರೆದಿದ್ದರು. ಅಬ್ಬಾ, ಸಧ್ಯ ಬದುಕಿದೆ! ಎಂದುಕೊಂಡರು ಮೂರ್ತಿಗಳು. ಮುಂದಿನ ಬಾಣಂತನಗಳಿಗೆ ತವರಿನವರು ಕರೆಯಲಿಲ್ಲವೆನ್ನಿ.

ಕಾಲಕ್ರಮೇಣ ಅಪ್ಪ ಅಮ್ಮನೂ ಕಾಲವಾದರು. ಇರುವ ಜಮೀನು ಉಳುವ ರೈತನ ಪಾಲಾಯಿತು. ಕೆಲಸದಲ್ಲಿದ್ದ ತಮ್ಮಂದಿರು ಮನೆಯನ್ನು ಅಣ್ಣನಿಗೆ ಬಿಟ್ಟುಕೊಟ್ಟು ಬೇರೆಬೇರೆ ಸಂಸಾರ ಹೂಡಿದರು. ಮನೆ, ಕೊಟ್ಟಿಗೆಯಲ್ಲಿದ್ದ ಕರಾವು ಇಷ್ಟೇ ಆದಾಗ ಸಹಜವಾಗಿಯೇ ಜೀವನ ನಿರ್ವಹಣೆ ಕಷ್ಟವಾಯಿತು. ಮೂರ್ತಿಗಳು ಅದೂ ಇದೂ ಏಜೆನ್ಸಿ ಹಿಡಿದು, ಹೆಚ್ಚಾದ ಹಾಲನ್ನು ಡೈರಿಗೆ ಹಾಕುತ್ತಾ ಹೇಗೋ ಒಂಭತ್ತು ಮಕ್ಕಳ ಸಂಸಾರವನ್ನು ನಿಭಾಯಿಸಲು ಯತ್ನಿಸುತ್ತಿದ್ದಾಗ ಒಂದಷ್ಟು ಮಿತವ್ಯಯವನ್ನು ಪಾಲಿಸಲೇಬೇಕಲ್ಲವೇ. ಆದರೆ ಸಮೃದ್ಧಿಯನ್ನಷ್ಟೇ ಕಂಡಿದ್ದ ಪದ್ದಮ್ಮನಿಗೆ ಪಾವು ಚಟಾಕುಗಳ ಅಳತೆಯೇ ಗೊತ್ತಿರಲಿಲ್ಲ. ಎಲ್ಲಾ ಸೇರುಗಳಲ್ಲಿಯೇ ಲೆಕ್ಕಾಚಾರ. ಬೇಳೆಯ ಚೀಲದಿಂದ ಬೊಗಸೆಯಲ್ಲಿ ಎತ್ತೆತ್ತಿ ಕೊಳಗಗಳಿಗೆ ಸುರಿದು ಅಡುಗೆಗಿಡುತ್ತಿದ್ದಿದ್ದೇ. ಮೂರ್ತಿಗಳಿಗೋ ಸೇರು ಕೊಳಗಕ್ಕೆ ಸುರಿದರೆ, ಪಾವಷ್ಟನ್ನು ವಾಪಸ್ಸು ಚೀಲಕ್ಕೆ ಸುರಿಯಲಿ ಎನ್ನುವ ನಿರೀಕ್ಷೆ. ಆದರೆ ಅದೆಂದೂ ಸಫಲವಾಗಲೇ ಇಲ್ಲ ಬಿಡಿ,

ಹಾಗೇನಾದರೂ ಹೇಳಿದರೆ ಇನ್ನೊಂದರ್ಧ ಬೊಗಸೆ ಹೆಚ್ಚಾಗಿಯೇ ಬೀಳುತ್ತಿತ್ತು. ಎಣ್ಣೆ, ತುಪ್ಪ, ಬೇಳೆ, ಬೆಲ್ಲ, ಸಕ್ಕರೆ ಇಂಥವನ್ನೆಲ್ಲಾ ಅಡುಗೆಗೆ ಹಾಕುವಾಗ ಅದೆಲ್ಲಿರುತ್ತಿದ್ದರೋ ಆ ಕ್ಷಣಕ್ಕೆ ಅಲ್ಲಿ ಪ್ರತ್ಯಕ್ಷರಾಗಿರುತ್ತಿದ್ದರು ಮೂರ್ತಿಗಳು.

"ಇದೇನು ಇದೇನು  ಸ್ವಲ್ಪ ಕೈ ಹಿಡಿತ ಇರ್ಲಿ. ಇನ್ನೂ ನಾಕ್ದಿನ ಬರ್ಲಿ ಸಾಮಾನು, ಇವತ್ತೇ ಮುಗಿಸ್ಬಿಡ್ಬೇಡ" ಎಂದು ಅಲ್ಲೇ ನಿಂತರೆ. ಅವರೆದುರು ಕಮ್ಮಿಮಾಡಿ, ಅವರತ್ತ ಹೋದ ತಕ್ಷಣ ಬೀಳಬೇಕಾದ್ದಕ್ಕಿಂತ ಒಂದಿಷ್ಟು ಹೆಚ್ಚಾಗಿಯೇ ಪಾತ್ರೆಗೋ, ಬಾಣಲೆಗೂ ಬೀಳುತ್ತಿದ್ದದ್ದು ಸತ್ಯ. ಹಾಗೆಂದು ಎಂದೋ ಒಂದು ದಿನ, ಗಂಡ ಇಷ್ಟು ಹೇಳುತ್ತಾರಲ್ಲಾ ಎಂದು ಸಾಮಗ್ರಿಗಳ ಉಳಿತಾಯ ಮಾಡಿ, ರುಚಿ ಕಡಿಮೆಯಾದರೆ ಒಪ್ಪುತ್ತಿದ್ದರೇ ಮೂರ್ತಿಗಳು "ಇಷ್ಟು ಸಾಮಾನು ತಂದು ಸುರೀತೀನಿ. ರುಚಿಕಟ್ಟಾಗಿ ಮಾಡಕ್ಕೇನು ಕಷ್ಟ?" ಎನ್ನುತ್ತಿದ್ದರು. ಪದ್ದಮ್ಮನವರೇನು ಸುಮ್ಮನಿರುತ್ತಿದ್ದರೆ?

"ಸದಾ ಅಡುಗೆಮನೆಗೆ ಬಂದು ತನಿಖೆ ಮಾಡ್ತಿದ್ರೆ ಹಂಗೇ ಆಗೋದು. ಅಡ್ಗೆ ವಿಷ್ಯಕ್ಕೆ ಗಂಡಸ್ರು ತಲೆ ಹಾಕ್ಬಾರ್ದು" ಎಂದು ತಮ್ಮ ವಾದವನ್ನು ಮಂಡಿಸುತ್ತಿದ್ದರು. ಗಂಡನ ಉಳಿತಾಯದ ರೀತಿ ಹೀಗಿದ್ದರೆ, ಹೆಂಡತಿಯದು ಇನ್ನೊಂದು ಬಗೆ. ಮೂಟೆ ಅಕ್ಕಿ ಬಂದರೆ ಒಂದ್ಯೆದು ಸೇರು ಅಟ್ಟದ ಮೇಲಿನ ಯಾವುದೋ ಮೂಲೆಯ ತಪ್ಪಲೆಯಲ್ಲೋ, ಡಬ್ಬದಲ್ಲೋ ಅಡಗಿಕುಳಿತುಕೊಳ್ಳುತ್ತಿತ್ತು. ಬೇಳೆ, ಬೆಲ್ಲ, ಏನು ಬಂದರೂ ಅಷ್ಟೇ, ಒಂದು ಭಾಗ ಅಟ್ಟದ ಯಾವ್ಯಾವುದೋ ಸಂದುಗಳಲ್ಲಿ ಜಾಗಮಾಡಿಕೊಳ್ಳುತ್ತಿದ್ದವು. ಅಡುಗೆಮನೆಯ ಡಬ್ಬಿಗಳು ತಳ ಕಾಣುವ ಮೊದಲೇ ಪದ್ದಮ್ಮ ಖಾಲಿಡಬ್ಬದ ಸದ್ದು ಮಾಡುತ್ತಿದ್ದರು. "ಹ್ಞೂಂ, ತರೋಣ, ತರೋಣ. ವಾರದ ಕೊನೆಗೆ ಕಮಿಷನ್ ಬರತ್ತೆ. ಆಮೇಲೆ ತರ್ತೀನಿ" ಎನ್ನುತ್ತಾ ಬೀಸೋದೊಣ್ಣೆ ತಪ್ಪಿಸಿಕೊಳ್ಳುತ್ತಿದ್ದರು ಮೂರ್ತಿಗಳು. ಮರುಮಾತಾಡದೆ ಮಾರನೆಯ ದಿನ ಹುಣಿಸೇ ಸಾರೋ, ಮೆಣಸಿನ ಸಾರೋ ಮಾಡಿ, ಏನೋ ಒಂದು ತಂಬುಳಿಯನ್ನು ಊಟಕ್ಕೆ ಬಡಿಸಿದರೆ "ಏನು ದಿವಿನಾಗಿತ್ತು, ಇದನ್ನೇ ಇನ್ನೂ ನಾಕ್ದಿನ ಮಾಡು"

ಎನ್ನುತ್ತಿದ್ದರು. ರಾತ್ರಿಯೂಟಕ್ಕೂ ಅದೇ ಪುನರಾವರ್ತನೆಯಾದಾಗ ಮಾತ್ರಾ ಮರುದಿನ ಬೆಳಗ್ಗೆ "ನಾಕ್ದಿನಕ್ಕೆಷ್ಟು ಬೇಕೋ ಅಷ್ಟನ್ನ ಕಿಟ್ಟಿ ಕೈಲಿ ತರಿಸ್ಕೋ" ಎಂದು ಕಾಸು ಕೊಟ್ಟಾಗ ದುಡ್ಡು ಸಾಸುವೆ ಡಬ್ಬಿಯೊಳಗೆ ಅಡಗಿ, ಅಟ್ಟದಿಂದ ಸಾಮಾನು ಇಳಿದುಬರುತ್ತಿತ್ತು. ಅದೇನು ಅವರು ಪಾಪ ತಮಗಾಗಿ ಇಟ್ಟುಕೊಳ್ಳುತ್ತಿದ್ದರೇ? ಹೀಗೇ ದಿಢೀರನೆ ಯಾರೋ ಬಂಧು ಬಾಂಧವರು ಬಂದಾಗ 'ಇವತ್ತು ಗಸಗಸೆ ಪಾಯ್ಸ ಮಾಡ್ಬಿಡು' ಅಂತಲೋ 'ಬೋಂಡಾ ಕರಿದ್ಬಿಡು' ಅಂತಲೋ ಅವರೆದುರೇ ಅಪ್ಪಣೆ ಮಾಡಿದಾಗ ಗಸಗಸೆಯೋ, ಕಡಲೇ ಹಿಟ್ಟೋ ಅಟ್ಟದಿಂದ ಉದುರುತ್ತಿರಲಿಲ್ಲವಲ್ಲ! ಆಗ ಸಾಸಿವೆ ಡಬ್ಬಿಯ ಕಾಸು ತಾನೇ ಉದುರಬೇಕು. ಹೀಗೆ ಅಂತೂ ಒಬ್ಬರಿಗಿಂತ ಇನ್ನೊಬ್ಬರು ಜಾಣರು.

ಹೀಗೇ ಸಾರಿನ ಪುಡಿ ಮಾಡುವಾಗ ಜೀರಿಗೆಯೋ, ಮೆಣಸೋ ಏನೋ ಕಮ್ಮಿಯಿದೆಯೆಂದರೆ "ಅದಕ್ಕೆ ಅಡ್ಜಸ್ಟ್ ಮಾಡ್ಕೊಂಡು ಮಿಕ್ಕಿದ್ ಸಾಮಾನನ್ನೂ ಕಮ್ಮಿ ಕಮ್ಮಿ ಹಾಕಿ ಸ್ವಲ್ಪ ಕಮ್ಮೀನೇ ಪುಡಿ ಮಾಡ್ಬಿಡು. ಖರ್ಚಾದ್ಮೇಲೆ ನೋಡ್ಕೋಳೋಣ" ಅನ್ನುತ್ತಿದ್ದರೇ ಹೊರತು ತಕ್ಷಣವೇ ಹೋಗಿ ತಂದುಕೊಡುತ್ತಿರಲಿಲ್ಲ. ಎಲ್ಲೋ ಅಟ್ಟದ ಮೇಲೆ ಮುಚ್ಚಿಟ್ಟಿರ್ತಾಳೆ, ಅದು ಕೆಳಗವತರಿಸಲಿ ಎನ್ನುವುದು ಅವರ ಇರಾದೆ. ಪದ್ಮಾವತಮ್ಮನೂ "ಸರಿಬಿಡಿ ಹಾಗೇ ಮಾಡ್ತೀನಿ" ಎಂದು ತಮ್ಮ ಗುಪ್ತ ಸಂದೂಕದಲ್ಲಿದ್ದ ಸಾಮಾನುಗಳನ್ನು ಉಪಯೋಗಿಸಿಕೊಂಡು ಮಾಡಿ ಒಂದಷ್ಟು ಪುಡಿಯನ್ನೇ ಮೇಲಕ್ಕೆ ರವಾನಿಸಿಬಿಡುತ್ತಿದ್ದರು. ಅಂತೂ ಮೂರ್ತಿಗಳು ಸಾಮಾನು ತಂದ ಮೇಲೆ ಅವು

ಅಟ್ಟಕ್ಕೇರಿ, ಪುಡಿ ಕೆಳಗಿಳಿದು ಬರುತ್ತಿತ್ತು.

ಪದ್ದಮ್ಮನಿಗೋ ಮುಸುರೆ, ಮಡಿಗಳ ಹಾವಳಿ ವಿಪರೀತ. ದಿನಕ್ಕೆ ಮೂರ್‍ನಾಲ್ಕು ಬಾರಿ ಕಟ್ಟೆಯನ್ನು, ಸ್ಟೋವನ್ನು ತೊಳೆತೊಳೆದು, ಅಡುಗೆಮನೆಯನ್ನೂ ನೀರುಹಾಕಿ ಪೊರಕೆಯಲ್ಲಿ ಝಾಡಿಸಿ ಒರೆಸಿ ಮಡಿಯಾಗಿಟ್ಟುಕೊಳ್ಳಬೇಕು. ಹಾಗೆಂದು ಭಾವಿಗೆ ಪಂಪುಹಾಕಿ ನೀರೆಳೆದು, ಎಳೆದು ದಂಡಕ್ಕೆ ನೆಲಕ್ಕೆ ಸುರಿಯುತ್ತಿದ್ದರೆ ಕರೆಂಟು ಬಿಲ್ಲನ್ನು ಕಟ್ಟುವವರ್‍ಯಾರು? ಹೇಳಿದರೆ ಕೇಳುವವರೇ ಪದ್ದಮ್ಮ?! ಐದು ನಿಮಿಷಕ್ಕಿಂತ ಜಾಸ್ತಿ ಪಂಪು ಓಡುತ್ತಿದ್ದರೆ ಏನೂ ಅರಿಯದವರಂತೆ ಮೇನ್‌ಸ್ವಿಚ್ಚನ್ನು ಆರಿಸಿ ತಣ್ಣಗೆ ಕೂರುತ್ತಿದ್ದರು ಮೂರ್ತಿಗಳು. ಒಳಗಡೆ "ಕರೆಂಟು ಹೋಯ್ತೇನೋ, ಕೆಲಸ ಅರ್ಧವಾಗೋಯ್ತೆ" ಎನ್ನುವ ಸ್ವರ ಕೇಳಿಬಂದರೆ ಅಡುಗೆಮನೆಯೊಳಗೆ ಇಣುಕಿ "ಎಷ್ಟೊತ್ತಿಗೆ ಬರತ್ತೋ ಏನೋ, ಸುಮ್ನೆ ಒದ್ದೆ ಬಟ್ಟೆಯಲ್ಲಿ ಒರೆಸಿ ಕಾಫಿಗೆ ನೀರಿಡು. ದಿನಕ್ಕೊಂದ್ಸಲ ರಾತ್ರಿ ತೊಳುದ್ರೆ ಸಾಕೂಂದ್ರೆ ನೀನು ಕೇಳಲ್ಲ" ಎಂದು ಮೂರ್ತಿಗಳು ಸಧ್ಯಕ್ಕೆ ಗೆದ್ದೆನೆಂದು ಬೀಗುತ್ತಿದ್ದರು. ಅವರು ಕಾಫಿ ಕುಡಿದು ಹೊರಗೆ ಹೊರಟೊಡನೆ "ಕಿಟ್ಟೀ ಮೇನ್‌ಸ್ವಿಚ್ ಹಾಕೋ" ಎಂದು ಪದ್ದಮ್ಮ ತಮ್ಮ ಕೆಲಸವನ್ನು ಮುಂದುವರೆಸುತ್ತಿದ್ದರು.

ಹೀಗೆಯೇ ಸಂಸಾರದ ರಥವನ್ನೆಳೆದರು ಮೂರ್ತಿಗಳು ಮತ್ತು ಪದ್ದಮ್ಮನವರು. ಸದಾ ಮನೆ, ಗಂಡ ಮಕ್ಕಳು ಎಂದು ಒದ್ದಾಡುತ್ತಿದ್ದ ಪದ್ದಮ್ಮ ತೀರಾ ಅನಿವಾರ್ಯವಲ್ಲದೆ, ಮನೆಬಿಟ್ಟು ಹೋದದ್ದೇ ಇಲ್ಲ. "ಹದ್ನೈದು ದಿನ ಆರಾಮಾಗಿ ತಮ್ಮನ ಮನೇಲಿದ್ದು ಬಾ" ಎಂದು ಕಳಿಸಿಬಿಟ್ಟು ಅವರಿಲ್ಲದಿದ್ದರೆ ದಿಕ್ಕು ತೋಚದಂತಾಗುತ್ತಿದ್ದ ಮೂರ್ತಿಗಳು ನಾಲ್ಕು ದಿನವಾಗುತ್ತಲೇ ಶಿವಮೊಗ್ಗದ ರೈಲನ್ನು ಹತ್ತುತ್ತಿದ್ದದ್ದು ಎಲ್ಲರಿಗೂ ಗೊತ್ತಿದ್ದ ವಿಷಯವೇ.

ಹೀಗೆ ಮೇಲ್ನೋಟಕ್ಕೆ ಯಾವುದೇ ಪ್ರೀತಿಯ ಮಾತುಗಳು, ಓಲೈಸುವಿಕೆ ಇಲ್ಲದಿದ್ದರೂ ಒಳಗೊಳಗೇ ಇಬ್ಬರೂ, ಒದ್ದುಕೊಳ್ಳುತ್ತಿದ್ದ, ಸಂಸಾರವನ್ನು ತೂಗಿಸುತ್ತಿದ್ದ ಪರಿಯನ್ನು ನೆನಸಿಕೊಂಡರೆ ಸಂದುಹೋದ ಹಿರಿಯಜೀವಗಳ ಸಾರ್ಥಕ ಬದುಕಿನ ರೀತಿ ಮನವನ್ನು ತಂಪಾಗಿಸುವುದಲ್ಲವೇ? ■

## ಮಾಸ್ಕೋಪದೇಶ

**ವಿ. ವಿಜಯೇಂದ್ರ ರಾವ್**

ಯಾರಾದರೂ ನಿಮ್ಮ ಹತ್ತಿರ ಮಾಸ್ಕ್ ಹಾಕಿಕೊಂಡು ಮಾತನಾಡಿದಾಗ ಅವರು ಮಾತನಾಡಿದ್ದು ನಿಮಗೆ ಅರ್ಥವಾಗದಿದ್ದರೂ ಪರವಾಗಿಲ್ಲ ಅರ್ಥವಾದಂತೆ ನಟಿಸಬೇಕು. ಇಲ್ಲದಿದ್ದರೆ ಅವರು ಮಾಸ್ಕ್ ಕೆಳಗಿಳಿಸಿ ಅಥವಾ ಪೂರ್ತಿ ತೆಗೆದು ಮಾತಾಡುತ್ತಾರೆ. ಇತ್ತೀಚೆಗೆ ನನ್ನ ಗೆಳೆಯನ ಹತ್ತಿರ ಅವರ ನೆಂಟರೊಬ್ಬರು ಮಾಸ್ಕ್ ಹಾಕಿಕೊಂಡು ಏನೋ ಹೇಳಿದಾಗ ಪಾಪ ಅವರಿಗೆ ನನ್ನ ಅವಶ್ಯಕತೆ ಇದೆಯೇನೋ ಅಂದುಕೊಂಡು ನನಗೆ ಗೊತ್ತಾಗಲಿಲ್ಲ ಸ್ವಲ್ಪ ಜೋರಾಗಿ ಹೇಳಿ ಅಂದರಂತೆ. ಅವರು ಮಾಸ್ಕ್ ಕೆಳಗಿಳಿಸಿ ಅವನ ಪಕ್ಕದಲ್ಲೇ ಬಂದು ಗಟ್ಟಿಯಾದ ಸ್ವರದಲ್ಲಿ ನನಗೆ ಕೋವಿಡ್ ಪಾಸಿಟೀವ್ ಈಗ ತಾನೇ ಗೊತ್ತಾಯಿತು ಅಂದರಂತೆ!!

●ದಂನಆ


- ಎಲ್ಲರ ಸಾವೂ ಅಕಾಲಿಕವೇ. ಏಕೆಂದರೆ ಯಾರೂ ಸಾಯಲು ತಯಾರಿರುವುದಿಲ್ಲ.
- ಬೆಳೆಯುವುದು ಎಂದರೆ ಎಲ್ಲ ಸ್ನೇಹಿತರೂ ನಮ್ಮ ಸೇಹಿತರಲ್ಲ ಎಂದು ಅರಿವು ಪಡೆದುಕೊಂಡಿರುವುದು.
- ತ್ರೋಯಿಂಗ್ ಮನಿ ಅಟ್ ಎ ಪ್ರಾಬ್ಲಮ್ ಈಸ್ ನಾಟ್ ನೆಸೆಸರಿಲಿ ದಿ ಬೆಸ್ಟ್ ವೆ ಟು ಸಾಲ್ವ್ ಇಟ್.
- ಗೂಗ್ಲೊಪತಿ: ಇದೊಂದು ಅತ್ಯಾಧುನಿಕ ವೈದ್ಯಕೀಯ ಪದ್ಧತಿ. ಇದರಲ್ಲಿ ರೋಗಿಯೇ ವೈದ್ಯರಿಗೆ ಔಷಧಿಯನ್ನು ಸೂಚಿಸುತ್ತಾನೆ.
- ಅದ್ದೂರಿಯಾಗಿ ತಯಾರಿಸಿರುವ ಚಿತ್ರವೂ ಕೆಟ್ಟ ಚಿತ್ರವಾಗಿರಲು ಸಾಧ್ಯ.
- ಐ ಹ್ಯಾವ್ ನೆವೆರ್ ಲರ್ನ್‌ಡ್ ಎನಿಥಿಂಗ್ ಫ್ರಂ ಅನಿ ಮ್ಯಾನ್ ಹು ಅಗ್ರೀಡ್ ವಿತ್ ಮಿ.
- ವ್ಯಾಪಾರದಿಂದ ಹಣ ಮಾಡು ಆದರೆ ಹಣ ಮಾಡುವುದೇ ವ್ಯಾಪಾರವಾಗದಿರಲಿ.
- ಎಷ್ಟೇ ಸತ್ಯನಾರಾಯಣ ವ್ರತಗಳನ್ನು ಮಾಡಲಿ, ಗೋವಿನ ಹಾಡನ್ನು ಪಠಿಸಲಿ, ಬೇರೆಯವರಿಗೆಲ್ಲ ಸತ್ಯದ ಬಗ್ಗೆ ಉಪದೇಶ ಮಾಡಲಿ ನಾವೆಲ್ಲ ನಮ್ಮ ಅನುಕೂಲಕ್ಕಾಗಿ ಸುಳ್ಳು ಹೇಳುತ್ತೇವೆ.
- ವಿಮೆನ್ ಆರ್ ಲೈಕ್ ಮೆನ್, ಓನ್ಲಿ ಡಿಫರೆಂಟ್, ಮೋಸ್ಟ್ಲಿ ಬೆಟರ್.
- ಸುಳ್ಳು ಹೇಳುವುದನ್ನು ನಾವು ಯಾವಾಗ ಕಲಿತಿದ್ದು? ಸತ್ಯದ ಮೌಲ್ಯವನ್ನು ನಾವು ಹೊಗಳು ಪ್ರಾರಂಭಿಸಿದಾಗ ಸುಳ್ಳಿನ ಯುಗ ಪ್ರಾರಂಭವಾಗಿರಬಹುದೆ?
- ಇವೆರಡು ನಿಮ್ಮ ವ್ಯಕ್ತಿತ್ವವನ್ನು ಸಾರುತ್ತದೆ: ಒಂದು, ನಿಮ್ಮಲ್ಲಿ ಏನೂ ಇಲ್ಲದಿದ್ದಾಗ ನಿಮ್ಮ ತಾಳ್ಮೆ; ಎರಡು, ಎಲ್ಲವೂ ನಿಮ್ಮ ಬಳಿ ಇದ್ದಾಗ ನಿಮ್ಮ ಧೋರಣೆ.
- ಡು ದಿ ಬೆಸ್ಟ್ ಯು ಕೆನ್ ಅಂಟಿಲ್ ಯು ನೊ ಬೆಟರ್. ದೆನ್, ವೆನ್ ಯು ನೊ ಬೆಟರ್ ಡು ಬೆಟರ್.
- ದೇಹ ಬೀಗುತ್ತ ಹೇಳಿತು: ಹೇ, ದವಸ ಧಾನ್ಯ ಕಾಳುಕಡ್ಡಿಗಳೇ ನೀವು ನಮಗೆ ಆಹಾರ. ದವಸ ಧಾನ್ಯವೂ ವಿನಯದಿಂದ ಹೇಳಿತು: ನಮ್ಮ ಬೇರುಗಳು ಮೆಲ್ಲಲು ಮುಂದೆ ನೀವೇ ನಮಗೆ ರುಚಿ ರುಚಿ ಗೊಬ್ಬರ.
- ನಿಮ್ಮನ್ನು ಏನು ಘಾಸಿಗೊಳಿಸಿತು ಎಂಬುದನ್ನು ಮರೆಯಿರಿ. ಆದರೆ ಅದು ಏನು ಪಾಠ ಕಲಿಸಿತು ಎಂಬುದನ್ನು ಮರೆಯದಿರಿ.
- ಫನ್ನಿ, ಮೈ ಬಾಸ್ ಕಾಲ್ಸ್ ಇಟ್ ಎ ಡೆ ವೆನ್ ಓನ್ಲಿ ಇಟ್ ಈಸ್ ನೈಟ್.
- ಸೋಷಿಯಲ್ ಮೀಡಿಯಾದ ಅತಿ ಬಳಕೆ ಆರೋಗ್ಯಕ್ಕೆ ಹಾನಿಕರ.
- ನಂಬಿಕೆ ಎಂದರೆ ನೀವು ನೋಡಿಲ್ಲದ ಅಥವಾ ಮುಂದೂ ನೋಡಲಾಗದ ಸಂಗತಿಯನ್ನು ಒಪ್ಪಿಕೊಳ್ಳುವುದು.

■

ಬೀಚಿ ಪ್ರಕಾಶನದ

ಜನರು ಕೇಳಿದ
ಪ್ರಶ್ನೆಗಳಿಗೆ ಬೀಚಿ
ಅವರು ಸ್ವಾರಸ್ಯವಾಗಿ
ಉತ್ತರ ನೀಡಿದ್ದಾರೆ.

ಉತ್ತರಭೂಪ
ಪ್ರಶ್ನೋತ್ತರಗಳ
ಸಂಗ್ರಹ




# ಉತ್ತರಭೂಪ

"ತಾಯಿ" ಎಂಬ ಎರಡು ಅಕ್ಷರಗಳ ಬಗ್ಗೆ ನಿಮ್ಮ ಅಭಿಪ್ರಾಯ?

"ಜಗತ್ತು" ಎಂಬ ಮೂರು ಅಕ್ಷರಗಳ ಶಬ್ದಕ್ಕಿಂತಲೂ ಇದು ಬಹಳ ದೊಡ್ಡದು.

–ಬೀchi

ಭರತನಾಟ್ಯ ಹಾಗೂ ಕ್ಯಾಬರೆ ನೃತ್ಯಗಳಲ್ಲಿ ಕಲಿಯಲು ಸುಲಭ ಯಾವುದು ಸಾರ್?

ಭರತನಾಟ್ಯ ಕಲಿಯುವುದು ಕಷ್ಟ, ಕ್ಯಾಬರೆ ನೃತ್ಯವನ್ನು ಮರೆಯುವುದು ಕಷ್ಟ.

ಬೀchi

ವಿದೇಶಿಯರಂತೆ ನಾವೂ ಸಹ ತುಟಿಗೆ ತುಟಿ ಜೋಡಿಸಿ. .....

ಈ ಮಹಾ ಕಾರ್ಯಕ್ಕೆ ವಿದೇಶಿಯರೇ ಬೇಕೇ? ಅಮ್ಮ ಅನ್ನಿ, ಈಗ ತುಟಿಗೆ ತುಟಿ ಜೋಡಣೆ ಆಗಲಿಲ್ಲವೇ?

ಬೀchi

ಬೆಲೆ : **299/-** ನಮ್ಮ ಅಪರಂಜಿ ಬಳಗಕ್ಕೆ ವಿಶೇಷವಾಗಿ
10% ರಿಯಾಯಿತಿ ಹಾಗೂ ಅಂಚೆ ಉಚಿತ.

ಆಸಕ್ತರು ಸಂಪರ್ಕಿಸಿ: **M: 9845264304**

**Phonepay, Google pay** ಜೊತೆಯಲ್ಲಿ ತಮ್ಮ ವಿಳಾಸವನ್ನು
ಈ ನಂಬರಿಗೆ ಕಳುಹಿಸಿ **9845264304**

ಇತರ ಪುಸ್ತಕಗಳ ಮಾಹಿತಿ ಪಡೆಯಲು ನಮ್ಮ ಅಂತರ್ಜಾಲ www.beechi.in

# ಬೋಂಡವೂ ಮಳೆಯೂ

●ಎ.ಎಸ್.ಚಂದ್ರಪ್ರಭ

ಹೊರಗಡೆ ಜಿಟಿ ಜಿಟಿ ಮಳೆ, ಹಾಯಾಗಿ ಬೆಚ್ಚಗೆ ಕೂರೋಣ ಎಂದರೆ, ಮಕ್ಕಳು, ಅವರ ಅಪ್ಪ "ಬೋಂಡಾನೋ, ಪಕೊಡಾನೋ ಮಾಡು. ಮಳೇಲಿ ತಿನ್ನುಕ್ಕೆ ಚೆನ್ನಾಗಿರುತ್ತೆ" ಅಂತ ಶುರು ಮಾಡಿದರು.

ನನಗೂ ಒಳಗೊಳಗೆ ಹಾಗೇ ಅನಿಸುತಿತ್ತು. ಆದರೆ ಅವರುಗಳು ಕೇಳಿ, ನಾನು ಮಾಡಿಕೊಟ್ಟರೆ, ನನಗೆ ಪಾಯಿಂಟ್ಸು ಜಾಸ್ತಿ ಅಲ್ಲವೇ?

ಸರಿ, ಎದ್ದು ಬಂದು ತಯಾರಿ ಪ್ರಾರಂಭಿಸಿದೆ. ಹೀರೇಕಾಯಿ, ಆಲೂಗೆಡ್ಡೆ, ಈರುಳ್ಳಿ ಇತ್ತು. ಕಡ್ಲೆ ಹಿಟ್ಟು, ಎಣ್ಣೆ,ಉಪ್ಪು, ಖಾರ ಮನೆ ಅಂದ ಮೇಲೆ ಇದ್ದೇ ಇರುತ್ತಲ್ಲಾ. ಹಿಟ್ಟು ಕಲಸುತ್ತಾ ಇದ್ದಾಗ, ನನ್ನ ತಲೇಲಿ "ಎಲಾ ಇವನಾ, ಈ ಮಳೆಗೂ, ಬೋಂಡಕ್ಕೂ ಎತ್ತಣ ಸಂಬಂಧವಯ್ಯಾ " ಅಂತ ಅನ್ನಿಸಿತು. ಈ ಬೋಂಡ ಮಳೆ ನೆಂಟು ಇವತ್ತು ನೆನ್ನೆಯದಲ್ಲ. ತಲೆ ತಲಾಂತರದಿಂದ ಬಂದಿರುವುದು.

ನಾನು ಚಿಕ್ಕವಳಿದ್ದಾಗ, ನಮ್ಮಜ್ಜಿ ಮನೆಗೆ ಹೊದಾಗ, ಮಳೆ ಬಂದಾಗ ಬೋಂಡ ಮಾಡುತ್ತಿದ್ದರು. ಅಜ್ಜಿ ಬೋಂಡದ ಹಿಟ್ಟು ಮುಗೀತಾ ಬಂದ ಹಾಗೆ "ಬಾರೆ ಇಲ್ಲಿ, ಒಂದು ಟವೆಲ್ಲು ನಿಮ್ಮ ಅಜ್ಜಂಗೆ ಕೊಟ್ಟು, ದೊಡ್ಡಿಪತ್ರೆ, ಗುಬ್ಬಚ್ಚಿ ಬಾಳೆ ಎಲೆ ತರಬೇಕಂತೆ ಅಂತ ಹೇಳು" ಅಂತ ಫರ್ವಾನ್ ಹೊರಡಿಸ್ತಿದ್ರು.

ಬೇಡ ಅಂದ್ರೂ, ನಾವೂ ಸರಿಯಾಗಿ ಟವೆಲ್ಲು ಹಾಕಿಕೊಳ್ಳದೆ, ಅಜ್ಜನ ಜೊತೆ ಮಳೇಲಿ ಹೋಗ್ತಾ ಇದ್ದೆವು. ಮತ್ತೆ ಕೆಸರು ಕಾಲು, ನೀರಿಳಿತಿರೋ ಟವೆಲ್ಲು, ಮಣ್ಣು ಮೆತ್ತಿದ ಯಾವ ಯಾವುದೊ ಎಲೆ ಎಲ್ಲಾ ಒಳಗೆ ತಂದಾಗ, ಅಷ್ಟು ಹೊತ್ತೂ ಬಾಣಲೆಯ ಮುಂದೆ ನಿಂತು ಕರಿಯುತ್ತಿದ್ದ ಅಜ್ಜಿಗೆ ಸಿಟ್ಟು ಬರುತ್ತಿತ್ತು.

"ನಿಮಗೆ ಸ್ವಲ್ಪಾನೂ ಗೊತ್ತಾಗೊಲ್ಲ, ಸಿಟಿ ಹುಡುಗ್ರು ಅವು. ಈ ಮಳೇಲಿ ನೆಂದರೆ ಏನು ಗತಿ ಏನು ಪ್ರೊಫೆಸ್ಸರೋ ಏನೋ ನೀವು" ಅಂದರೆ,

"ಮಕ್ಕಳು ಮಳೇಲಿ ನೆನೀಬೇಕು, ರೆಸಿಸ್ಟೆನ್ಸ್ ಬರಬೇಕು, ಇಮ್ಯೂನಿಟಿ ಹೇಗೆ ಬರುತ್ತೆ ಮತ್ತೆ" ಅಂತ ಅಜ್ಜ ಥಿಯರಿ ಶುರು ಮಾಡ್ತಿದ್ರು.

ಅದಿರಲಿ ಬಿಡಿ. ಬೋಂಡದ ವಿಷಯಕ್ಕೆ ಬರೋಣ, ಅಜ್ಜಿ ಮಾಡುತ್ತಿದ್ದ ಆ ಕೊನೇ ಗುಬ್ಬಚ್ಚಿ ಬಾಳೆ ಎಲೆ ಬೋಂಡಕ್ಕೆ ಡಿಮ್ಯಾನ್ಡಪ್ಪೋ ಡಿಮ್ಯಾಂಡ್. "ಅಲ್ವೇ, ಅಷ್ಟು ಎಳೇ ಹೀರೇಕಾಯಿ, ಆಲೂಗೆಡ್ಡೆ ಬೋಂಡಾನ ಕಂಠಮುಟ್ಟ ತಿನ್ನುವಷ್ಟು ಮಾಡಿ ಕೊಟ್ಟಿದೀನಿ, ಆದರೂ ಈ ಬಿಕನಾಸಿದಕ್ಕೆ ಯಾಕೆ ಹಾಗೆ ಬಾಯಿ ಬಿಡುತ್ತಾವೆ" ಅಂತ ಅಜ್ಜಿ ಲೊಟಗುಟ್ಟುತ್ತಿದ್ದುದು ಇನ್ನೂ ಜ್ಞಾಪಕ ಇದೆ.

ಮುಂದೆ ನಮ್ಮಮ್ಮನ ಮನೆಗೆ, ನನ್ನ ಮಕ್ಕಳನ್ನು ಕರೆದುಕೊಂಡು ಹೋದಾಗ, ಇದೇ ಕಥೆಯ ಮುಂದಿನ ಅಧ್ಯಾಯ ಶುರುವಾಯಿತು. ನನ್ನ ಮಕ್ಕಳೂ, "ಅಜ್ಜಿ ಮನೆ ಹಾಗೆ ನಮ್ಮನೇಲೂ ಬೋಂಡ ಮಾಡೋಣ" ಅಂತ ಶುರು ಮಾಡಿಕೊಂಡರು. ಮಳೆ ಬೋಂಡದ ನಂಟು ಮುಂದಿನ ಪೀಳಿಗೆಗೂ ಬಂತು. ಸಿಟಿಯಲ್ಲಿದ್ದ ಕಾರಣ ನಮ್ಮದು ಸ್ವಲ್ಪ ಬದಲಾವಣೆ ಕಂಡಿತು. ಟ್ರಡಿಷನಲ್ ಆಗಿ ಮಾಡುತ್ತಿದ್ದ ಹೀರೇಕಾಯಿ, ಬಾಳೆಕಾಯಿ ಜೊತೆಗೆ, ದಪ್ಪ ಮೆಣಸಿನ ಕಾಯಿ, ಬೆಂಡೆ ಕಾಯಿ ಸೇರಿಕೊಂಡಿತು.

ಕೊನೇ ಒಬ್ಬೆಗೆ ಸಿಟಿ ಮನೇಗಳಲ್ಲಿ ಯಾವ ಎಲೆ ಸಿಗುತ್ತೆ ಹೇಳಿ. ಹಾಗಾಗಿ

ಕಡಲೆಕಾಯಿ ಹಿಟ್ಟಿಗೆ ಬವರಿ, ಕಾಂಡಿಮೆಂಟ್ ಸ್ಟೋರ್ಸ್‌ನಲ್ಲಿನ ಬೋಂಡಾ ಕಳ್ಳೆಕಾಯಿ ನಮ್ಮನೇಲೂ ಮಾಡೋದು ಶುರು ಆಯ್ತು,

ಈಗ ನನ್ನ ಮಕ್ಕಳು ಅಮೆರಿಕದಲ್ಲಿದ್ದಾರೆ. ಅಲ್ಲಿ ಎಲ್ಲಾ ವೀಕ್ ಎಂಡ್ನಲ್ಲಿ ಮಾತ್ರ ತಾನೆ – ಅಡಿಗೆ, ಬಟ್ಟೆ ಒಗೇಯೋದು, ಮನೆಗೆ ಫೋನ್ ಮಾಡೋದು ಇತ್ಯಾದಿ. ಹಾಗಾಗಿ, ಯಾವುದಾದರೂ. ವೀಕ್ ಎಂಡ್ ಮಳೆ ಬಂತು ಅಂದರೆ ಇಬ್ಬರ ಮನೇಲೂ ಬೋಂಡ ಗ್ಯಾರಂಟಿ. ಮಂಗಳ ಗೌರಿ, ಮಾರನವಮಿ ಸಂಪ್ರದಾಯ ಇಲ್ಲೇ ಬಿಟ್ಟು ಹೋದರೂ, ಮಳೇಲಿ ಬೋಂಡ ಕರಿಯೊ ಸಂಪ್ರದಾಯ ಮಾತ್ರ ಚಾಚೂ ತಪ್ಪದೆ ಮುಂದುವರೆಸಿಕೊಂಡು ಬಂದಿದ್ದಾರೆ. ಈ ಅಭ್ಯಾಸಾನ ಮೊಮ್ಮಕ್ಕಳೂ ಮೈಗೂಡಿಸಿಕೊಳ್ಳುತ್ತಿದ್ದಾರೆ ಅಂತ ಅನಿಸಿತು. ಯಾಕೇಂತೀರಾ,

ರಜೆಗೆ ಅವರೆಲ್ಲಾ ಬಂದಿದ್ದಾಗ, ಒಮ್ಮೆ, ಮಳೆ ಬಂದಾಗ, "ಅಜ್ಜಿ, ರೈನ್ಸ್ ಬಂದಾಗ ಮಮ್ಮಿ ಆಲ್ವೇಸ್ ಮೇಕ್ಸ್ ಬೋಂಡಾಸ್. ಈಗ ನಾವೂ ಮಾಡೋಣ" ಅಂತ 16 ವರ್ಷದ ಮೊಮ್ಮಗಳು ಉಲಿದಾಗ, 10 ವರ್ಷದ ಮೊಮ್ಮಗ ಸೋಫಾದಿಂದ ಜಂಪ್ ಮಾಡಿ, "ಐ ಕ್ಯನ್ ಕಟ್ ಪೊಟಾಟೊ, ಐ ಹೆಲ್ಪ್ ಅಜ್ಜಿ" ಅಂತ ಟಿಕ್ಟಾಕ್, ಯುಟ್ಯೂಬ್ ಶೈಲಿಯಲ್ಲಿ ಅಡಿಗೆ ಮನೆ ಡ್ರಾಯರಿನಿಂದ ಚಾಕು ತೆಗೆದು ಸಿದ್ಧವಾಗಿ ನಿಂತ.

"ಮಹರಾಯ, ಚಾಕೂ ಅಲ್ಲಿಡು, ಅದು ಸೇಫ್ ಇಲ್ಲ. ನಾನು ಬೋಂಡ ಮಾಡ್ತೀನಿ. ನೀನು ಸರ್ವ್ ಮಾಡು" ಅಂತ ಹೇಳಿ ಶುರು ಮಾಡಿದೆ.

ನನ್ನ ಮೊಮ್ಮಗ ಅವನ ಮಾತಿನಂತೆ ಬೋಂಡಾ ಹೀಗೆ ಮಾಡಿದರೆ ಹಾಗೆ ಬಿಸಿ ಬಿಸಿಯಾಗಿ ತಗೊಂಡು ಹೋಗಿ ಸರ್ವ್ ಮಾಡುತ್ತಿದ್ದ. ಬರೀ ಕರಿದಿದ್ದೊಂದೇ ನನಗೆ ಗೊತ್ತು. "ಅಮ್ಮನ ಮನೆಗೆ ನಾಲ್ಕು ದಿವಸಕ್ಕೆ ಬಂದಾಗ ಅಡಿಗೆ ಮನೆ ಮರೆತು ಬಿಡಿ" ಅಂತ ಹೇಳಿದ ತಾಯಿ ಮಾತನ್ನು ನನ್ನ ಕುವರಿಯರಿಬ್ಬರೂ ಚಾಚೂ ತಪ್ಪದೆ ಪರಿಪಾಲಿಸುತ್ತಾರೆ. ಹಾಗಾಗಿ, ಅಪ್ಪನ ಜೊತೆ ಕೂತು ಊರ ಮಾತೆಲ್ಲ ಆಡ್ತಾ, ಬಿಸಿ ಬೊಂಡ ಮುಂದೆ ಇದ್ರೆ ಒಳಗೆ ಹೋಗದೆ ಇರುತ್ತೇ?

ತಿನ್ನಲಿ, ಬಿಡಿ ಕಾಲುಚಾಚಿಕೊಂಡು ಹರಟೆ ಹೊಡೀಲಿ. ಅವರವರ ಮನೆಗೆ ಹೋದ ಮೇಲೆ ಗಂಡ, ಮನೆ, ಮಕ್ಕಳು ಇದ್ದಿದ್ದೇ ನಮ್ಮ ಹೆಣ್ಣುಮಕ್ಕಳಿಗೆ ಅಲ್ಲವೇ?

ಎಲ್ಲಾ ಮುಗಿದ ಮೇಲೆ, ನನ್ನವರು ಬಂದು ಮೆಲ್ಲಗೆ ಇಣುಕಿ ನೋಡಿ, "ನಿನಗೂ ಒಂದೆರಡು ಇದೆಯೇನೆ" ಅಂದಾಗ, "ಓ ಡ್ಯಾಡಿಗೆ ಎಷ್ಟು ಕನ್ಸರ್ನ್" ಅಂತ ಮಕ್ಕಳು ಆಡಿಕೊಂಡಾಗ, ನನ್ನ ಮೊಮ್ಮಗ, "ನಂಗೆ ಗೊತ್ತಿತ್ತು ಅದಕ್ಕೆ ನಾನು ಕೀಪ್ ಮಾಡಿದ್ದೆ ನನ್ನ ಬೆಸ್ಟ್ ಅಜ್ಜಿಗೆ" ಅಂದಾಗ, ನನ್ನ ಮೊಮ್ಮಗಳು "ನಾನೂ ಟು ನಂಬರ್ಸ್ ಯಾಡ್ ಮಾಡ್ತೀನಿ" ಅಂತ ಹೇಳ್ದಾಗ ನನ್ನ ಮುಖ ಹೇಗಿರಬಹುದು ನೀವೇ ಊಹಿಸಿಕೊಳ್ಳಿ. ಯಾವ ಅಜ್ಜಿಗೆ ಇನ್ನೇನು ಬೇಕು ಹೇಳಿ.

ಬೋಂಡಕ್ಕೂ, ಮಳೆಗೂ ಅದೇನು ಸಂಬಂಧವೋ ಗೊತ್ತಿಲ್ಲ. ಬರಿದೇ ಬಾಯಿ ಚಪಲವನ್ನಲ್ಲದೆ ಅದು ಬಾಂಧವ್ಯವನ್ನೂ ಬೆಸೆಯುತ್ತದೆ ತನ್ನದೇ ಆದ ರೀತಿಯಲ್ಲಿ. ಈ ಬಗ್ಗೆ ಯಾರಾದರೂ ಅಧ್ಯಯನ ಮಾಡಬಹುದೇನೋ?

ಒಟ್ಟಿನಲ್ಲಿ ಹೇಳುವುದಾದರೆ, ಬೋಂಡ ಮಳೆ ನಂಟು ತನ್ನ ವಿಶಿಷ್ಟತೆ ಉಳಿಸಿಕೊಂಡು ಪೀಳಿಗೆಯಿಂದ ಪೀಳಿಗೆಗೆ ಮುಂದುವರೆದುಕೊಂಡು ಹೋಗುತ್ತಿರುವುದು ದಿಟ.

ಮಳೆರಾಯನೆಲ್ಲೋ, ಬೋಂಡವೆಲ್ಲೋ, ಎತ್ತಣದಿಂದೆತ್ತಣ ಸಂಬಂಧವಯ್ಯಾ.

■

# ಯಕ್ಷಪ್ರಶ್ನೆ

**●ಗೌತಮ**

ನನಗೊಬ್ಬ ಸ್ನೇಹಿತ ಇದ್ದ. ಬಹಳ ಬುದ್ಧಿವಂತ. ಹೊಸ ಹೊಸದಾಗಿ ಏನೇನೇನೇನೋ ಕಂಡುಹಿಡೀತಾ ಇದ್ದ. ಜೀನಿಯಸ್ ಅಂತೇನೋ ಅಂತಾರಲ್ಲ ಅಂಥಾವನು ಅವನು. ಅವನ ಸಂಶೋಧನಾ ಪ್ರವೃತ್ತಿಯನ್ನು ಗಮನಿಸಿದ ಕಂಪನಿಯವರು ಅಧ್ಯಯನ ಮಾಡಿಕೊಂಡು ಬರಲು ಅವನನ್ನು ಜಪಾನಿಗೆ ಕಳುಹಿಸಿದರು. ಮೂರು ತಿಂಗಳಿದ್ದು ಬಂದ. ಅದೇನನ್ನಿಸಿತೋ ಅವನಗೆ, ತನ್ನ ಎಸ್.ಯು.ವಿ. ಕಾರಿಗೆ ರಿಮೋಟ್ ಕಂಟ್ರೋಲ್ ಒಂದನ್ನು ಕಂಡುಹಿಡಿದ. ಅದು ಅಂಥಿಂಥ ರಿಮೋಟ್ ಕಂಟ್ರೋಲ್ ಅಲ್ಲ. ಕೈಯ್ಯಲ್ಲಿ ಸ್ಟೀರಿಂಗ್ ಮಾಡೋಷ್ಟಿಲ್ಲ, ಕಾಲಲ್ಲಿ ಬ್ರೇಕ್ ಹಾಕೋ ಅವಶ್ಯಕತೆ ಇಲ್ಲ, ವೇಗವರ್ಧನೆಗೆ ಪೆಡಲ್ ಒತ್ತುವಂತಿಲ್ಲ, ಕಿಟಕಿಯ ಗಾಜನ್ನು ಏರಿಳಿಸಲು ಬಟನ್ ಒತ್ತಬೇಕಾಗಿಲ್ಲ, ರೇಡಿಯೋ ಕೇಳಲು ಏನನ್ನೂ ತಿರುಗಿಸಬೇಕಾಗಿಲ್ಲ ಇತ್ಯಾದಿ ಇತ್ಯಾದಿ ಏನೂ ಮಾಡಬೇಕಾದದ್ದಿಲ್ಲ. ಕೈಕಾಲುಗಳಿಗೆಲ್ಲ ಸಂಪೂರ್ಣ ಬಿಡುವು. ಸುಮ್ಮನೆ ಕೂತಿದ್ದರಷ್ಟೇ ಸಾಕು. ಮತ್ತೆ ಕಾರು ಓಡೋದು ಹೇಗೆ ಅಂತ ಕೇಳ್ತೀರೋ? ನೋಡಿ, ಅದೇ ಅವನ ಇನ್ನೋವೇಶನ್ನು ಅಂದರೆ ಅನ್ವೇಷಣೆ.

ಹೇಳೋಕೆ ಮರೆತಿದ್ದೆ. ಅವನು ಮಹಾದೈವಭಕ್ತ. ಅವನ ರಿಮೋಟು ಕೆಲಸ ಮಾಡೋದು ಚಾಲಕನ ಮನಸ್ಸಿನಲ್ಲೇ ಹೇಳಿಕೊಳ್ಳುವ ಕಮ್ಯಾಂಡ್(ಆಜ್ಞೆ)ಗಳ ಆಧಾರದ ಮೇಲೆ. ಇದನ್ನ ನಂಬೋದೂ ಬಿಡೋದೂ ನಿಮಗೆ ಸೇರಿದ್ದು. ಈ ಕಮ್ಯಾಂಡ್ಗಳಿಗೂ ಒಂದು ನಿಖರವಾದ ಶಬ್ದಗಳಿರಬೇಕಲ್ಲ. ಹಾಗಾಗಿ ಎಲ್ಲ ಕಮ್ಯಾಂಡ್ಗಳಿಗೂ ತನ್ನದೇ ಆದ ಸಂಕೇತಪದಗಳನ್ನು ಸೃಷ್ಟಿಸಿಕೊಂಡ. ಕಾರನ್ನು ಸ್ಟಾರ್ಟ್ ಮಾಡಲು ಓಂ, ಎಡಕ್ಕೆ ತಿರುಗಲು ವಾಮ, ಬಲಕ್ಕೆ ದಕ್ಷಿಣ ಆಕ್ಸೆಲರೇಶನ್ಗೆ ವೇಗಾ, ಕಾರನ್ನು ನಿಲ್ಲಿಸಲು ಪೂವಿ (ಪೂರ್ಣವಿರಾಮ) ಇತ್ಯಾದಿ. ಎಲ್ಲ ಮುಗಿದು ಒಂದು ಅಂತಿಮ ಸುತ್ತಿನ ಪರೀಕ್ಷೆಗೆ ಕಾರನ್ನು ಆಚೆಗೆ ತೆಗೆದ. ಎಲ್ಲ ಸಂಕೇತ ಪದಗಳನ್ನೂ ಉಪಯೋಗಿಸಿ ಕಾರನ್ನು ಚಲಾಯಿಸಿದ. ಪರೀಕ್ಷೆಯನ್ನು ಯಶಸ್ವಿಯಾಗಿ ಮುಗಿಸಿದ. ಎರಡೂ ಕೈಗಳನ್ನೆತ್ತಿ ಆಕಾಶದ ಕಡೆ ಚಾಚುತ್ತಾ ಆ ಭಗವಂತನಿಗೆ ಪ್ರಣಾಮಗಳನ್ನು ಅರ್ಪಿಸಿದ. ಅರೆ, ಕಾರಿನ ಯಾವಕ್ರಿಯೆಯಲ್ಲೂ ಅವನನ್ನು ನೆನೆಯಲಿಲ್ಲವಲ್ಲಾ ಎನ್ನಿಸಿ ಕಾರನ್ನು ಸ್ಟಾರ್ಟ್ ಮಾಡಲು ಇದ್ದ **ಓಂ** ಸಂಕೇತಪದವನ್ನು **ದೇವರು ದೊಡ್ಡವನು** ಅಂತ ಬದಲಾಯಿಸಿದ. ಧನ್ಯೋಸ್ಮಿ ಎಂದು ಕೊಂಡ. ಇನ್ನೊಮ್ಮೆ ದೇವರಿಗೆ ಕೈಮುಗಿದ. ಅಂದು ರಾತ್ರಿ ಗಾಢವಾಗಿ ನಿದ್ದೆಮಾಡಿದ.

ಮಾರನೆಯ ದಿನ ಭಾನುವಾರ. ಒಂದು ಜಾಲಿ ರೈಡ್ ಹೋಗೋಣವೆನ್ನಿಸಿತು. ಹೊರಟ. ಹೊರಟ ಹೊರಟ. ಎಲ್ಲ ಸಂಕೇತ ಪದಗಳನ್ನೂ ಉಪಯೋಗಿಸಿದ. ಸಮುದ್ರ ತೀರದುದ್ದಕ್ಕೂ ಕಾರು ಓಡುತ್ತಿತ್ತು. ಅರೆ! ಸಮುದ್ರದೊಳಗೇ ನುಗ್ಗುವ ಒಂದು ಡಾಂಬರು ರಸ್ತೆ. ಖುಷಿಯಾಗಿ ಬಿಟ್ಟ. ಓಹ್! ಅದ್ಭುತ!! ಪರಮಾನಂದವಾಯಿತು. ವೇಗಾ ಎಂದ. ನೂರನಲವತ್ತು ನೂರಐವತ್ತನ್ನೂ ಮುಟ್ಟಿತು. ಪರ್ವತವನ್ನೇ ತಬ್ಬಿಕೊಳ್ಳುವಂತೆ ಎರಡೂ ಕೈಗಳನ್ನು ಚಾಚಿ ಟೈಟಾನಿಕ್ನಲ್ಲಿ ನಿಂತು

ಪ್ರಯಾಣಿಸುತ್ತಿರುವಂತೆ ಕಲ್ಪಿಸಿಕೊಂಡ. ಕಾರು ಮುಂದೆಮುಂದೆ ಮಿಂಚಿನವೇಗದಲ್ಲಿ ಓಡುತ್ತಿದ್ದಂತೆ ದಿಗಂತದಲ್ಲಿ ರಸ್ತೆಯ ಎರಡೂಬದಿಗಳು ಸೇರಿದಂತಿದ್ದ ಬಿಂದುವೂ ಮುಂದೆ ಮುಂದೆ ಹೋಗುತ್ತಿತ್ತು. ಎಷ್ಟು ಕಿಲೋಮೀಟರ್ ಓಡಿತ್ತೋ ನೋಡುವ ಮನಸ್ಸು ಅವನಿಗಾಗಲಿಲ್ಲ. ಬೇರೆ ಒಂದು ಪ್ರಪಂಚಕ್ಕೇ ಹೋಗಿಬಿಟ್ಟಿದ್ದ. ರಸ್ತೆಯ ಎಡಬಲಗಳಲ್ಲಿ ರಸ್ತೆಮುಗಿಯುತ್ತ ಬಂತು, ರೋಡ್ ಈಸ್ ಕಮಿಂಗ್ ಟು ಡೆಡ್ ಎಂಡ್, ಡೇಂಜರ್, ಅಪಾಯ, ಸ್ಲೋಡೌನ್ ಇತ್ಯಾದಿ ಸೂಚನಾ ಫಲಕಗಳು ರಸ್ತೆ ಮುಗಿಯುತ್ತಿರುವುದನ್ನು ಸೂಚಿಸುತ್ತಿದ್ದವು. ವಿಧಿಯಿಲ್ಲದೇ ಕಾರನ್ನು ನಿಲ್ಲಿಸಲೇಬೇಕಾಯಿತು. ಆದರೆ, ಆದರೆ ನಿಲುಗಡೆಯ ಸಂಕೇತ ಪದ ನೆನಪಿಗೆ ಬರಲಿಲ್ಲ. ನಿಲ್ಲಿಸು, ಅಂತ್ಯ, ಸ್ಟಾಪ್, ನಿಷ್ಕ್ರಿಯ ಅಂತೆಲ್ಲ ಹೇಳಿಕೊಂಡ. ಉಹುಂ. ಅವು ಯಾವುವೂ ವರ್ಕೌಟ್ ಆಗಲಿಲ್ಲ. ರಸ್ತೆಯ ಕೊನೆ, ಸಮುದ್ರದ ಅಂಚು ಕಾಣಿಸುತ್ತಿದೆ. ಕಾಯ ಕಂಪಿಸಿತು. ದೇಹ ಬೆವರಿತು. ಸತ್ತೆ ನಾನು ಅಂತ ನಿರ್ಧರಿಸಿಬಿಟ್ಟ. ಅಷ್ಟರಲ್ಲಿ ಪವಾಡವೆನ್ನುವಂತೆ ನೆನಪಿಗೆ ಬಂತು. ಪೂವಿ ಎಂದುಕೊಂಡ. ಕ್ರೀಚ್ ಅಂತ ದೊಡ್ಡದಾಗಿ ಸದ್ದು ಮಾಡುತ್ತಾ ಕಾರು ನಿಂತಿತು. ಕರ್ಚೀಫಿನಿಂದ ಮುಖವನ್ನು ಮಾತ್ರ ಒರೆಸಿಕೊಂಡ.

ಎರಡೂ ಕೈಗಳನ್ನು ಮೇಲಕ್ಕೆತ್ತಿ ಆಕಾಶದ ಕಡೆಗೆ ಚಾಚಿ **ದೇವರು ದೊಡ್ಡವನು** ಅಂದುಕೊಂಡ !!!

***

ಈ ಕಥೆಯನ್ನು ಬಹಳ ಹಿಂದೆ ಎಲ್ಲೋ ಕೇಳಿದ್ದೀನಿ ಅನ್ನಿಸ್ತಾ ಇದೆಯಲ್ಲವೇ ನಿಮಗೆ. ಹೌದು. ಬಹಳ ಹಳೆಯ ಕಥೆ. ಇದೊಂದು ಜಾನಪದ ಕಥೆಯಂತೆ ಅನೇಕರ ಬಾಯಲ್ಲಿ ಅನೇಕ ಸಲ ಹೇಳಲ್ಪಟ್ಟಿದೆ. ಹಾಡುಗಳನ್ನು ರಿ-ರಿಮಿಕ್ಸ್ ಮಾಡುವಂತೆ ನಾನೂ ಅದೇ ಕಥೇನ ಹೇಳಿದ್ದೀನಿ ಅಷ್ಟೇ. ಒರಿಜಿನಲ್ ಆಥರ್ ಯಾರೂಂತ ನನಗೆ ದೇವರಾಣೆಗೂ ಗೊತ್ತಿಲ್ಲ.

ಆದರೆ ಪ್ರಶ್ನೆ ಅದಲ್ಲ.

ಈ ಕಥೆಯನ್ನು ಹೇಳಿದವರು ಯಾರು?

■

---



**ನಿದ್ದೆ ಬಗ್ಗೆ ಪ್ರಬಂಧ ಬರೆಯುವುದಕ್ಕೆ ಹೇಳಿದರೆ ನಿದ್ದೆಗೇ ಹೋಗಿಬಿಟ್ಟ**

# ಒಂದು ಪ್ಯಾಂಟಿನ ಕಥೆ – ವ್ಯಥೆಯಲ್ಲ

**●ಕೆ.ಎಸ್. ಸೋಮೇಶ್ವರ**

ನಮ್ಮಲ್ಲಿ ಕಥೆ, ಪುರಾಣಗಳಿಗೇನೂ ಕೊರತೆಯಿಲ್ಲ.ಅನೇಕಾನೇಕ ವಿಷಯಗಳು ನಮ್ಮಲ್ಲಿ ಕಥಾ ಕಾಲಕ್ಷೇಪವಾಗಿ ಕಾಲ ಕಳೆದು ಬಿಡುತ್ತವೆ.. ಆದರೆ, ಈ ಪ್ಯಾಂಟಿನ ವಿಷಯ ಹಾಗಲ್ಲ. ಏಕೆಂದರೆ, ಅದು ನಮ್ಮಗಳ ಮೈಗಂಟಿದ ಚರ್ಮತದಂತೆಯೆ ಅಲ್ಲವೇ?

ಈ ಪ್ಯಾಂಟಿನ ಇತಿಹಾಸ ಹಿಂದಿರುಗಿ ನೋಡಿದರೆ ಬಹುಶಃ ನಮಗೆ ಬ್ರಿಟಿಷರಿಂದ ದೊರೆತ ಬಳುವಳಿ ಎನ್ನಬಹುದು. ಆದರೆ, ಇದನ್ನು ವಿದೇಶಿ ಎನ್ನಲು ಯಾರೂ ಸ್ವದೇಶಿ ಚಳುವಳಿ ಮಾಡಿದ ಇತಿಹಾಸ ಇದ್ದಂಗಿಲ್ಲ. ನಮ್ಮನಾಳಿದ ಬ್ರಿಟಿಷರು ಅಂದಿನ ಕಾಲದ ವಿನ್ಯಾಸದ ಪ್ಯಾಂಟುಗಳ ಧರಿಸಿ ಅದಕ್ಕೆ ಸೂಟು ಬೂಟು ಶೃಂಗಾರ ಮಾಡಿಕೊಂಡು ನಮ್ಮಗಳ ಮುಂದೆಯೇ ಮೆರೆದಾಡುತ್ತಿದ್ದರು. ಆದರೆ, ನಾವು ಯಾರಿಗೇನು ಕಮ್ಮಿ ಎಂಬಂತೆ ನಮ್ಮ ಹಿರಿಯರು ಕಲಾಪತ್ತಿನ ಪಂಚೆ, ಶಲ್ಯ ಇಲ್ಲ ಕಲಾಪತ್ತಿನ ಕಚ್ಚೆ ಪಂಚೆ,ಮೇಲೆ ಜುಬ್ಬಾ ಅದರ ಮೇಲೆ ಕೋಟು ಜೊತೆಗೆ ತಲೆಯ ಮೇಲೆ ಜರಿ ಪೇಟಾದಿಂದ ಮಿಂಚುತ್ತ ಅವರ ಸೂಟಿಗೆ ಸಾಟಿಯಾಗಿದ್ದರು. ನಮ್ಮಲ್ಲಿ ಆಗಿನಿಂದ ಈಗಿನವರೆಗೂ ದೊಗಲೆ ಪೈಜಾಮಧಾರಿಗಳು ದೇಶದ ಉದ್ದಗಲಕ್ಕೂ ನಮಗೆ ಕಾಣುತ್ತಾರೆ ಮತ್ತು ಆ ದಿರಿಸು ತನ್ನ ಪತಾಕೆಯನ್ನು ಗತ್ತಿನಿಂದ ಹಾರಿಸುತ್ತಿದೆ.

ಇನ್ನು ಪ್ಯಾಂಟಿನ ಕಥೆ ಮುಂದುವರಿಸೋಣ. ಮೊದಲಿಗೆ ಇವು ದೊಗಲೆ ಇಜಾರಗಳಾಗಿದ್ದವು. ಷರಾಯಿ ಅಂತ ಗೌರವ ಬೇರೆ. ಇದನ್ನು ಹಿಡಿದಿಟ್ಟುಕೊಳ್ಳಲು ಸೊಂಟಕ್ಕೆ ಬೆಲ್ಟು ಕಟ್ಟಿಕೊಂಡು ಹಾರಾಟ ಬೇರೆ. ಇದನ್ನು ಇನ್ನಷ್ಟು ಶಿಸ್ತಾಗಿ ಹಿಡಿದಿಟ್ಟುಕೊಳ್ಳಲು ಭುಜಪಟ್ಟಿ (ಬ್ರೇಸಸ್). ಇದು ಮೊದಲೆಲ್ಲ ಮಕ್ಕಳಿಗೆ ತೊಡಿಸುತ್ತಿದ್ದರು.. ಇದನ್ನು ನಮ್ಮ ಹಳೆಯ ಚಿತ್ರಗಳಲ್ಲಿ ಹಿರಿಯ ನಟರಲ್ಲಿ ಕಾಣಬಹುದಿತ್ತು. ಪ್ಯಾಂಟ್ ಧರಿಸುವ ವಿಷಯದಲ್ಲಿ ಎಲ್ಲರೂ ಜಾರ್ಜ್ ಬರ್ನಾಡ್ ಷಾ ಆಗಲು ಸಾಧ್ಯವಿಲ್ಲವಲ್ಲ. ಹಾಗೇನಾದರೂ ಆದರೆ ನೋಡುಗರ ಗತಿ ಗತಿಯಿಲ್ಲದ ತಿರುಗುವಿಕೆ.

ಕಾಲ ಬದಲಾಗಲೇ ಬೇಕಲ್ಲ. ಹಾಗಾಗಿ, ಈ ದೊಗಲೆ ಷರಾಯಿಗಳು ಪ್ಯಾಂಟ್ ಆಗಿ ಬೆಲ್ ಬಾಟಮ್ ಗೆ ಬಂದವು. ಅದೇನೂ ಮೊದಲಿನಂತೆ ಗಾಳಿಯಾಡುವುದಕ್ಕೆ ಯಾವ ರೀತಿ ತೊಂದರೆಯೂ ಇರಲಿಲ್ಲ. ಇದರ ವೈಯ್ಯಾರವನ್ನು ನೋಡಲು ಮತ್ತೆ ನಮ್ಮ ಭೂಲೆ ಬಿಸ್ರೆ ಚಿತ್ರಗಳಿಗೇ ಹೋಗಬೇಕು. ನಮ್ಮ ಮನೆಯ ರಾಜ್ ಕುಮಾರ್ ರಿಂದ ಹಿಡಿದು ಪಕ್ಕದ ಎನ್.ಟಿ.ಆರ್, ನಾಗೇಶ್ವರರಾವ್, ಇನ್ನೊಂದು ಪಕ್ಕದ ಎಂ.ಜಿ.ಆರ್, ಶಿವಾಜಿ ಗಣೇಶನ್ ಸ್ವಲ್ಪ ಮೇಲಕ್ಕೆ ಹೋದರೆ ರಾಜ್ ಕಪೂರ್, ದಿಲೀಪ್ ಕುಮಾರ್, ಧರ್ಮೇಂದ್ರ ಹೀಗೆ ಇವರುಗಳ ಸೊಂಟದಲ್ಲಿ ಸಾಲು ಸಾಲು ಬೆಲ್ ಬಾಟಮ್‌ಗಳನ್ನು ನೋಡಬಹುದಿತ್ತು ಇಲ್ಲಿ ನಟೀಮಣಿಯರ ಬಳುಕುವಿಗೆ ಏನೂ ಕಡಿಮೆಯಿಲ್ಲ.

ಈ ಪ್ಯಾಂಟುಗಳ ಪಯಣ ಮುಂದುವರಿದು ಟೈಟ್ ಪ್ಯಾಂಟ್ ಆಗಿ ನಂತರ ಸ್ಲಿಮ್ ಫಿಟ್ ಆಗಿ ಮುಂದೆ ವೇಸ್ಟ್ ವೇಸ್ಟಾಗಬಾರದೆಂದು ಬಂತು

ಲೋ ವೇಸ್ಟ್. ಇವೆಲ್ಲ ವಿವಿಧ ಜಾತಿ ಮತ್ತು ವರ್ಣಗಳಲ್ಲಿ ಬೇರೆ ರಾರಾಜಿಸುತ್ತವೆ. ಹತ್ತಿ ಮತ್ತೆ ಉಣ್ಣೆ, ಪಾಲಿಯೆಸ್ಟರ್ ಹೀಗೆ 'ಜಾತಿ ಹಲವು ಪ್ಯಾಂಟು ಒಂದೇ' ಎನ್ನುವಂತೆ ನಮ್ಮಗಳ ದೇಹವನ್ನು ಅಪ್ಪಿಕೊಳ್ಳುತ್ತವೆ. ಇವುಗಳಿಗೆಲ್ಲ ಸೆಡ್ಡು ಹೊಡೆಯುವಂತೆ ಬಂದ ದೊಡ್ಡಣ್ಣ ಜೀನ್ಸ್ (ಡೆನಿಮ್).ಇವನ್ಯಾವ ಜೀನ್‌ಗೆ ಸೇರಿದ್ದೋ ಅವನನ್ನೇ ಕೇಳಬೇಕು. ಇದರ ಹೆಗ್ಗಳಿಕೆಯೆಂದರೆ ಸೋಪಿನ ಖರ್ಚು ಉಳಿತಾಯ! ಏಕೆಂದರೆ, ಇದರ ಒಗೆತದ ಅವಧಿ ಹಲವು ದಿನಗಳ ತಾಳಿಕೆ. ಈಗ ಇವುಗಳ ಮೈಯೆಲ್ಲಾ ಕಣ್ಣೇ. ಎಲ್ಲೆಲ್ಲಿ ಹಾಕುವವರಿಗೇ ಗೊತ್ತು. ದೇವೇಂದ್ರನಿಗೆ ಸಾವಿರ ಕಣ್ಣಂತೆ. ಅದನ್ನು ನಾವು ಯಾವ ಕಣ್ಣಲ್ಲಿ ನೋಡಬೇಕು. ಆದರೆ, ಈ ಕನಕನ ಕಿಂಡಿಗಳು ಮಾತ್ರ ನಮಗೆ ಢಾಳಾಗಿಯೇ ಕಾಣುತ್ತವೆ.

ಇಷ್ಟೆಲ್ಲಾ ಪ್ಯಾಂಟ್ ಪುರಾಣ ಕೇಳಿದರಲ್ಲ. ಇದೇನು ನಾವು ಹುಡುಗರು ಜೊತೆಗೆ ಮುದುಕರಿಗೇ ಮೀಸಲಲ್ಲ. ನಾವು ಯಾರಿಗೂ ಕಡಿಮೆಯಲ್ಲ ಎಂಬಂತೆ ಮಹಿಳಾಮಣಿಗಳು ವಯೋಬೇಧವಿಲ್ಲದೇ ಇದರ ಅಪ್ಪುಗೆಯಲ್ಲಿ ಆನಂದಿಸುತ್ತ ಬೆಕ್ಕಿನ ನಡಿಗೆ ಅಲ್ಲಲ್ಲ ಕ್ಯಾಟ್ ವಾಕ್ ಮಾಡಿ ಪ್ಯಾಂಟುಗಳಿಗೆ ಹೆಚ್ಚಿನ ಮರ್ಯಾದೆ ಕೊಡಿಸಿದ್ದಾರೆ. ಅದಲ್ಲದೇ ತಮಗೆ ಬೇಕಾದ ತಮ್ಮ ಪ್ಯಾಷನ್‌ಗೆ ಅನುವಾಗುವ ಫ್ಯಾಷನ್‌ನಲ್ಲಿ ಅದನ್ನು ಸಿಂಪಿಸಿ ತಮ್ಮ ಅಂದವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ.

ಸಧ್ಯಕ್ಕೆ ಇಷ್ಟು ಸಾಕು ಬಿಡಿ. ಇನ್ನು ಹೆಚ್ಚಾದರೆ ನಮ್ಮ ಹಳೆಯ ಚಿತ್ರಗೀತೆ 'ಪ್ಯಾಂಟು ಹೋಗಿ ಚಡ್ಡಿ ಬಂತು........' ಎಂಬಂತಾಗುತ್ತದೆ. ಆಮೇಲೆ, ನಮ್ಮ ಸೆನ್ಸಾರ್ ಮಂಡಲಿ ಗಲಿ ಬಿಲಿ ಆಗುತ್ತೆ. ■

## ಆಯಾ ಕಾಲದ ಆಲೋಚನೆ

ಕಾಲೇಜು ಪ್ರಿನ್ಸಿಪಾಲರ ಮನೆಗೆ ತೆಂಗಿನ ಮರ ಹತ್ತಲು ಸುಬ್ಬಣ್ಣ ಹೋಗಿದ್ದ. ಮನೆಯ ಜಗಲಿಯಲ್ಲಿ ಪ್ರಿನ್ಸಿಪಾಲರು

ಸೋಫಾದಲ್ಲಿ ಕುಳಿತ್ತಿದ್ದರು. ಅವರೊಂದಿಗೆ ಮಾತನಾಡುತ್ತ ಸುಬ್ಬಣ್ಣ ಕೇಳಿದ "ಧನಿ ನಿಮಗೆ ಕಾಲೇಜಿನಲ್ಲಿ ಸಂಬಳ ಎಷ್ಟು ಸಿಗುತ್ತದೆ." ಅದಕ್ಕೆ ಅವರು ಹೇಳಿದರು "ಒಂದು ಒಂದೂವರೆ ಲಕ್ಷದಷ್ಟು" . ಆಗ ಸುಬ್ಬಣ್ಣ ಹೇಳಿದ "ಅದು ಸ್ವಲ್ಪ ಜಾಸ್ತಿ ಆಯಿತು ಅಲ್ವಾ." ಅದಕ್ಕೆ ಪ್ರಿನ್ಸಿಪಾಲ್ ಹೇಳಿದರು " ಶಾಲೆಗೆ ಹೋಗೋ ಸಮಯದಲ್ಲಿ ಹಲಸಿನ ಮರ ಮಾವಿನ ಮರ ಏರಿ ಆಟ ಆಡದೆ ಶಾಲೆಗೆ ಹೋಗಬೇಕಿತ್ತು ಈಗ ಅಸೂಯೆ ಪಟ್ಟು ಪ್ರಯೋಜನ ಇಲ್ಲ" ಎಂದು ನಕ್ಕುಬಿಟ್ಟರು. ನಂತರ ಸುಬ್ಬಣ್ಣ ತೆಂಗಿನ ಮರ ಹತ್ತಿ ತೆಂಗಿನಕಾಯಿ ತೆಗೆದು. ಪ್ರಿನ್ಸಿಪಾಲರ ಹತ್ತಿರ ಕೂಲಿಗಾಗಿ ಕೈ ಚಾಚಿದ. ಆಗ ಪ್ರಿನ್ಸಿಪಾಲರು ಅವನ ಕೈಗೆ 100 ರೂಪಾಯಿ ನೋಟೊಂದನ್ನು ಕೊಟ್ಟರು. ಆಗ ಸುಬ್ಬಣ್ಣ "ನನ್ನ ಕೂಲಿ ನೂರು ರುಪಾಯಿ ಅಲ್ಲ 500 ರೂಪಾಯಿ" ಎಂದ. ಅದಕ್ಕೆ ಪ್ರಿನ್ಸಿಪಾಲರು "ಅದು ಜಾಸ್ತಿಯಾಯಿತು ಅಲ್ವ" ಎಂದರು. ಸುಬ್ಬಣ್ಣ "ಚಿಕ್ಕ ವಯಸ್ಸಿನಲ್ಲಿ ಕಾಗದ, ಪೆನ್ನು, ಶಾಲೆ, ಕಾಲೇಜು ಅಂತ ತಿರುಗಾಡುವಾಗ ತೆಂಗಿನ ಮರ ಹತ್ತಲು ಕೂಡ ಕಲಿಯಬೇಕು ಎಂದು ಆಲೋಚಿಸಬೇಕಿತ್ತು. ಪ್ರಿನ್ಸಿಪಾಲರು ಒಮ್ಮೆಗೆ ದಂಗಾಗಿ ಸುಬ್ಬಣ್ಣನಿಗೆ 500 ರೂ ಕೊಟ್ಟು ಮನೆಯ ಒಳಗೆ ನಡೆದರು.

( ಕೃಪೆ : ವಾಟ್ಸಪ್ )